ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಡಿಸೆಂಬರ್-೨೦೧೨ ಸಂಚಿಕೆ-೫



ಭಾರತೀಯರೇ ಭ್ರಷ್ಟಾಚಾರ ಗುಡಿಸಿಹಾಕೋಣ ಬನ್ನಿ!

ಜನಪದ ವಿಚಾರದಲ್ಲಿ

ಡಿಸೆಂಬರ್ - ೨೦೧೨

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ - ೨೦೧೨
ಸಂಪುಟ - ೧೩
ಸಂಚಿಕೆ - ೫

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಹಸಿರು ಸಾಮ್ರಾಜ್ಯ ಮೂಡಲಿ

ಓ! ನನ್ನ ಮುದ್ದು ಮರವೇ
ಇದೇನು?
ನಿನ್ನ ಹಣ್ಣುಗಳ ಹಿಂಡಿದರೆ
ರಕ್ತ ಬಸಿಯುತ್ತದೆ
ತಲೆ ಮೇಲಿನ ಹೂಗಳು
ಕೆಂಪು ಕಂಬನಿ ಸುರಿಯುತ್ತವೆ
ಓ! ಹಸಿರು ಮರವೆ ಮಾತನಾಡು
ಇಲ್ಲವೆ ಮೈ ಝಾಡಿಸಿ
ಹೂ ಅರಳಿಸು.
ನಿನ್ನೊಳಗಿನ ಜೀವ ರಸವ
ನೆತ್ತಿಯವರೆಗೆ ಚಿಮ್ಮಿಸಿ
ಹೊಸ ಚಿಗುರು ಹೊಮ್ಮಿಸು
ಯಾರೋ ಬಿತ್ತಿದ್ದ
ನಿನ್ನ ಜೀವನಾಡಿಯ ತಂತಿಗಳನ್ನೆಲ್ಲಾ
ಮೀಟಿ-ಹೊಸ ರಾಗ ಹಾಡು
ಮೈ ಮೇಲೆ ಬಿದ್ದ
ಕಚ್ಚುಗಳ ಗೋರಿ ಕಟ್ಟಿ,
ಹೊಸ ಹೊದಿಕೆ ಹಾಕು
ಒಮ್ಮೆಲೆ ಮೈಯೆಲ್ಲ ಒದರಿ ಬಿಡು
ಒಣಗಿದ, ಹಣ್ಣಾದ ಎಲೆಗಳೆಲ್ಲಾ
ಉದುರಿ ಹೋಗಲಿ
ಒಣಗಿದೆಲೆಗಳ ಮೇಲೆ
ಹಸಿರು ಸಾಮ್ರಾಜ್ಯ ಮೂಡಲಿ!

– *ಯ.ಗು.ನರಸಿಂಹನ್*, ಭದ್ರಾವತಿ

(ಸಾಭಾರ : ಮಯೂರ)

ವಿಚಾರ ದೀಪ್ತಿ

ನಿಸರ್ಗದ ನಿರ್ಲಕ್ಷ್ಯ ಬೇಡ

ಅಮೆರಿಕದ ಪೂರ್ವ ಕರಾವಳಿ ತೀರದಲ್ಲಿರುವ ನಗರಗಳು ಆಕ್ರಮಣಕ್ಕೆ ಸಿಲುಕಿವೆ. ಇದೇನು ಕ್ಯೂಬಾ, ಇರಾನ್‌ನಂತಹ ಅಮೆರಿಕ ವಿರೋಧಿ ರಾಷ್ಟ್ರಗಳು ನಡೆಸಿರುವಂತಹ ಆಕ್ರಮಣವಲ್ಲ. ಪ್ರಕೃತಿ ಮಾತೆ ನಡೆಸಿರುವ ಭಾರಿ ಆಕ್ರಮಣದ ಅಬ್ಬರ ಇದು. 'ಸ್ಯಾಂಡಿ' ಚಂಡಮಾರುತದ ಆಕ್ರಮಣದಲ್ಲಿ ನ್ಯೂಜೆರ್ಸಿ ಹಾಗೂ ನ್ಯೂಯಾರ್ಕ್ ರಾಜ್ಯಗಳು ನಲುಗಿವೆ. ಜನಜೀವನ ಪೂರ್ಣ ಅಸ್ತವ್ಯಸ್ತಗೊಂಡಿದ್ದು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಸ್ಥಗಿತಗೊಂಡಿದೆ. ಸಾವಿರಾರು ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ರದ್ದು ಮಾಡಲಾಗಿದೆ. ಜಗತ್ತಿಗೇ 'ದೊಡ್ಡಣ್ಣ' ನೆನಿಸಿದ ಅಮೆರಿಕದಂತಹ ಅಮೆರಿಕದಲ್ಲೇ ಅನೇಕ ಕಡೆ ವಿದ್ಯುತ್ ಇಲ್ಲದೆ ಕತ್ತಲೆ ಆವರಿಸಿದೆ. ಆರ್ಥಿಕ ಬಲಿಷ್ಠತೆಯ ಸಂಕೇತವಾದ ನ್ಯೂಯಾರ್ಕ್ ಷೇರು ವಿನಿಮಯ ಕೇಂದ್ರದ ಬಾಗಿಲೂ ಮುಚ್ಚಿದೆ. ಪ್ರಕೃತಿಯ ರೌದ್ರ ನರ್ತನದ ಮುಂದೆ ಆರ್ಥಿಕತೆಯ ದೈತ್ಯಶಕ್ತಿಯೂ ತಲೆಬಾಗುವಂತಹ ಸ್ಥಿತಿ ಇದು. 'ಸ್ಯಾಂಡಿ' ಚಂಡಮಾರುತದಿಂದ ಶತಕೋಟಿ ಡಾಲರ್ ಆರ್ಥಿಕ ನಷ್ಟ ಸಂಭವಿಸುವ ಸಾಧ್ಯತೆಗಳಿವೆ ಎಂಬಂಥ ವಿಶ್ಲೇಷಣೆಗಳೂ ನಡೆದಿವೆ.

ಬಹುಶಃ ಸ್ಯಾಂಡಿ ಚಂಡಮಾರುತ ಅಮೆರಿಕವನ್ನಪಳಿಸಿದ ಭಾರಿ ಚಂಡಮಾರುತ ಎಂಬಂಥ ದಾಖಲೆಯೂ ಸೃಷ್ಟಿಯಾಗಿದೆ. ಸಮುದ್ರದ ಅಲೆಗಳು ಅಡಿಗಳಷ್ಟು ಎತ್ತರದವರೆಗೆ ತೀರವನ್ನಪ್ಪಳಿಸಿವೆ. ಏರುತ್ತಿರುವ ಜಾಗತಿಕ ತಾಪಮಾನ ನಿಸರ್ಗದ ಈ ಮುನಿಸಿಗೆ ಕಾರಣವೆ? ಈ ಬಗ್ಗೆ ಚರ್ಚೆಗಳು ಮುಂದುವರಿಯುತ್ತಲೇ ಇವೆ. ಹೆಚ್ಚುತ್ತಿರುವ ಜಾಗತಿಕ ತಾಪಮಾನ ಚಂಡಮಾರುತಗಳು ಪದೇಪದೇ ಮರುಕಳಿಸುವುದಕ್ಕೆ ಕಾರಣವಾಗುತ್ತವೆ. ಅವುಗಳ ತೀವ್ರತೆಯೂ ಹೆಚ್ಚಿರುತ್ತವೆ ಎನ್ನುತ್ತಾರೆ ಹವಾಮಾನ ವಿಜ್ಞಾನಿಗಳು. ಆದರೆ ಈ ವಾದ ಸಮರ್ಥನೆಗೆ ಸಾಕಷ್ಟು ಪುರಾವೆಗಳಿಲ್ಲ ಎಂದು ಅಮೆರಿಕದ ಆಡಳಿತ ಈ ಬಗ್ಗೆ ನಿರ್ಲಕ್ಷ್ಯವನ್ನು ತೋರುತ್ತಲೇ ಬಂದಿದೆ. ಐಷಾರಾಮಿ ಭೋಗದ ಜೀವನಶೈಲಿಗಳಿಗೆ ತಮ್ಮನ್ನೊಪ್ಪಿಸಿಕೊಂಡಿರುವ ಶ್ರೀಮಂತ ಅಮೆರಿಕನ್ನರು ಇಂಗಾಲದ ಹೊರಸೂಸುವಿಕೆಯಿಂದ ಪರಿಸರ ಹಾಗೂ ಓಝೋನ್ ಪದರದ ಮೇಲಾಗುವ ಅಪಾಯವನ್ನು ಕಡೆಗಣಿಸುವುದು ಮುಂದುವರಿದಿದೆ. ರಲ್ಲಿ ನ್ಯೂ ಆರ್ಲೀನ್ಸ್ ಮೇಲೆ 'ಕತ್ರಿನಾ' ಚಂಡಮಾರುತ ಅಪ್ಪಳಿಸಿದ್ದ ಸಂದರ್ಭದಲ್ಲಿ ಅಮೆರಿಕದ ಸಿದ್ಧತೆ ಸಾಕಷ್ಟಿರದೆ ಅಮೆರಿಕದ ವರ್ಚಸ್ಸು ನುಚ್ಚುನೂರಾಗಿತ್ತು. ಇರಾಕ್ ಮೇಲಿನ ಸೈನಿಕ ಕಾರ್ಯಾಚರಣೆಗೆ ಹಣ, ಶಕ್ತಿಯನ್ನು ನೀರಿನಂತೆ ಹರಿಸಿದ್ದ ಅಮೆರಿಕ ಕತ್ರಿನಾ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಸಾರ್ವಜನಿಕ ನೆರವು ಕೋರುವಂತಾಗಿದ್ದುದನ್ನೂ ಇಲ್ಲಿ ಸ್ಮರಿಸಬಹುದು. ಅಭಿವೃದ್ಧಿಯ ಪಥದಲ್ಲಿ ಪ್ರಕೃತಿಯನ್ನು ಮರೆಯುವುದು ವಿನಾಶಕಾರಿ. ಇದಕ್ಕಾಗಿ ಮಾನವ ತೆರಬೇಕಾದ ಬೆಲೆ ದುಬಾರಿಯದಾಗಿರುತ್ತದೆ ಎಂಬುದನ್ನು ಇಂತಹ ನೈಸರ್ಗಿಕ ವಿಪತ್ತುಗಳು ನಮಗೆ ಪದೇಪದೇ ನೆನಪಿಸುತ್ತಲೇ ಇರುತ್ತವೆ. ಇವು ಯೋಜನೆಗಳನ್ನು ರೂಪಿಸುವವರಿಗೆ ದೊಡ್ಡ ಪಾಠವಾಗಬೇಕು. ಪ್ರಕೃತಿಯ ಮುಂದೆ ಎಲ್ಲರೂ ಕುಬ್ಜರೇ ಎಂಬ ಅರಿವಿನ ಬೆಳಕು ಎಲ್ಲರಲ್ಲೂ ಮೂಡಬೇಕು. (ಸಾಭಾರ : ಪ್ರಜಾವಾಣಿ)

ಭಾರತೀಯರೇ
ಭ್ರಷ್ಟಾಚಾರ ಗುಡಿಸಿಹಾಕೋಣ ಬನ್ನಿ!

– ಸುರೇಂದ್ರ ಕೌಲಗಿ

(ಅಬ್ರಹಾಂ ಲಿಂಕನ್ ಹೇಳಿಕೆ ಪ್ರಕಾರ ಪ್ರಜಾಪ್ರಭುತ್ವ ಎಂಬುದು ಜನರಿಂದ, ಜನರಿಗಾಗಿ ಇರುವುದಾದರೆ ನಮ್ಮ ದೇಶ ಅದಕ್ಕೆ ಅರ್ಹವಾಗಿಲ್ಲ.)

ಭ್ರಷ್ಟಾಚಾರ ಇಂದು ಭಾರತದ ಮೊದಲ ಶತ್ರು. ಈ ಶತ್ರು ಸ್ವಾತಂತ್ರ್ಯ ಬಂದಾಗಲೇ ಜನ್ಮತಾಳಿ ಈಗ ಹೆಮ್ಮರವಾಗಿ ಬೆಳೆದಿದೆ. ದೇಶದ ಆಡಳಿತವೆಂದರೆ ಭ್ರಷ್ಟಾಚಾರ ಎಂದೇ ಅರ್ಥೈಸುವಷ್ಟರ ಮಟ್ಟಿಗೆ ಬೆಳೆದಿದೆ. ದೇಶ ಹಾಕಿಕೊಂಡಿರುವ ಅಭಿವೃದ್ಧಿ ಯೋಜನೆಗಳು ಕೈಗೂಡಬೇಕಾದರೆ, ಅವು ಜನರಿಗೆ ಪ್ರಯೋಜನಕಾರಿಯಾಗಬೇಕಾದರೆ ಭ್ರಷ್ಟಾಚಾರವೆಂಬ ಶತ್ರುವನ್ನು ನಿರ್ನಾಮ ಮಾಡಲೇಬೇಕು. ಸರ್ಕಾರ ಅಭಿವೃದ್ಧಿಗಾಗಿ ಖರ್ಚು ಮಾಡುವ ಒಂದು ರೂಪಾಯಿಯಲ್ಲಿ ಅರವತ್ತು ಪೈಸೆಯಷ್ಟು ಭಾಗ ಭ್ರಷ್ಟಾಚಾರದಿಂದ ಸೋರಿ ಹೋಗುತ್ತದೆಂದು ರಾಜೀವ್ ಗಾಂಧೀ ಪ್ರಧಾನಮಂತ್ರಿಯಾಗಿದ್ದಾಗಲೇ ಹೇಳಿದ್ದರು. ಭ್ರಷ್ಟಾಚಾರದ ಪ್ರಮಾಣ ಇಂದಿಗೂ ಈ ಸಂಖ್ಯೆಯ ಸುತ್ತಮುತ್ತಲೇ ತಿರುಗುತ್ತಿದೆ. ಅದು ದಿನಕಳೆದಂತೆ ಹೆಚ್ಚಾಗುತ್ತಿದೆ ಹೊರತು ಕಡಿಮೆಯಾಗುತ್ತಿಲ್ಲ. ಅಣ್ಣಾ ಹಜಾರೆಯವರು ಭ್ರಷ್ಟಾಚಾರ ವಿರುದ್ಧ ದೊಡ್ಡ ಆಂದೋಲನವನ್ನೇ ನಡೆಸಿದರು. ಭಾರತೀಯ ಜನರಲ್ಲಿದ್ದ ಭ್ರಷ್ಟಾಚಾರ ವಿರುದ್ಧದ ಅಸಂತೋಷ, ಸಿಟ್ಟು ಮತ್ತು ಬೇಸರ ಹೊರಹೊಮ್ಮಲು ದೇಶಾದ್ಯಂತ ಜನಾಂದೋಲನ ಸಹಜವಾಗಿ ರೂಪಗೊಂಡಿತು. ಒಣಗಿದ ಮೆದೆಗೆ ಬೆಂಕಿಕಡ್ಡಿ ಗೀರಿದಂತಾಯಿತು. ಕೇಂದ್ರ ಸರ್ಕಾರ ಜನತಾ ಆಂದೋಲನದಿಂದ ಭೀತಿಗೊಂಡು ಈ ಜನತಾ ಚಳುವಳಿ ಎಲ್ಲಿ ತನ್ನ ಅಸ್ತಿತ್ವಕ್ಕೆ ಮುಳುವಾಗುವುದೊ ಎಂದು ಭಾವಿಸಿ ಆಂದೋಲನವನ್ನು ಹತ್ತಿಕ್ಕಿತು. ಜೆ.ಪಿ.ಯವರ ಸಂಪೂರ್ಣಕ್ರಾಂತಿ ಆಂದೋಲನವನ್ನು ಇಂದಿರಾ ಗಾಂಧೀ ಹತ್ತಿಕ್ಕಿದಂತೆ ಭ್ರಷ್ಟಾಚಾರ ವಿರೋಧಿ ಆಂದೋಲನ ಹತ್ತಿಕ್ಕಲ್ಪಟ್ಟಿತು. ನವ ಭಾರತದ ಕೆಲವು ವಿಚಾರವಂತರು ಮತ್ತು ಚಿಂತಕರು ಸೇರಿ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ 'ಭ್ರಷ್ಟಾಚಾರ ವಿರುದ್ಧ ಭಾರತ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಸ್ಥಾಪನೆಯಲ್ಲಿ ಹಿರಿಯ ನಿವೃತ್ತ ಅಧಿಕಾರಿ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಅರವಿಂದ ಕೇಜ್ರೀವಾಲ್ ಪ್ರಮುಖ ಪಾತ್ರ ವಹಿಸಿದ್ದರು. ಇವರೊಂದಿಗೆ ಪ್ರಶಾಂತ್ ಭೂಷಣ್, ಸಿಸೋಡಿಯಾ, ಕಿರಣ್ ಬೇಡಿ, ಸಂತೋಷ್ ಹೆಗ್ಡೆ ಮುಂತಾದವರು ಜೊತೆಗೂಡಿದರು.

ಭ್ರಷ್ಟಾಚಾರ ಕೇವಲ ಹಣಕಾಸಿಗೆ ಸಂಬಂಧಿಸಿದ್ದಲ್ಲ. ಸ್ವಜನ ಪಕ್ಷಪಾತ,

ಜಾತೀಯತೆ, ಸರ್ಕಾರದ ನಿಯಮಗಳ ಉಲ್ಲಂಘನೆ, ಹಣದ ದುಂದುಗಾರಿಕೆ ಮುಂತಾದ ವಿಷಯಗಳು ಸೇರುತ್ತವೆ. ಈ ಪ್ರಕಾರದ ಭ್ರಷ್ಟಾಚಾರ ಈಗ ಹೆಚ್ಚಾಗಿ ಹಬ್ಬುತ್ತಿದೆ. ಇತ್ತೀಚೆಗೆ ವಿದೇಶಾಂಗ ಮಂತ್ರಿಯಾಗಿರುವ ಸಲ್ಮಾನ್ ಖುರ್ಷಿದ್ ಸರ್ಕಾರದ ಹಣವನ್ನು ತಮ್ಮ ಒಂದು ಟ್ರಸ್ಟಿನ ಸೇವಾಕಾರ್ಯಕ್ಕೆ ದುರುಪಯೋಗಪಡಿಸಿಕೊಂಡ ಆಪಾದನೆಯಲ್ಲಿ ಸಿಲುಕಿಕೊಂಡಿದ್ದಾರೆ. ಈ ಆಪಾದನೆಯನ್ನು ಅರವಿಂದ್ ಕೇಜ್ರೀವಾಲ್ ಹೊರಿಸಿದ್ದಾರೆ. ಇದು ಆಧಾರವಿಲ್ಲದ ಆರೋಪ ಎಂಬ ಮಾತನ್ನು ಸಲ್ಮಾನ್ ಖುರ್ಷಿದ್ ಹೇಳಿರುವುದಾದರೂ ಒಬ್ಬ ವಿದೇಶಾಂಗ ಮಂತ್ರಿ ಇಂಥ ಕಳಂಕವನ್ನು ಹೊತ್ತು ಕರ್ತವ್ಯ ನಿರ್ವಹಿಸುವುದು ಕಷ್ಟ ಸಾಧ್ಯವೇ ಸರಿ. ತೇಜೋವಧಿತನಾಗಿ ಕೆಲಸ ಮಾಡುವುದಕ್ಕೆ ನೈತಿಕತೆ ಇರುವುದಿಲ್ಲ. ಈಗ ನಮ್ಮ ದೇಶಕ್ಕೆ ಭ್ರಷ್ಟಾಚಾರ ಆರೋಪ ಹೊತ್ತ ವಿದೇಶಾಂಗ ಮಂತ್ರಿಯನ್ನು ಹೊಂದುವ ದೌರ್ಭಾಗ್ಯ ಬಂದಿದೆ. ಇತ್ತೀಚಿಗೆ ಕೇಂದ್ರ ಸರ್ಕಾರದ ಅಲ್ಪ ಸಂಖ್ಯಾತರ ಮಂತ್ರಾಲಯವು ದೇಶದ ವಿವಿಧೆಡೆ ಐದು ಅಲ್ಪಸಂಖ್ಯಾತರ ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ಖಾಸಗಿ ಮತ್ತು ಸಾರ್ವಜನಿಕರ ನೆರವಿನಿಂದ ಸ್ಥಾಪಿಸಲು ಯೋಚಿಸಿದೆ. ಅಲ್ಲಿ ಅಲ್ಪ ಸಂಖ್ಯಾತ ಕೋಮಿಗೆ ಸೇರಿದ ಶೇ.೫೦ರಷ್ಟು ವಿದ್ಯಾರ್ಥಿಗಳಿಗೆ ಸ್ಥಳವನ್ನು ಕಾಯ್ದಿರಿಸಲಾಗಿದೆ. ಒಂದು ವಿಶ್ವವಿದ್ಯಾಲಯವನ್ನು ಕರ್ನಾಟಕದ ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲಾಗುವುದು. ಅದಕ್ಕೆ ಟಿಪ್ಪು ಸುಲ್ತಾನ್ ವಿಶ್ವವಿದ್ಯಾಲಯ ಎಂದು ನಾಮಕರಣಮಾಡಲಾಗುವುದು. ಉಳಿದ ವಿಶ್ವವಿದ್ಯಾಲಯಗಳನ್ನು - ಪಶ್ಚಿಮ ಬಂಗಾಳ, ಬಿಹಾರ, ಮಧ್ಯಪ್ರದೇಶ ಮತ್ತು ಜಮ್ಮು-ಕಾಶ್ಮೀರದಲ್ಲಿ ಸ್ಥಾಪಿಸಲಾಗುವುದು. ಇವುಗಳನ್ನು ಮೌಲಾನಾ ಅಜಾದ್ ಎಜುಕೇಷನ್ ಫೌಂಡೇಷನ್ ಸಹಕಾರದೊಂದಿಗೆ ಸ್ಥಾಪಿಸಲಾಗುವುದು. ಆ ಫೌಂಡೇಷನ್ ಅಲ್ಪಸಂಖ್ಯಾತರ ಮಂತ್ರಾಲಯದ ಅಧೀನದಲ್ಲಿ ಕಲಸ ಮಾಡುತ್ತದೆ. ಈಗಾಗಲೇ ಬನಾರಸ್‌ನಲ್ಲಿ ಹಿಂದೂ ವಿಶ್ವವಿದ್ಯಾನಿಲಯವಿದೆ. ಅಲಿಘಡ್‌ನಲ್ಲಿ ಮುಸ್ಲಿಂ ವಿಶ್ವವಿದ್ಯಾನಿಲಯವಿದೆ. ಇನ್ನು ಐದು ವಿಶ್ವವಿದ್ಯಾನಿಲಯಗಳ ಹೆಸರನ್ನು ಅಲ್ಪಸಂಖ್ಯಾತ ಆಧಾರದ ಮೇಲೆ ಸ್ಥಾಪಿತವಾದರೆ ದೇಶದ ಭವಿಷ್ಯ ಏನಾಗುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಏಕೆಂದರೆ ಬನಾರಸ್ ಮತ್ತು ಅಲಿಘಡ್‌ನಲ್ಲಿರುವ ವಿದ್ಯಾನಿಲಯಗಳು ಆಗಾಗ್ಗೆ ಗಲಭೆಗಳಿಗೆ ತುತ್ತಾಗುತ್ತಿವೆ. ಆ ವಿಶ್ವವಿದ್ಯಾನಿಲಯಗಳಲ್ಲಿ ಪೋಲೀಸ್ ಠಾಣೆಗಳು ಸ್ಥಾಪಿಸಲ್ಪಟ್ಟಿವೆ. ಶಿಕ್ಷಣವೆಂಬುದು ಧರ್ಮಾತೀತವಾದಂಥ ವಿಷಯ. ಮನುಷ್ಯನನ್ನು ನಾಗರೀಕನನ್ನಾಗಿ ಮಾಡುತ್ತ ಹೋಗುವುದೇ ಶಿಕ್ಷಣದ ಮತ್ತು ಶಿಕ್ಷಣ ಸಂಸ್ಥೆಗಳ ಕರ್ತವ್ಯ. ಸಂಗೀತ, ನೃತ್ಯ ಮತ್ತು ಇತರ ಲಲಿತಕಲೆಗಳು ಯಾವ ರೀತಿ ಜಾತ್ಯತೀತ, ಧರ್ಮಾತೀತ, ದೇಶಾತೀತ ವರ್ಣಾತೀತ ಆಗಿವೆಯೊ ಮತ್ತು ಹೇಗೆ ಅವುಗಳನ್ನು ಯಾವುದೇ ಸೂತ್ರದಿಂದ ವಿಭಜಿಸಲು ಸಾಧ್ಯವಿಲ್ಲವೊ ಅದೇ ರೀತಿ ಶಿಕ್ಷಣವು ಯಾವುದೇ ಕಾರಣದಿಂದಾಗಲಿ ವಿಭಜನಾತಿತವಾಗಿದೆ. ಈಗ ಕೇಂದ್ರ ಸರ್ಕಾರ ಅಲ್ಪಸಂಖ್ಯಾತರ ಹೆಸರಿನಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುತ್ತಿರುವುದು ಮತ್ತು ಅರ್ಧದಷ್ಟು ಭಾಗವನ್ನು ಅಲ್ಪಸಂಖ್ಯಾತ ಜನಾಂಗಕ್ಕೇ ಸೀಮಿತಗೊಳಿಸುವುದು ರಾಜಕೀಯ ಭ್ರಷ್ಟಾಚಾರದ ದೊಡ್ಡ ಸಾಕ್ಷಿಯಾಗಿದೆ. ನಮಗೆ ಇಂದು ಬೇಕಾಗಿರುವುದು

ರಾಷ್ಟ್ರೀಯತೆ ವಿಚಾರ ಮತ್ತು ಭಾವನೆ ಹಾಗೂ ಮೌಲ್ಯಗಳನ್ನು ಕಲಿಸುವ ಶಿಕ್ಷಣ. ಸ್ವಾತಂತ್ರ್ಯ ಬಂದಾಗಿನಿಂದಲೂ ಮತ್ತು ಪಂಚವಾರ್ಷಿಕ ಯೋಜನೆಗಳ ಮೂಲಕ ಅಭಿವೃದ್ಧಿಯ ಪ್ರಕ್ರಿಯೆ ಪ್ರಾರಂಭವಾದಾಗಿನಿಂದಲೂ ಜೊತೆ ಜೊತೆಗೆಯೇ ಭ್ರಷ್ಟಾಚಾರ ಬೆಳೆಯುತ್ತ ಬಂದಿದೆ. ಇದಕ್ಕೆ ಮುಖ್ಯಕಾರಣ ಭ್ರಷ್ಟಾಚಾರವನ್ನು ಆಡಳಿತದಿಂದ ಹಾಗೂ ರಾಜಕೀಯ ಕ್ಷೇತ್ರದಿಂದ ತೆಗೆದುಹಾಕುವ ಬಗ್ಗೆ ದೇಶದ ರಾಜಕೀಯ ಪಕ್ಷಗಳಲ್ಲಿ ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದು. ರಾಜಕೀಯ ಪಕ್ಷಗಳು ಭ್ರಷ್ಟಾಚಾರ ಎಂಬುದನ್ನು ಅಪವಿತ್ರ ವಸ್ತುವೆಂದು ಭಾವಿಸಿದ್ದರೆ, ಭ್ರಷ್ಟಾಚಾರ ಎಂದೋ ನಿರ್ಮೂಲನವಾಗಬಹುದಿತ್ತು. ಚುನಾವಣೆಯೇ ಭ್ರಷ್ಟಾಚಾರದ ಗಂಗೋತ್ರಿ ಎಂದು ಜಯಪ್ರಕಾಶ ನಾರಾಯಣರು ಹೇಳಿದ್ದರು. ಎಲ್ಲಿಯವರೆಗೆ ಚುನಾವಣೆಯಲ್ಲಿ ಭ್ರಷ್ಟಾಚಾರ ಇರುವುದೊ ಅಲ್ಲಿಯವರೆಗೆ ನಮ್ಮ ದೇಶದ ಆಡಳಿತ ಭ್ರಷ್ಟಾಚಾರದಿಂದ ಮುಕ್ತವಾಗಲಾರದು. ಲೋಕಪಾಲ್ ವ್ಯವಸ್ಥೆಯನ್ನು ನಿರ್ಮಿಸಲು ನಮ್ಮ ರಾಜಕೀಯ ಪಕ್ಷಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಈ ವಿಷಯ ೨೨ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಬಲವಾದ ಲೋಕಪಾಲ ಮಸೂದೆಯನ್ನು ಖಂಡಿತ ಸಂಸತ್ತಿನ ಮುಂದೆ ತರಲಾಗುವುದೆಂದು ಪ್ರಧಾನಮಂತ್ರಿ ಸಿಂಗ್ ಹೇಳಿದ್ದಾರೆ. ಜನಲೋಕಪಾಲ್ ಮಸೂದೆ ತರಬೇಕೆಂಬ ಉದ್ದೇಶ್ಯದಿಂದ ಅಣ್ಣಾ ಹಜಾರೆ ಉಪವಾಸ ಕುಳಿತ್ತಿದ್ದರು. ಅಣ್ಣಾ ಹಜಾರೆಯವರಿಗೆ ಮಾತುಕೊಟ್ಟು ಅವರ ಉಪವಾಸವನ್ನು ಸ್ಥಗಿತಗೊಳಿಸಿದರು. ಆದರೆ ಸರ್ಕಾರದಿಂದ ಲೋಕಪಾಲ್ ಮಸೂದೆ ಮಂಡನೆ ಆಗಲೇ ಇಲ್ಲ. ಅದರೆ ಅದೇ ರಾಜಕೀಯ ಪಕ್ಷಗಳು ತಮ್ಮ ಲೋಕಸಭಾ ಸದಸ್ಯರ ಸಂಬಳ, ಭತ್ಯೆ ಇತ್ಯಾದಿಯನ್ನು ಹೆಚ್ಚಿಸಿಕೊಳ್ಳಲು ಕೆಲವೇ ನಿಮಿಷಗಳಲ್ಲಿ ಕೆಲಸಮಾಡುತ್ತವೆ. ಇದಕ್ಕಿಂತಲೂ ಪ್ರಜಾಪ್ರಭುತ್ವದ ಅವಹೇಳನ ಇನ್ನೇನು ಇರಲು ಸಾಧ್ಯ.

ಭಾರತದ ರಾಜಕೀಯ ಪಕ್ಷಗಳಿಗೆ ರಾಜಕೀಯ ಅಧಿಕಾರ ಪಡೆಯುವುದೊಂದೇ ಗುರಿಯಾಗಿದೆ. ರಾಜಕೀಯ ಅಧಿಕಾರ ಹೊಸ ಸಮಾಜ ನಿರ್ಮಾಣಕ್ಕಾಗಿ, ಹೊಸ ಮೌಲ್ಯಗಳ ಸ್ಥಾಪನೆಗಾಗಿ. ಈ ಪ್ರಕಾರದ ಆಯಾಮಗಳುಳ್ಳ ಸಾಧನ ರಾಜಕೀಯ ಅಧಿಕಾರವೆಂಬುದು ರಾಜಕೀಯ ಪಕ್ಷಗಳ ಮುಖಂಡರಿಗೆ ಇನ್ನೂ ಮನವರಿಕೆ ಆಗದಿರುವುದು ಪ್ರಜಾಪ್ರಭುತ್ವದ ದುರ್ದೈವ. ಅಧಿಕಾರದ ತಮ್ಮ ಸ್ಥಾನವನ್ನು ಸ್ವಂತ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವುದು ರಾಜಕಾರಣಿಗಳಿಗೂ ಮತ್ತು ಅಧಿಕಾರಿಗಳಿಗೂ ಸರ್ವೇಸಾಮಾನ್ಯವಾದ ವಿಷಯವಾಗಿದೆ. ಅನೇಕ ಮುಖ್ಯಮಂತ್ರಿಗಳು ತಮ್ಮ ಮಕ್ಕಳ ಮದುವೆಯನ್ನು ವೈಭವಯುತವಾಗಿ ನಡೆಸಿದ ಉದಾಹರಣೆಗಳು ಬಹಳಷ್ಟಿವೆ. ಮದುವೆಯ ಕಾರ್ಯಕ್ರಮಕ್ಕೆ ಸರ್ಕಾರದ ಯಂತ್ರವನ್ನು ಬಳಸಿಕೊಳ್ಳುವುದಕ್ಕೆ ಅವರಿಗೆ ಯಾವ ಸಂಕೋಚವೂ ಇರುವುದಿಲ್ಲ. ತುಂಬ ಇತ್ತೀಚಿನ ಉದಾಹರಣೆ ಆಂಧ್ರಪ್ರದೇಶದ ಸಾರಿಗೆ ಸಚಿವರ ಮಗಳ ವಿವಾಹ. ವಿವಾಹಸ್ಥಳವನ್ನು ಸಿಂಗರಿಸಲೆಂದೇ ಹೂವಿಗಾಗಿ ಒಂದು ಕೋಟಿ ರುಪಾಯಿ ವೆಚ್ಚ ಮಾಡಲಾಯಿತು. ಇಡೀ ರಾಜ್ಯ ಸಂಪುಟವೇ ಈ ವಿವಾಹಕ್ಕೆ ಬಂದಿತ್ತು. ವಿವಾಹದಲ್ಲಿ ಹಾಜರಿರಲು ಸಚಿವರು ಸರ್ಕಾರಿ ಕೆಲಸದ ನಿಮಿತ್ತದ ನಾಟಕವನ್ನು ಹೂಡಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲಿಷ್ ಅಧಿಕಾರಿಗಳು ದುಂದುವೆಚ್ಚ ಮಾಡುತ್ತಿದ್ದುದ್ದನ್ನು ಗಾಂಧೀ ಖಂಡಿಸುತ್ತಿದ್ದರು. ಭಾರತ ದೇಶದ ಒಬ್ಬ ಸಾಮಾನ್ಯ ರೈತನ ಆದಾಯ ದಿನವೊಂದಕ್ಕೆ ಎರಡಾಣೆ ಮಾತ್ರ ಇರುವಾಗ ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್ ದಿನವೊಂದಕ್ಕೆ ಏಳುನೂರು ರೂ ಸಂಬಳ ಪಡೆಯುತ್ತಿದ್ದದ್ದನ್ನು ಖಂಡಿಸಿದ್ದರು. ಆದರೆ ಸ್ವತಂತ್ರ ಭಾರತದಲ್ಲಿ ಎಲ್ಲ ಮಂತ್ರಿಗಳು, ಅಧಿಕಾರಿಗಳು, ಇಂದಿನ ಭಾರತೀಯ ಪ್ರಜೆಯ ದಿನವೊಂದರ ಖರ್ಚು ಇಪ್ಪತ್ತು ರೂಪಾಯಿ ಮೀರದಿರುವಾಗ ದುಂದುವೆಚ್ಚ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ನಮಗೆ ಒಳ್ಳೆಯ ಆಡಳಿತವೇನೊ ಬೇಕು ಆದರೆ ಸ್ವತಂತ್ರ ನಿರ್ವಾಹಕರು ಮತ್ತು ನಿರ್ಬಂಧಕರು ಬೇಕು. ಸ್ವಾತಂತ್ರ್ಯ ಬಂದ ಮೇಲೆ ಆಡಳಿತ ಯಂತ್ರ ಬದಲಾಗಬೇಕಿತ್ತು. ಆದರೆ ನಮ್ಮ ಸ್ವತಂತ್ರ ಭಾರತದ ಮುಖಂಡರು ಇಂಗ್ಲೀಷರ ಕಾಲದಲ್ಲಿದ್ದ ವಿದೇಶಿ ಸರ್ಕಾರದ ಸೇವೆ ಮಾಡುತ್ತಿದ್ದ ಅಧಿಕಾರಶಾಹಿ ಪದ್ಧತಿಯನ್ನೇ ಉಳಿಸಿಕೊಂಡಿತು. ಅಂದಿನ ಅಧಿಕಾರಶಾಹಿಗೆ ಜನತೆಯ ಮೇಲೆ ದಬ್ಬಾಳಿಕೆ ಮಾಡುವುದು ಗೊತ್ತಿತ್ತೇ ವಿನಃ ಸೇವಕನಾಗಿ ಕೆಲಸಮಾಡುವುದು ಗೊತ್ತಿರಲಿಲ್ಲ. ಆದ್ದರಿಂದಲೇ ಇಂದಿನ ಕೇಂದ್ರ ಸರ್ಕಾರದ ಬಹುಹೆಮ್ಮೆಯ ಯೋಜನೆಯಾದ 'ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಭ್ರಷ್ಟಾಚಾರದ ಕೂಪವೇ ಆಗಿದೆ. ಆ ಯೋಜನೆಯಲ್ಲಿಯ ಭ್ರಷ್ಟಾಚಾರ ಕುರಿತು ಓರ್ವ ಓದುಗ ದಿನಪತ್ರಿಕೆಯೊಂದರಲ್ಲಿ ಬರೆದದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಅವರ ಪ್ರಕಾರ "ಗ್ರಾಮ ಪಂಚಾಯತಿಗಳ ಎಲ್ಲ ಯೋಜನೆಗಳಲ್ಲಿ ಭ್ರಷ್ಟಾಚಾರ ಸಾಮಾನ್ಯವಾಗಿದೆ. ಭ್ರಷ್ಟ ಗ್ರಾಮ ಪಂಚಾಯತಿ ಸದಸ್ಯರು, ಊರಿನ ಪ್ರಮುಖರು ದಿನಗೂಲಿ ಕೆಲಸಕ್ಕೆ ಹೋಗದ ವ್ಯಕ್ತಿಗಳ ಹೆಸರಿನಲ್ಲಿ ಸುಳ್ಳು ಹಾಜರಾತಿ ತೋರಿಸಿ ಹಣ ಪಡೆಯುತ್ತಿದ್ದಾರೆ".ಈ ರೀತಿ ನಮ್ಮ ದೇಶದ ಕೆಳಮಟ್ಟದ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕುಲದೀಪ್ ನಯ್ಯರ್ ತಮ್ಮ ಆತ್ಮಕಥೆ 'ಒಂದು ಜೀವನ ಸಾಲದು' ಎಂಬ ಪುಸ್ತಕದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಉದ್ದೇಶ್ಯದ ಮಸೂದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ ಚರ್ಚಿಲ್‌ರವರು ಕೋಪದಿಂದ ಆಡಿದ ಮಾತನ್ನು ಉಲ್ಲೇಖಿಸಿದ್ದಾರೆ. ಆ ಮಾತು ಏನೆಂದರೆ "ದಗಾಕೋರರು, ದುಷ್ಟರು ಮತ್ತು ಲೂಟಿಕೋರರ ಕೈಗೆ ಅಧಿಕಾರ ಹೋಗುತ್ತಿದೆ. ಒಂದು ಸೀಸೆ ನೀರು, ಒಂದು ಚೂರು ಬ್ರೆಡ್ಡಿಗೆ ಕೂಡ ತೆರಿಗೆ ಕೊಡಬೇಕಾಗುತ್ತದೆ. ಉಸಿರಾಡುವ ಗಾಳಿ ಮಾತ್ರ ಉಚಿತ ಅಷ್ಟೆ". ಈ ಮಾತು ಎಮ್ ನರೇಗಾ ಯೋಜನೆಯಲ್ಲಿ ಅಕ್ಷರಶಃ ಪಾಲನೆಯಾಗುತ್ತಿದೆ. ಕೇಂದ್ರ ಸರ್ಕಾರ ಇಂಥ ಯೋಜನೆಗಾಗಿ ಕೋಟ್ಯಂತರ ಹಣವನ್ನು ಖರ್ಚು ಮಾಡುತ್ತಿದೆ. ಅದರಿಂದಾಗಿ ದೇಶದಲ್ಲಿ ಹಣದುಬ್ಬರ ಶೇ.೭ಕ್ಕೆ ಮುಟ್ಟುತ್ತಿದೆ. ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ತರಬಯಸುವ ವಿಶೇಷ ಆರ್ಥಿಕ ಸುಧಾರಣೆಗೆ ರಿಜರ್ವ್‌ಬ್ಯಾಂಕ್ ಅಡ್ಡಗಾಲು ಹಾಕುತ್ತಿದೆ. ಭ್ರಷ್ಟಾಚಾರ ಕುರಿತು ಗಾಂಧೀಜಿಯವರು ಯಾವುದಾದರೂ ಮಹತ್ವದ ಮಾತನ್ನು ಹೇಳಿದ್ದಾರೆಯೇ ಎಂದು ಹುಡುಕಲು ಪ್ರಯತ್ನಿಸಿದಾಗ ನಿರಾಶೆಯೇ ಕಾದಿತ್ತು. ಕಾರಣ ಏನು ಎಂದು ಯೋಚಿಸಲಾಗಿ ಸ್ವಾತಂತ್ರ್ಯ ಪೂರ್ವದಲ್ಲಿ

ಭಾರತೀಯರ ಕೈಯಲ್ಲಿ ಅಧಿಕಾರವಿರಲಿಲ್ಲ. ಗ್ರಾಮ ಪ್ರಧಾನವಾದ ಆರ್ಥಿಕ ವ್ಯವಸ್ಥೆಯಿತ್ತು. ಇನ್ನು ಇಂಥ ಕೆಲವು ಕಾರಣಗಳಿಂದ ಆಗ ಭ್ರಷ್ಟಾಚಾರವಿರಲಿಲ್ಲ. ಗಾಂಧೀಯವರು ರಾಜಕೀಯ ಅಧಿಕಾರದ ಬಗ್ಗೆ ಒಳ್ಳೆ ಸೂತ್ರವನ್ನು ತಿಳಿಸಿದ್ದಾರೆ. ಆ ಸೂತ್ರದಂತೆ ಸ್ವತಂತ್ರ ಭಾರತದ ರಾಜಕಾರಣಿಗಳು, ರಾಜಕೀಯ ಪಕ್ಷಗಳು ನಡೆದದ್ದೇ ಆದಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ಇರದೇ ಹೋಗಿದ್ದರೂ ಇಂದಿನ ಪ್ರಮಾಣದಷ್ಟು ಖಂಡಿತ ಇರುತ್ತಿರಲಿಲ್ಲ. ಗಾಂಧೀಜಿ ೧೯೩೧ರಲ್ಲಿ ಹೇಳಿದ್ದೇನೆಂದರೆ "ರಾಜಕೀಯ, ಅಧಿಕಾರ ಗುರಿಯಲ್ಲ ಆದರೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಜನರನ್ನು ಸಬಲರನ್ನಾಗಿ ಮಾಡುವ ಸಾಧನ". ಆದರೆ ಈಗ ಜನಸಾಮಾನ್ಯರನ್ನು ಸಬಲೀಕರಣಗೊಳಿಸುವುದರ ಬದಲು ಮಂತ್ರಿಗಳು ಅಧಿಕಾರಿಗಳು ಸಬಲರಾಗುತ್ತಿದ್ದಾರೆ.

ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಅಣ್ಣಾ ಹಜಾರೆ ಮತ್ತು ಅವರ ಸಹವರ್ತಿಗಳು 'ಭ್ರಷ್ಟಾಚಾರ ವಿರುದ್ಧ ಭಾರತ' ಸ್ಥಾಪಿಸಿ ಹೋರಾಟ ನಡೆಸಿದ್ದಾರೆ. ಅವರ ತಂಡದ ಪ್ರಮುಖ ಸದಸ್ಯರಲ್ಲೊಬ್ಬರಾದ ಅರವಿಂದ್ ಕೇಜ್ರೀವಾಲ್ ಹೊಸ ರಾಜಕೀಯ ಪಕ್ಷಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ಆ ಪ್ರಯತ್ನದ ಅಂಗವಾಗಿ ರಾಜಕಾರಣಿಗಳ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುತ್ತಿದ್ದಾರೆ. ಇಲ್ಲಿ ಒಂದು ಅಂಶ ಗಮನಿಸಬೇಕು. ರಾಜಕೀಯ ಪಕ್ಷಗಳಲ್ಲಿಯ ಭ್ರಷ್ಟಾಚಾರವನ್ನು ಮತ್ತೊಂದು ರಾಜಕೀಯ ಪಕ್ಷ ಕಟ್ಟುವುದರ ಮೂಲಕ ತಡೆಯಲು ಸಾಧ್ಯವಾಗಲಾರದು. ಆದ್ದರಿಂದ ಅರವಿಂದ್ ಕೇಜ್ರೀವಾಲ್ ಹೊಸ ರಾಜಕೀಯ ಪಕ್ಷವನ್ನು ಕಟ್ಟುವ ಬದಲು ಲೋಕನಾಯಕ ಜಯಪ್ರಕಾಶ್ ನಾರಾಯಣರ ಸಂಪೂರ್ಣಕ್ರಾಂತಿ ಆಂದೋಲನದಂತೆ ಹೋರಾಟ ಪ್ರಾರಂಭಿಸಬೇಕು. ಇದಕ್ಕೆ ಅಣ್ಣಾ ಹಜಾರೆಯವರ ನೇತೃತ್ವ ಪಡೆದುಕೊಂಡಲ್ಲಿ ಅನುಕೂಲ. ತುರ್ತುಪರಿಸ್ಥಿತಿ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತಿತು. ಆ ಸಮಯದಲ್ಲಿ ಜೆ.ಪಿ.ಯವರು ಜನತಾ ಪಕ್ಷವನ್ನು ಕಟ್ಟಿದರು. ಜನತಾ ಪಕ್ಷದ ನಾಯಕರ ಮೇಲೆ ನೈತಿಕ ಪ್ರಭಾವ ಉಂಟಾಗಲೆಂದು ಗಾಂಧೀ ಸಮಾಧಿ ಬಳಿ ಪ್ರತಿಜ್ಞೆ ಮಾಡಿಸಿದರು. ಏನೂ ಪ್ರಯೋಜನವಾಗಲಿಲ್ಲ. ಸ್ವಲ್ಪ ದಿನಗಳಲ್ಲಿಯೇ ಜನತಾ ಪಕ್ಷ ಇಲ್ಲದಂತಾಯಿತು. ಜೆ.ಪಿ.ಯವರ ಅನುಭವದ ಉದಾಹರಣೆ ನಮ್ಮ ಮುಂದೆ ಇದೆ. ಆದ್ದರಿಂದ ಕೇಜ್ರೀವಾಲ್ ಹೊಸ ರಾಜಕೀಯ ಪಕ್ಷ ಕಟ್ಟುವ ವಿಚಾರವನ್ನು ಕೈಬಿಟ್ಟು ಲೋಕಪಾಲ್ ಮಸೂದೆಗಾಗಿ ಪಟ್ಟು ಹಿಡಿಯಬೇಕು. 'ಭ್ರಷ್ಟಾಚಾರ ವಿರುದ್ಧ ಭಾರತ' ಸಂಘಟನೆಯಲ್ಲಿ ಎರಡು ಭಾಗಗಳಾಗಿವೆ. ಒಂದು ಗುಂಪು ಪಕ್ಷ ಕಟ್ಟ ಬೇಕೆಂದು ಹೇಳುತ್ತದೆ. ಇನ್ನೊಂದು ಗುಂಪು ರಾಜಕೀಯ ವ್ಯಕ್ತಿಗಳ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುವುದರ ಮೂಲಕ ಭ್ರಷ್ಟಾಚಾರ ನಿರ್ಮೂಲನೆ ಬಯಸುತ್ತದೆ. ಆದರೆ ಎರಡು ಗುಂಪುಗಳ ಉದ್ದೇಶ್ಯ ಭ್ರಷ್ಟಾಚಾರ ನಿರ್ಮೂಲನವೇ ಆಗಿದೆ. ಪರಿಸ್ಥಿತಿ ಹೀಗಿರುವಾಗ ಜನರು ಏನು ಮಾಡಬೇಕೆಂದು ಆಲೋಚಿಸಬೇಕಾಗಿದೆ. ಇವೆರಡು ಗುಂಪುಗಳು ಒಟ್ಟಿಗೆ ಸೇರಿ ಕೆಲಸ ಮಾಡಬೇಕೆಂದು ಸಂಬಂಧಪಟ್ಟವರಿಗೆ ತಿಳಿಸಬೇಕು. ಅಣ್ಣಾ ಹಜಾರೆ ಮತ್ತು ಕೇಜ್ರೀವಾಲ್ ಮತ್ತು ಜನತೆ ಒಟ್ಟಿಗೆ ಕೆಲಸ

ಮಾಡಿದಾಗ ಮಾತ್ರ ಭ್ರಷ್ಟಾಚಾರ ವಿರೋಧಿ ಆಂದೋಲನ ತೀವ್ರತೆ ಪಡೆಯಲು ಸಾಧ್ಯ. ಭ್ರಷ್ಟಾಚಾರ ನಿರ್ಮೂಲನೆ ಎರಡು ಹಂತಗಳಲ್ಲಿ ನಡೆಯಬೇಕೆಂದು ಅನಿಸುತ್ತದೆ. ಮೊದಲನೆಯದು ಜನಾಂದೋಲನದ ಮೂಲಕ. ಅಂದರೆ ಕಳೆದ ಏಪ್ರಿಲ್ ತಿಂಗಳಲ್ಲಿ ಅಣ್ಣಾ ಹಜಾರೆಯವರು ನಡೆಸಿದ್ದ ಜನಾಂದೋಲನದ ರೀತಿಯಲ್ಲಿ. ಭ್ರಷ್ಟಾಚಾರ ವಿರುದ್ಧ ಆಂದೋಲನವನ್ನು ಪಕ್ಷಾತೀತವಾಗಿ ನಡೆಸಬೇಕು. ಎರಡನೆಯದಾಗಿ ಭ್ರಷ್ಟಾಚಾರವೆಂಬುದು ಅಮೂರ್ತವಾಗಿರುವುದರಿಂದ ಅದನ್ನು ಹಿಡಿದು ಕಟ್ಟಿಹಾಕುವುದು ಕಷ್ಟಸಾಧ್ಯ. ಎರಡೂ ಕೈ ಜೋಡಿಸದೆ ಚಪ್ಪಾಳೆ ಆಗದಂತೆ, ಇಬ್ಬರು ವ್ಯಕ್ತಿಗಳಿಲ್ಲದೆ ಭ್ರಷ್ಟಾಚಾರ ಉಂಟಾಗಲು ಸಾಧ್ಯವಿಲ್ಲ. ಲಂಚ ತೆಗೆದುಕೊಳ್ಳುವವನು ಇರಬೇಕಾದರೆ ಲಂಚ ಕೊಡುವವನೊಬ್ಬ ಇರಲೇಬೇಕು. ಯಾವ ರೀತಿ ಮಹಾಭಾರತದ ಯುದ್ಧದಲ್ಲಿ ಅರ್ಜುನನು ರಣಾಂಗಣದಲ್ಲಿ ಇರುವವರೆಲ್ಲ ತನ್ನ ಬಂಧೂಗಳೇ ಎಂಬುದನ್ನು ನೋಡಿ ಕ್ಷಾತ್ರ ಸನ್ಯಾಸವನ್ನು ಸ್ವೀಕರಿಸಿದಂತೆ ನಮ್ಮ ಪಾಡು ಆಗುವ ಸಂಭವವಿದೆ. ಭ್ರಷ್ಟಾಚಾರದಲ್ಲಿ ಬಂಧುಗಳು, ಸ್ನೇಹಿತರು, ಇತ್ಯಾದಿಯಾಗಿ ಎಲ್ಲರದು ಪಾತ್ರ ಇರುವುದರಿಂದ ಭ್ರಷ್ಟಾಚಾರ ಆಂದೋಲನ ರಾಜಕೀಯವಾಗಿ ಇರದೇ ನೈತಿಕ ಕ್ಷೇತ್ರದಲ್ಲಿಯೂ ಇರಬೇಕಾಗುತ್ತದೆ. ಎಲ್ಲಿಯವರೆಗೆ ನಮ್ಮ ಜೀವನದಲ್ಲಿ ಹಣವೇ ಸರ್ವಸ್ವ ಆಗಿರುತ್ತದೋ ಅಲ್ಲಿಯವರೆಗೆ ಜನರು ಹಣದ ಬೆನ್ನು ಹತ್ತಿರುತ್ತಾರೆ. ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧೀ ಮುಂತಾದವರೆಲ್ಲ ಏಕೆ ಭ್ರಷ್ಟರಾಗಲಿಲ್ಲ? ಅದಕ್ಕೆ ಕಾರಣ ಅವರು ಹಣವನ್ನು ಶತ್ರುವನ್ನಾಗಿ ಭಾವಿಸಿದ್ದರು. ಆದ್ದರಿಂದ ಅವರಿಂದ ಸಮಾಜಕ್ಕೆ ಬೋಧನೆ ಮಾಡಲು ಸಾಧ್ಯವಾಯಿತು. ಗಾಂಧೀಯವರು ರಾಜಕಾರಣದಲ್ಲಿ ಆಧ್ಯಾತ್ಮಿಕತೆ ತರಲು ಪ್ರಯತ್ನಿಸಿದರು. ಭಾರತದಲ್ಲಿ ರಾಮರಾಜ್ಯ ನಡೆಯಬೇಕೆಂಬ ಉದಾತ್ತ ಗುರಿಯನ್ನು ದೇಶದ ಮುಂದೆ ಇಟ್ಟರು. ಇಂಥ ಮಾತನ್ನು ಹೇಳುವ ಮುಖಂಡ ಈಗ ಯಾರಿದ್ದಾರೆ? ಯಾರ ಮಾತಿನಲ್ಲೂ ನೈತಿಕ ಬಲವಿಲ್ಲ. ಆದ್ದರಿಂದ ಭ್ರಷ್ಟಾಚಾರದ ನಿರ್ಮೂಲನೆ ನೈತಿಕನೆಲೆಯಿಂದ ಪ್ರಾರಂಭವಾಗುವುದು ಹೆಚ್ಚು ಸೂಕ್ತ. ಪ್ರತಿಯೊಬ್ಬ ಭಾರತೀಯನು ಭ್ರಷ್ಟಾಚಾರವನ್ನು ಒಂದು ಹೇಸಿಗೆ ವಸ್ತು ಎಂಬ ಭಾವನೆಯನ್ನು ಮೂಡಿಸಿಕೊಳ್ಳುವಂತಾಗಬೇಕು. ಈಗ ನಮ್ಮ ದೇಶದ ರಾಜಕಾರಣವು ತತ್ವರಹಿತವಾಗಿದೆ. ಶರೀರಶ್ರಮವಿಲ್ಲದೆ ಅಥವಾ ಅನ್ನಕಾಯಕವಿಲ್ಲದೆ ಅಥವಾ ಜೀವನೋಪಯೋಗಿ ಯಾವ ಪದಾರ್ಥವನ್ನೂ ಉತ್ಪಾದಿಸದೆ ಯಥೇಚ್ಛವಾಗಿ ಸಂಪತ್ತು ಜನರ ಕೈಯಲ್ಲಿ ಸೇರಿದೆ. ವಾಣಿಜ್ಯ ವ್ಯವಹಾರವಂತೂ ನೀತಿಹೀನವಾಗಿದೆ. ಸಮಾಜದಲ್ಲಿ ನೈತಿಕ ಮೌಲ್ಯ ತರುವಂಥ ಕಾರ್ಯವನ್ನು ಒಂದು ರಾಜಕೀಯ ಕಾರ್ಯವೆಂದು ಭಾವಿಸಿ ಸಹಾಯ ಮಾಡಿರುವ ವಾಣಿಜ್ಯ ಸಂಸ್ಥೆಗಳು ನಮ್ಮ ದೇಶದಲ್ಲಿವೆ. ದೇಶದ ದೊಡ್ಡ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಾದ ಟಾಟಾ ಕಂಪನಿ ಮತ್ತು ಇನ್ಫೋಸಿಸ್ ಕಂಪನಿ ಅರವಿಂದ್ ಕೇಜ್ರೀವಾಲ್ ಚಳುವಳಿಗೆ ಹಣ ಕೊಟ್ಟಿಲ್ಲ ಎಂದು ಸ್ಪಷ್ಟೀಕರಣ ಕೊಟ್ಟಿವೆ. ಕೇಜ್ರೀವಾಲ್‌ರಂಥ ಸಮಾಜ ಸುಧಾರಕರನ್ನು ಮಿಡಿ ನಾಗರಹಾವಿನಂತೆ ಭಯದಿಂದ ಕಾಣುತ್ತಿವೆ.

ಇನ್ನು ದೇಶದ ಶಿಕ್ಷಣವಂತೂ ಶೀಲವಿಲ್ಲದ್ದಾಗಿದೆ. ಒಂದು ವೇಳೆ ನಮ್ಮ ದೇಶದ ಶಿಕ್ಷಣದಲ್ಲಿ ನೈತಿಕತೆಗೆ ಮತ್ತು ಶುದ್ಧತೆಗೆ ಹೆಚ್ಚಿನ ಒತ್ತು ಕೊಟ್ಟಿದ್ದರೆ ಸ್ವತಂತ್ರ ಭಾರತದಲ್ಲಿರುವ ಇಂದಿನ ಹೊಸ ತಲೆಮಾರು ಇಷ್ಟೊಂದು ಭ್ರಷ್ಟವಾಗುತ್ತಿರಲಿಲ್ಲ. ಆಡಳಿತಗಾರರನ್ನು, ವಕೀಲರನ್ನು, ಇಂಜಿನಿಯರ್‌ಗಳನ್ನು, ಡಾಕ್ಟರನ್ನು ತಯಾರು ಮಾಡುವಂಥ ಶಿಕ್ಷಣದಲ್ಲಿ ಒಂದಿನಿತು ನೈತಿಕ ಮೌಲ್ಯದ ಶಿಕ್ಷಣವಿಲ್ಲ. ಅವರಿಗೆ ಕೊಡುವ ಶಿಕ್ಷಣದಲ್ಲಿ ಹಣದ ಪ್ರಾಶಸ್ತ್ಯವನ್ನು ಒತ್ತಿ ಹೇಳುತ್ತದೆ. ಆದ್ದರಿಂದ ಸಹಜವಾಗಿ ಇಂದು ಆಡಳಿತದಲ್ಲಿ ಮತ್ತು ರಾಜಕಾರಣದಲ್ಲಿ ಭ್ರಷ್ಟಾಚಾರ ತುಂಬಿದೆ ಇಂದು ಸಮಾಜದ ಉನ್ನತ ಸ್ಥಾನದಲ್ಲಿರುವವರು ನಡೆಸುತ್ತಿರುವ ಭೋಗ ಜೀವನಕ್ಕೆ ಕಾರಣ ಅವರು ಆತ್ಮಸಾಕ್ಷಿ ರಹಿತವಾಗಿದ್ದಾರೆ. ಅವರಿಗೇನಾದರೂ ಆತ್ಮಸಾಕ್ಷಿ ಎಂಬುದು ಇದ್ದಿದ್ದರೆ ವೈಭವೋಪೇತ ಮದುವೆಗಳಿಗೆ ಸ್ಥಾನವೇ ಇರುತ್ತಿರಲಿಲ್ಲ. ದೇಶದಲ್ಲಿ ಬಹಳಷ್ಟು ಮಠಮಾನ್ಯಗಳು, ದೇವಸ್ಥಾನಗಳು, ಮಸೀದಿಗಳು ಮತ್ತು ಚರ್ಚ್‌ಗಳು ಇವೆ. ಅಲ್ಲಿ ನಡೆಯುತ್ತಿರುವ ಧರ್ಮ ಬೋಧನೆ, ಪೂಜೆ, ಪುನಸ್ಕಾರಗಳು ವಿಡಂಬನಾತ್ಮಕವಾಗಿವೆ. ಜನರು ಅಲ್ಲಿಗೆ ಭಕ್ತಿಯಿಂದ ಮತ್ತು ಆತ್ಮಸಂತೋಷಕ್ಕಾಗಿ ಹೋಗುವುದಕ್ಕಿಂತ ಯಂತ್ರವತ್ತಾಗಿ ಹೋಗುತ್ತಿದ್ದಾರೆ. ಮಠಾಧೀಶರ ಪೂಜೆ ಹಾಗು ಬೋಧನೆ ಶುಷ್ಕವೆನಿಸುತ್ತದೆ. ಅದಕ್ಕೆ ಮುಖ್ಯವಾದ ಕಾರಣ ಗುರುಪೀಠದಲ್ಲಿರುವವರ ಜೀವನದಲ್ಲಿ ಕಿಂಚಿತ್ತೂ ತ್ಯಾಗವಿಲ್ಲದಿರುವುದು. ಅಲ್ಲಿ ಭೋಗ ಜೀವನವಿದೆ. ಆದ್ದರಿಂದ ವಿವಿಧ ಧರ್ಮಗಳ ಅನುಯಾಯಿಗಳೇ ಭಯೋತ್ಪಾದಕರಾಗಿ ಪರಿವರ್ತಿತರಾಗುತ್ತಿದ್ದಾರೆ. ಕುರಾನ್ ಹಿಡಿದು ತಾಲಿಬಾನ್‌ಗಳಾಗುತ್ತಾರೆ. ಬೈಬಲ್ ಹಿಡಿದು ಸಾಮ್ರಾಜ್ಯಶಾಹಿಗಳಾಗುತ್ತಾರೆ. ಭಗವದ್ಗೀತೆ ಹಿಡಿದು ಧರ್ಮಾಂಧರಾಗುತ್ತಾರೆ. ಧರ್ಮಗಳ ನಿಜವಾದ ಸಂದೇಶ ಅನುಯಾಯಿಗಳಿಗೆ ಗುರುಪೀಠಗಳಿಂದ ದೊರೆಯುತ್ತಲೇ ಇಲ್ಲ. ಇದೇ ರೀತಿ ಜಗತ್ತಿನ ದೇಶಗಳು ಬಳಸುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಕಥೆಯಾಗಿದೆ. ಈ ವಿಜ್ಞಾನ ಮತ್ತು ತಂತ್ರಜ್ಞಾನದ ಶೋಧನೆಯಲ್ಲಿ ಭೌತಿಕ ಸುಖದ ಶೋಧನೆ ಇದೆಯೇ ಹೊರತು ಮಾನವೀಯತೆಯ ಶೋಧನೆ ಇಲ್ಲ. ಒಂದು ವೇಳೆ ಮಾನವೀಯತೆಯನ್ನು ಉಳಿಸಿ ಬೆಳೆಸುವುದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಗುರಿಯಾಗಿದ್ದರೆ ನಮ್ಮ ಜಾಗತಿಕ ಪರಿಸರ ಹಾಳಾಗುತ್ತಿರಲಿಲ್ಲ. ಜಗತ್ತಿನ ಎಲ್ಲ ದೇಶಗಳು ವಿಷಪೂರಿತ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಪ್ರಯೋಗ ಮಾಡುತ್ತಿವೆ. ಕ್ಷಿಪಣಿಗಳನ್ನು, ಕೃತಕ ಉಪಗ್ರಹಗಳನ್ನು, ಆಕಾಶಕಾಯಗಳನ್ನು ಉಡಾಯಿಸುವುದರ ಮೂಲಕ, ವಿವಿಧ ಕೈಗಾರಿಕೆಗಳಿಂದ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಇತ್ತೀಚಿನ ಸಂಶೋಧನಾ ವರದಿಗಳ ಪ್ರಕಾರ ಜಾಗತಿಕ ತಾಪಮಾನವು ಇದೇ ರೀತಿ ಏರಿಕೆಯಾದಲ್ಲಿ ಮುಂದಿನ ೨೦೦ ವರ್ಷಗಳಲ್ಲಿ ಮುಂಗಾರು ಮಳೆ ಮತ್ತು ಮಾನ್ಸೂನ್ ಮಳೆ ವಿಫಲವಾಗುವವು.

ಕೈಗಾರಿಕಾ ಕ್ರಾಂತಿಯ ಮೊದಲು ಮಾನ್ಸೂನ್ ಮಳೆ ಕ್ವಚಿತ್ತಾಗಿ ವಿಫಲವಾಗುತ್ತಿತ್ತು ಎಂದು ಹೇಳಿದೆ. ಒಂದು ವೇಳೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಾನವೀಯತೆಯ ಮುಖವಿದ್ದಿದ್ದರೆ ಪರಿಸರವನ್ನು ಹಾಳುಮಾಡುವ ಬದಲು ಪರಿಸರ

ರಕ್ಷಿಸುವ ಕ್ರಮವನ್ನು ಸೂಚಿಸುತ್ತಿದ್ದವು. ಗಾಂಧೀಯವರು ೮೭ ವರ್ಷದ ಹಿಂದೆ ೧೯೨೫ರಲ್ಲಿ ಏಳು ಸಾಮಾಜಿಕ ಪಾತಕಗಳನ್ನು ಯಂಗ್‌ಇಂಡಿಯಾದಲ್ಲಿ ಗುರತಿಸಿ ಈ ಪಾತಕಗಳ ಬಗ್ಗೆ ಕೇವಲ ವೈಚಾರಿಕವಾಗಿ ತಿಳಿಯುವುದಲ್ಲ, ಹೃದಯಪೂರ್ವಕವಾಗಿ ಅರ್ಥಮಾಡಿಕೊಂಡು ಅದನ್ನು ತಪ್ಪಿಸಬೇಕೆಂದು ಸೂಚಿಸಿದರು. ಇಂದು ಈ ಕೆಲಸ ಭಾರತೀಯ ಸಮಾಜದಲ್ಲಿ ಬೃಹತ್ ಪ್ರಮಾಣದಲ್ಲಿ ಆಗಬೇಕಿದೆ.

ಈಗ ನಡೆಯಬೇಕಿರುವ ಭ್ರಷ್ಟಾಚಾರ ವಿರೋಧಿ ಆಂದೋಲನ ನಿಜವಾಗಿಯೂ ಜನಾಂದೋಲನವಾಗಿ ರೂಪುಗೊಳ್ಳಬೇಕು. ಈ ಹಿಂದೆ ಆದಂತೆ ಕೇವಲ ಐಟಿ–ಬಿಟಿಯವರ ಆಂದೋಲನದಂತೆ ಆಗಕೂಡದು. ಸಮಾಜದ ಎಲ್ಲ ವರ್ಗದವರು ಮುಖ್ಯವಾಗಿ ರೈತ ಸಮುದಾಯ ಮತ್ತು ಜನಸಾಮಾನ್ಯರು ಪಾಲ್ಗೊಳ್ಳಬೇಕು. ಯಾವ ರೀತಿ ಗಾಂಧೀಯವರ ಉಪ್ಪಿನ ಸತ್ಯಾಗ್ರಹ ನಡೆಯಿತೋ ಆ ಮಾದರಿಯಲ್ಲಿ ಈ ಆಂದೋಲನ ನಡೆಯಬೇಕು. ಪ್ರತಿಯೊಂದು ರಾಜ್ಯದಲ್ಲಿ ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಯುವಕರು ಮುಂದೆ ಬಂದು ಅರವಿಂದ ಕೇಜ್ರೀವಾಲ್ ತಂಡದವರ 'ಭ್ರಷ್ಟಾಚಾರ ವಿರೋಧಿ ಭಾರತ' ಸಂಸ್ಥೆಯ ಮಾದರಿಯಂತೆ ಸಂಸ್ಥೆ ಸ್ಥಾಪಿಸಬೇಕು. ಸ್ಥಳೀಯ ರಾಜಕೀಯ ಮುಖಂಡರ ಮತ್ತು ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯಬೇಕು. ಈಗಾಗಲೇ ಇಂಥ ಒಂದು ಕೆಲಸವನ್ನು ಕರ್ನಾಟಕದಲ್ಲಿ ಸಮಾಜ ಪರಿವರ್ತನಾ ಸಂಸ್ಥೆ ಮೂಲಕ ಎಸ್.ಆರ್.ಹಿರೇಮಠರು ಮಾಡಲು ಪ್ರಯತ್ನಿಸಿದ್ದಾರೆ. ಅವರು ಆ ಕೆಲಸವನ್ನು ಮುಂದುವರಿಸಬೇಕು ಮತ್ತು ಜನರು ಅವರಿಗೆ ಸಹಾಯ ಮಾಡಬೇಕು. ಕಳೆದ ಏಪ್ರಿಲ್ ತಿಂಗಳಲ್ಲಿ ಅಣ್ಣಾ ಹಜಾರೆಯವರು ನಡೆಸಿದ ಆಂದೋಲನದಲ್ಲಿ ಯಾವೆಲ್ಲ ಲೋಪದೋಷಗಳಿದ್ದವೊ ಅವು ಈ ಸಲದ ಆಂದೋಲನದ ಸಂಘಟನೆಯಲ್ಲಿ ಪುನರಾವರ್ತನೆ ಆಗದಂತೆ ಎಚ್ಚರ ವಹಿಸಬೇಕು. ಬಾಬಾ ರಾಮದೇವ್‌ರಂಥ ಪ್ರಶ್ನಾರ್ಹವಾದ ವ್ಯಕ್ತಿಗಳನ್ನು ದೂರವಿಡಬೇಕು. ಈ ಆಂದೋಲನದ ಮುಖಂಡತ್ವ ವಹಿಸುವವರು ಶುದ್ಧ ಚಾರಿತ್ರ್ಯರು, ವಿಚಾರವಂತರು ಮತ್ತು ಮುಖ್ಯವಾಗಿ ಸತ್ಯಾಗ್ರಹ ಶಾಸ್ತ್ರವನ್ನು ತಿಳಿದಂಥವರಾಗಿರಬೇಕು. ಹೊಸದಾಗಿ ಆಂದೋಲನವನ್ನು ಪ್ರಾರಂಭಿಸುತ್ತಿದ್ದೇವೆ ಎಂದು ಆಲೋಚಿಸುವ ಬದಲು ೨೦೧೧ ಏಪ್ರಿಲ್‌ರ ಚಳುವಳಿಯನ್ನು ಮುಂದುವರಿಸುತ್ತಿದ್ದೇವೆ ಎಂಬ ಭಾವನೆಯಿಂದ ಕೆಲಸ ಮಾಡಬೇಕು. ಭ್ರಷ್ಟಾಚಾರವನ್ನು ಕಸದಂತೆ ಭಾವಿಸಬೇಕು. ಯಾವ ರೀತಿ ನಮ್ಮ ನಮ್ಮ ಮನೆಗಳಲ್ಲಿಯ ಕಸವನ್ನು ಗುಡಿಸಿ ಬಿಸಾಡುತ್ತೇವೋ ಅದೇ ರೀತಿ ಸಮಾಜದಲ್ಲಿರುವ ಭ್ರಷ್ಟಾಚಾರವೆಂಬ ಕಸವನ್ನು ಗುಡಿಸುವ ಈ ಕಾಯಕದಲ್ಲಿ ಸಮಾಜದ ಎಲ್ಲ ಸದಸ್ಯರು ನಿಷ್ಠೆಯಿಂದ ತೊಡಗಬೇಕು. ಕಸಗುಡಿಸುವ ಕೆಲಸ ಅಂದರೆ ಸ್ವಚ್ಛತಾ ಕೆಲಸವನ್ನು ಗಾಂಧೀಯವರು ೧೮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದನ್ನಾಗಿ ಸೇರಿಸಿದ್ದರು. ಭ್ರಷ್ಟಾಚಾರವನ್ನು ಗುಡಿಸುವ ಕೆಲಸ ರಚನಾತ್ಮಕ ಕೆಲಸ ಎಂದು ಭಾವಿಸಿ ನಾವೆಲ್ಲ ಭಾರತೀಯರು ಆ ಕೆಲಸದಲ್ಲಿ ತೊಡಗೋಣ.

* * *

ಪರಮಾಧಿಕಾರ ಜನರದ್ದು, ಸಂಸತ್ತಿನದಲ್ಲ

– ಮೂಲ : ಅರವಿಂದ ಕೇಜ್ರೀವಾಲ್;
ಅನು : ಡಿ.ಎಸ್.ನಾಗಭೂಷಣ

ಭಾರತದಲ್ಲಿ ದುರದೃಷ್ಟವಶಾತ್ ಸಂಸತ್ತಿನ ನಡಾವಳಿಗಳ ಮೇಲೆ ಜನತೆಯ ಯಾವುದೇ ರೀತಿಯ ಹತೋಟಿ ಇಲ್ಲವಾಗಿದೆ. ೧೯೦೮ರಲ್ಲಿ ಗಾಂಧಿಜಿ 'ಹಿಂದ್ ಸ್ವರಾಜ್'ನಲ್ಲಿ ಬ್ರಿಟಿಷ್ ಸಂಸತ್ತಿನ ಬಗ್ಗೆ ಬರೆದಿದ್ದರು: "ಯಾವುದನ್ನು ಎಲ್ಲ ಸಂಸತ್ತುಗಳ ತಾಯಿ ಎಂದು ಕರೆಯಲಾಗಿದೆಯೋ ಆ ಬಿಟಿಷ್ ಸಂಸತ್ ಬಂಜೆಯೂ ವೇಶ್ಯೆಯೂ ಆಗಿರುವಳು. ನಿಜ ಈ ಎರಡು ಶಬ್ದಗಳು ಒರಟಾದವು. ಆದರೆ ಸರಿಯಾದವು. ಸಂಸತ್ತು ಎಂದೂ ತಾನಾಗಿ ಯಾವುದೇ ಒಳ್ಳೆಯ ಕೆಲಸ ಮಾಡಿಲ್ಲ. ಹಾಗಾಗಿ ಅದನ್ನು ನಾನು ಬಂಜೆ ಎಂದಿರುವೆ. ಪದೇ ಪದೇ ಅದರ ಸದಸ್ಯರು ಬದಲಾಗುತ್ತಾ ಹೋಗುವುದರಿಂದ ಅದು ವೇಶ್ಯೆ. ಈ ಸದಸ್ಯರು ವೇಷಧಾರಿಗಳು ಮತ್ತು ಸ್ವಾರ್ಥಿಗಳು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರತಿಯೊಬ್ಬ ಸದಸ್ಯನೂ ತನ್ನ ಸ್ವಾರ್ಥಾಸಕ್ತಿಯಿಂದಲೇ ಕೆಲಸ ಮಾಡುತ್ತಾನೆ. ಅಭದ್ರತೆಯೇ ಅವನ ಮುಂದಿನ ನಡಾವಳಿಯನ್ನು ನಿರ್ಧರಿಸುತ್ತದೆ. ಸಂಸತ್ತಿನಲ್ಲಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಇವರಲ್ಲಿ ಬಹಳ ಜನ ಮೈಮುರಿಯುತ್ತಲೋ ತೂಕಡಿಸುತ್ತಲೋ ಇರುತ್ತಾರೆ. ಕೆಲವೊಮ್ಮೆ ಇವರು ಕೇಳುವವರ ಕಂಗಾಲಾಗುವಷ್ಟು ಮಾತನಾಡುತ್ತಾ ಹೋಗುವುದೂ ಉಂಟು. ಹಾಗಾಗಿಯೇ ಕ್ಯಾರಲೆ ಸಂಸತ್ತನ್ನು ಮಾತಿನ ಅಂಗಡಿ ಎಂದು ಕರೆದಿರುವುದು. ಸದಸ್ಯರು ಸಂಸತ್ತಿನಲ್ಲಿ ನಿರ್ಯೋಚನೆಯಿಂದ ತಮ್ಮ ಪಕ್ಷದ ನಿಲುವಿನ ಪರ ಮತ ಹಾಕುತ್ತಾರೆ. ಪಕ್ಷದ ಶಿಸ್ತಿನ ಹೆಸರಲ್ಲಿ ಇದನ್ನು ಅವರ ಮೇಲೆ ಹೇರಲಾಗಿದೆ. ಯಾವುದೇ ಸದಸ್ಯ ಸ್ವತಂತ್ರವಾಗಿ ಯೋಚಿಸಿ ಪಕ್ಷದ ಆದೇಶದ ವಿರುದ್ಧ ಮತ ಹಾಕಿದರೆ ಅವನು ಪಕ್ಷದ್ರೋಹಿ, ಜನದ್ರೋಹಿಯಾಗಿಬಿಡುತ್ತಾನೆ. 'ಸಂಸತ್ ರಾಷ್ಟ್ರದ ಅತಿ ದುಬಾರಿ ಆಟಿಕೆಯಗಿದೆ' ಎಂಬ ವರ್ಣನೆ ನನಗೆ ವಿಶೇಷವಾಗೇನೂ ಕಂಡಿಲ್ಲ, ಇಂಗ್ಲೆಂಡಿನ ಅನೇಕ ಚಿಂತಕರು ಇದನ್ನು ಹೇಳಿದ್ದಾರೆ."

ಬ್ರಿಟಿಷ್ ಸಂಸತ್ತಿನ ಬಗ್ಗೆ ಗಾಂಧೀಜಿಯ ಈ ಅಭಿಪ್ರಾಯಗಳು ಇಂದು ಭಾರತದ ಸಂಸತ್ತಿಗೆ ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ ಎಂಬುದನ್ನು ಪರಿಶಿಲಿಸಿದರೆ ಒಳ್ಳೆಯದಾದೀತು. ಭಾರತವನ್ನು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತವ ಎಂದೆಲ್ಲ ಕರೆಯಲಾಗುತ್ತದೆ. ಇದು ಅತಿ ದೊಡ್ಡ ಎಂದೆನಿಸಿರುವುದು ಇದರ ಅತಿ ವಿಶಾಲ ಜನಸಂಖ್ಯೆಯಿಂದಾಗಿ ಮಾತ್ರ. ಏಕೆಂದರೆ, ಐದು ವರ್ಷಗಳಿಗೊಮ್ಮೆ ಮತ ಚಲಾಯಿಸುವುದರ ಹೊರತಾಗಿ ಜನತೆಗೆ ಆಡಳಿತದ ಬಗ್ಗೆ ಏನಾದರೂ ಹೇಳಲು ಅವಕಾಶವಿದೆಯೇ ಯೋಚಿಸಿ. ಇಲ್ಲಿ ವಯಸ್ಕ ಮತದಾನ ಪದ್ಧತಿ ಇದೆಯೆಂದ ಮಾತ್ರಕ್ಕೆ ಇದು ಪ್ರಜಾಪ್ರಭುತ್ವ ಎನಿಸಿಕೊಳ್ಳಬಹುದೇ? ನಾವು ಐದು ವರ್ಷಕ್ಕೊಮೆ ಯಾರನ್ನೋ ಆರಿಸುತ್ತೇವೆ. ನಂತರ ನಮಗಾಗಲೀ, ನಮ್ಮ ಈ ಪ್ರತಿನಿಧಿಗಳಿಗಾಗಲೀ ಸಂಸತ್ತಿನಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ. ಏಕೆಂದರೆ, ನಮ್ಮ ಪ್ರತಿನಿಧಿ ನಮ್ಮ ಬಳಿ ಎಂದೂ ಬರುವುದಿಲ್ಲ; ಹೋಗಲಿ, ಸಂಸತ್ತಿನಲ್ಲಿ

ನಿರ್ಣಾಯಕ ವಿಷಯಗಳ ಮೇಲೆ ಮತ ಹಾಕುವಾಗ ನಮ್ಮೊಡನೆ ಯಾವುದೇ ಸ್ತರದಲ್ಲೂ ಚರ್ಚಿಸುವುದಿಲ್ಲ. ಒಮ್ಮೆ ಚುನಾಯಿತನದನೆಂದರೆ, ನಮ್ಮ ಪ್ರತಿನಿಧಿ ಪಕ್ಷದ ಶಿಸ್ತಿಗೆ ಒಳಪಟ್ಟು ಸಂಪೂರ್ಣ ಅದರ ಸ್ವತ್ತಾಗಿಬಿಡುತ್ತಾನೆ. ಪಕ್ಷಗಳು ತಮ್ಮ ಘೋಷಿತ ಮೂಲತತ್ವಗಳಿಗೆ ಮತ್ತು ಚುನಾವಣೆಗಳ ಮುನ್ನ ಪ್ರಕಟಿಸಿದ್ದ ಪ್ರಣಾಳಿಕೆಗಳನ್ನು ಸುಲಭವಾಗಿ ಗಾಳಿಗೆ ತೂರಬಲ್ಲಷ್ಟು ನಿರ್ಲಜ್ಜವಾಗಿರುವ ಈ ದಿನಗಳಲ್ಲಿ ಇದು ಎಷ್ಟು ಘಾತುಕವಾಗಬಲ್ಲದೆಂದು ನೀವೇ ಯೋಚಿಸಿ.

ಹೀಗಾಗಿ ಲೋಕಸಭಾ ಸದಸ್ಯರು ತಂತಮ್ಮ ಪಕ್ಷಗಳ ಜೀತದಾಳುಗಳ ಮಟ್ಟಕ್ಕೆ ಇಳಿದಿದ್ದಾರೆ. ಪಕ್ಷದ ನಿರ್ಣಯದ ವಿರುದ್ಧ ನಿಂತವರು ಪಕ್ಷದ ಸದಸ್ಯತ್ವ ಮತ್ತು ಆಮೂಲಕ ಸಂಸತ್ತಿನ ಸದಸ್ಯತ್ವ ಕಳೆದುಕೊಳ್ಳಬೇಕಾಗುತ್ತದೆ. ಉದಾಹರಣಗೆ, ಪ್ರಸ್ತುತ ಲೋಕಸಭೆಯ ೨೦೭ ಜನ ಕಾಂಗ್ರೆಸ್ ಸದಸ್ಯರಲ್ಲಿ ಯಾರೂ ಸ್ವತಂತ್ರವಾಗಿ ಯೋಚಿಸುವ ಸ್ಥಿತಿಯಲ್ಲಿ ಇಲ್ಲ. ಅವರು ಏನಿದ್ದರೂ ತಮ್ಮ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಮಾಡಿದ ತೀರ್ಮಾನಕ್ಕೆ ಬದ್ಧವಾಗಿರಬೇಕಾಗುತ್ತದೆ. ಇದೇ ಸ್ಥಿತಿ ಬಿಜೆಪಿ ೧೧೪ ಜನ ಸದಸ್ಯರದ್ದು. ಮಾಜಿ ಲೋಕಸಭಾ ಸದಸ್ಯ ಇಲಿಯಾಸ್ ಆಜ್ಮಿ ಹೇಳುವಂತೆ ಇಂದಿನ ಲೋಕಸಭೆ ಚದುರಂಗದ ಹಾಸಿನಂತಿದೆ. ಅದರ ಮೇಲೆ ಕೆಲವು ರಾಜಕೀಯ ಪಕ್ಷಗಳ ನಾಯಕರ ಹತೋಟಿಯಲ್ಲಿರುವ ಕಾಯಿಗಳ ಆಟ ನಡೆದಿದೆ.

ಪರಿಸ್ಥಿತಿ ಇಂತಿರುವಾಗ ರಾಷ್ಟ್ರ ಎರಡು ಚುನಾವಣೆಗಳ ನಡುವೆ ಒಳಗಾಗುವುದು, ಆಡಳಿತ ಪಕ್ಷದ ನಾಯಕರ ಸರ್ವಾಧಿಕಾರಕ್ಕೇ ಅಲ್ಲವೆ? ಈ ಕೆಲವೇ ಪುರುಷರು ಮತ್ತು ಮಹಿಳೆಯರು ಐದು ವರ್ಷಗಳ ಕಾಲ ಸಂಸತ್ತನ್ನೂ, ಕಾರ್ಯಾಂಗವನ್ನೂ ಆಳುವ ಈ ರೀತಿಯಲ್ಲಿ ಯಾರ ಮತ್ತು ಯಾವ ಬದ್ಧತೆ ಅವರನ್ನು ಹಣದ ಮತ್ತು ಇತರೆ ರೀತಿಯ ಪ್ರಭಾವಗಳಿಂದ ಮುಕ್ತವಾಗಿಟ್ಟೀತು? ಇದೊಂದು ಭೀಕರವೆನ್ನಿಸುವ ಪರಿಸ್ಥಿತಿ. ಐದು ವರ್ಷಗಳಿಗೊಮ್ಮೆ ಚುನಾವಣೆಯ ನಾಟಕ ನಡೆಯುತ್ತದೆ. ಆ ಮೂಲಕ ದೇಶವನ್ನು ಸಗಟಾಗಿ ತಟ್ಟೆಯಲ್ಲಿಟ್ಟು ಕೆಲವರ ವಶಕ್ಕೆ ಒಪ್ಪಿಸಿಬಿಡಲಾಗುತ್ತದೆ. ಎಲ್ಲ ಪಕ್ಷಗಳ ನಾಯಕರ ನಡುವೆ ಒಂದು ಅಲಿಖಿತ ಒಪ್ಪಂದವಿರುತ್ತದೆ. ಅವರು ಹೆಸರಿಗೆ ಮಾತ್ರ, ಜನರ ತೋರಿಕೆಗಾಗಿ ಮಾತ್ರ ಭಿನ್ನ ಭಿನ್ನ ಪಕ್ಷಗಳವರು. ತೆರೆಯ ಹಿಂದೆ ಒಂದೇ ಸಾಮಾನ್ಯ ಹಿತಾಸಕ್ತಿ ಕಾಯಲು ಒಂದುಗೂಡುವರು. ಬಹಿರಂಗವಾಗಿ ಪರಸ್ಪರ ದೂಷಣೆಗೆ ಇಳಿಯುವರಾದರೂ, ಅಧಿಕಾರಕ್ಕೆ ಬಂದಾಗ ತಾವೇ ಅಪರಾಧಿಗಳೆಂದು ಹೇಳಿದ ಎದುರು ಪಕ್ಷದ ನಾಯಕರನ್ನು ಶಿಕ್ಷಿಸಲು ಮುಂದಾಗಲಾರರು. ಹಾಗಾಗಿಯೇ ಬಹುಕಾಲ ಧೂಳೆಬ್ಬಿಸಿದ್ದ ಬೋಫೋರ್ಸ್ ಹಗರಣ ಈವರೆಗೆ ಒಂದು ತಾರ್ಕಿಕ ಅಂತ್ಯ ಕಾಣಲಾಗದೇ ಹೋಗಿದೆ. ಮಿಕ್ಕವೂ ಅದೇ ದಾರಿ ಹಿಡಿಯಬಲ್ಲವು. ಆಡಳಿತ ಪಕ್ಷ, ವಿರೋಧ ಪಕ್ಷಗಳ ನಾಯಕರ ಸಂಬಂಧಿಗಳಿಗೆ ದೊಡ್ಡ ದೊಡ್ಡ ಗುತ್ತಿಗೆಗಳನ್ನು ಕೊಟ್ಟು ಅವರನ್ನು ಆಂತರಿಕವಾಗಿ ಖುಷಿಯಲ್ಲೇ ಇಟ್ಟಿರುತ್ತದೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಇಂದಿನ ಈ ಮಾದರಿ, ದೇಶವನ್ನು ಲೂಟಿ ಮಾಡಲು ಸ್ವಿಚ್ಚೊತ್ತಿದರೆ ಸಾಕು ಚಾಲನೆಗೊಳ್ಳುವ ಯಂತ್ರದಂತಿದೆ. ಸಾರ್ವಜನಿಕ ಹಿತಾಸಕ್ತಿ ಎನ್ನುವುದು ಕೇವಲ ನೆಪ. ಅದು ಸ್ಪಂದಿಸುವುದು ತನ್ನ ಸದಸ್ಯರ ದುಃಖ-ದುಮ್ಮಾಗಳಿಗೆ ಮಾತ್ರ.

ಒಕ್ಕಲು ಮಂತ್ರಿ ಶರದ್ ಪವಾರ್‌ಗೆ ಯಾರೋ ಕಪಾಳಕ್ಕೆ ಹೊಡೆದಾಗ ಈ ಸಂಸತ್ತು ಎರಡು ಅಮೂಲ್ಯ ತಾಸುಗಳ ಕಾಲ ಅದನ್ನು ಚರ್ಚಿಸಿ ಶೋಕಿಸಿತು. ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ, ಪೋಲೀಸರ ಗೋಲಿಬಾರ್‌ನಲ್ಲಿ ಸತ್ತಾಗ,

ಐ.ಪಿ.ಎಸ್. ಅಧಿಕಾರಿ ನರೇಂದ್ರ ಕುಮಾರ್ ಕೊಲೆಗೀಡಾದಾಗ ಈ ಸಂಸತ್ತು ಈ ಬಗ್ಗೆ ಒಂದು ನಿಮಿಷ ಚರ್ಚಿಸಲಿಲ್ಲ. ಲೋಕಪಾಲ್ ಮಸೂದೆಯನ್ನು ೪೨ ವರ್ಷಗಳ ಕಾಲ ಚರ್ಚಿಸುತ್ತಲೇ ಬಂದಿದ್ದಾರೆ! ಆದರೆ ಅದನ್ನೊಂದು ಕಾನೂನು ಮಾಡಲು ಮಾತ್ರ ಅನೇಕ ಅಡೆ ತಡೆಗಳು. ತಮ್ಮ ಸಂಬಳ-ಸಾರಿಗೆಗಳನ್ನು ಮಾತ್ರ ಕೆಲವೇ ನಿಮಿಷಗಳಲ್ಲಿ ಹೆಚ್ಚಿಸಿಕೊಂಡುಬಿಡುತ್ತಾರೆ! ಇನ್ನು ಸಂಸತ್ತಿನ ಎರಡೂ ಸಭೆಗಳ ಶೀಲ ಸ್ವರೂಪ ನೋಡಿ. ಇಂದಿನ ಲೋಕಸಭೆಯಲ್ಲಿ ೧೬೨ ಜನ ಮತ್ತು ರಾಜ್ಯ ಸಭೆಯಲ್ಲಿ ೪೦ಕ್ಕೂ ಹೆಚ್ಚು ಜನ ಕ್ರಿಮಿನಲ್ ಮೊದ್ದಮೆಗಳಣ್ನು ಎದುರಿಸುತ್ತಿರುವವರು. ಇನ್ನುಳಿದವರಲ್ಲಿ ಹಲವರು ಭಾರಿ ಭ್ರಷ್ಟಾಚಾರದ ಮೊಕದ್ದಮೆಗಳನ್ನು ಎದುರಿಸುತ್ತಿರುವವರು. ಇಂತಹ ಸಮಶ್ಠಿಯಿಂದ ನ್ಯಾಯದಾನ ಪದ್ಧತಿಯನ್ನು ದಕ್ಷಗೊಳಿಸುವ ವಿಧೇಯಕ ಅನುಮೋದಿತವಾಗುವುದೆಂದು ನಿರೀಕ್ಷಿಸಲಾದರೂ ಹೇಗೆ ಸಾಧ್ಯ?

ಈ ಮೂಲಭೂತ ಪ್ರಶ್ನೆಗಳನ್ನು ಎತ್ತಿದಾಗಲೆಲ್ಲ ಸಂಸತ್ತಿನ ಪರಮಾಧಿಕರವನ್ನು ಪ್ರಶ್ನಿಸಿ ಪ್ರಜಾಪ್ರಭುತ್ವ ಪದ್ಧತಿಯನ್ನೇ ಪ್ರಶ್ನಿಸಲಾಗುತ್ತಿದೆ ಎಂದು ಜನರಲ್ಲಿ ಭೀತಿ ಹುಟ್ಟಿಸಲಾಗುತ್ತಿದೆ. ಪ್ರಜಾಪ್ರಭುತ್ವದ ಸದರಿ ಮಾದರಿಗಿಂತ ಹೆಚ್ಚು ಜನ ಸಮೀಪವಾದ ಬೇರೆ ಮಾದರಿಗಳೂ ಇವೆಯಲ್ಲವೇ? ಇವೊತ್ತಿನ ಅತಿ ದೊಡ್ಡ ಸಮಸ್ಯೆಯೆಂದರೆ, ಸಂಸತ್ತು ಜನತೆಯಿಂದ ಸಂಪೂರ್ಣ ಬೇರ್ಪಟ್ಟಿರುವುದು. ಸಂಸತ್ತಿನ ನಡಾವಳಿಗಳಲ್ಲಿ, ಜನತೆಯ-ಅದು ನಿರ್ಣಾಯಕ ತಪ್ಪು ಮಡಿದಾಗಲಾದರೂ ನೇರ ಪ್ರವೇಶಕ್ಕೆ ಅವಕಾಶವಿರುವ ವ್ಯವಸ್ಥೆ ಇಲ್ಲವಾಗಿದೆ.

ಜನತೆ ಪರಮೋಚ್ಛವೇ ಹೊರತು ಸಂಸತ್ತಲ್ಲ. ಆದರೆ ದುರದೃಷ್ಟಕರ ಸಂಗತಿಯೆಂದರೆ, ಸಂಸತ್ತಿನ ನಡಾವಳಿಯ ಮೇಲೆ ಜನತೆಗೆ ನಿಯಂತ್ರಣವಿಲ್ಲ. ಹಲವು ದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹ ಮುಖೇನ ಸಂಸತ್ತಿನ ನಿರ್ಧಾರಗಳನ್ನು ತಿದ್ದುಪಡಿಗೊಳಪಡಿಸುವ ಅಥವಾ ರದ್ದುಗೊಳಿಸುವ ಕಾನೂನಾತ್ಮಕ ಅವಕಾಶ ಇದೆ. ಇದರಿಂದ ಬಹು ಮುಖ್ಯ ಸಂದರ್ಭಗಳಲ್ಲದರೂ ಸಂಸತ್ತಿನ ನಡಾವಳಿಯಲ್ಲಿ ಜನತೆಯ ನೇರ ಪ್ರವೇಶಕ್ಕೆ ಅವಕಾಶವಿದೆ. ಇದರ ಪರಿಣಾಮವಾಗಿ ಸಂಸತ್ತು ಸದಾ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುವ ಒತ್ತಡದಲ್ಲಿರುತ್ತದೆ. ಇದರ ಒಂದು ಪ್ರಯೋಗವಾಗಿ ಪ್ರತಿ ಶಾಸಕನೂ ತಾನು ಯಾವುದೇ ನಿರ್ಣಯಕ್ಕೆ ಮತ ಹಾಕುವ ಮುನ್ನ ಅದರ ಕರಡಿನ ಪ್ರತಿಗಳನ್ನು ತನ್ನ ಕ್ಷೇತ್ರದಲ್ಲಿ ಹಂಚಿ ಸಾರ್ವತ್ರಿಕವಾದ ಪ್ರತಿಕ್ರಿಯೆ ಏಕೆ ಪಡೆಯಬಾರದು? ನಿರ್ಣಾಯಕವೆನ್ನಿಸುವ ಮಸೂದೆಗಳಿಂದಲಾದರೂ ಈ ಪ್ರಕ್ರಿಯೆಯನ್ನು ಆರಂಭಿಸಬಹುದಲ್ಲವೇ? ಪ್ರತಿ ಗ್ರಾಮ ಮತ್ತು ಪಟ್ಟಣಗಳ 'ವಾರ್ಡುಗಳಲ್ಲಿ ಗ್ರಾಮ ಸಭೆ ಏಪಾಟಾಗುವಂತಾಗಿ ಈ ಮಸೂದೆಗಳು ಚರ್ಚಿಸುವಂತಾಗಲಿ ಮತ್ತು ಅದರ ವರದಿಯನ್ನು ಜನಪ್ರತಿನಿಧಿಗಳಿಗೆ ತಲುಪಿಸುವ ವ್ಯವಸ್ಥೆಯಾಗಲಿ. ಹೀಗೆ ತನಗೆ ತಲುಪಿದ ಎಲ್ಲ ವರದಿಗಳ ಆಧಾರದ ಮೇಲೆ ಚುನಾಯಿತ ಸದಸ್ಯ ಅಭಿಪ್ರಾಯವೊಂದನ್ನು ರೂಪಿಸಿಕೊಂಡು ಅದನ್ನು ಶಾಸನ ಸಭೆಯಲ್ಲಿ ಮಂಡಿಸಲಿ ಮತ್ತು ತನ್ನ ಪಕ್ಷದ ಸಗಟು ಆದೇಶಗಳಿಂದ ಬಿಡುಗಡೆ ಹೊಂದುವಂತಾಗಲಿ. ಆಗ ಮಾತ್ರ ಪ್ರಜಾಪ್ರಭುತ್ವವೆಂಬುದು ನಿಜವೆನ್ನಿಸುತ್ತದೆ.

(ಸಾಭಾರ : ನವ ಮಾನವ)

* * *

ಪ್ರಕೃತಿ ಮಾತೆಯ ಕಗ್ಗೊಲೆ !

– ಟಿಪ್ಪುಸುಲ್ತಾನ ಜೆ. ನಾಯ್ಕವಾಡಿ

ಪ್ರಕೃತಿಯೊಂದು ಸುಂದರ ಸ್ವರ್ಗ. ಅದು ನಮಗೆ ದೇವರು ಕೊಟ್ಟ ಕೊಡುಗೆ. ಮಾನವ ಇಂದು ಹಕ್ಕಿಯಂತೆ ಹಾರುವುದನ್ನು ಕಲಿತಿದ್ದಾನೆ; ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆದರೆ ಭೂಮಿಯ ಮೇಲೆ ಮಾನವನಾಗಿರುವುದನ್ನು ಕಲಿಯಲಿಲ್ಲ ಎಂಬುದು ವಿಪರ್ಯಾಸ. ಆಧುನೀಕರಣ, ಕೈಗಾರಿಕೀಕರಣ, ನಗರೀಕರಣದ ಭರಾಟೆಯಲ್ಲಿ ಸ್ವಾರ್ಥಿ ಮಾನವ ಇಂದು, ತನಗೆ ತಿಳಿದೋ ಅಥವಾ ತಿಳಿಯದೆಯೋ, ಪ್ರಕೃತಿಮಾತೆಯನ್ನು ಸಾವಿನ ದವಡೆಗೆ ನೂಕುತ್ತಿದ್ದಾನೆ. ಅಭಿವೃದ್ಧಿಯೆಂಬ ಮಾಯಾ ಜಿಂಕೆಯನ್ನು ಬೆನ್ನುಹತ್ತಿರುವ ಈತ ಕಾಡನ್ನು ಕಾಂಕ್ರಿಟ್ ಕಾಡಾಗಿ ಪರಿವರ್ತಿಸಿದ್ದಾನೆ; ಹಾಡುಹಗಲೇ ಮರಗಳ ಮಾರಣ ಹೋಮ ಮಾಡುತ್ತಿದ್ದಾನೆ. ತಂಪನ್ನು ಧಾರೆಯೆರೆಯುವ ಮುಗಿಲೆತ್ತರದ, ವಿಶಾಲವಾದ ಮರಗಳ ಜಾಗದಲ್ಲಿ ಇಂದು ಮುಗಿಲೆತ್ತರದ ಗಗನಚುಂಬಿ ಕಟ್ಟಡಗಳು, ಬೃಹತ್ ಸ್ಥಾವರಗಳು ರಾರಾಜಿಸುತ್ತಿವೆ. ಅವುಗಳ ಪಕ್ಕದಲ್ಲಿ ದಟ್ಟವಾದ ಕಾರ್ಬನ್ ಹೊಗೆ ಕಾರುತ್ತಿರುವ ಕಾರ್ಖಾನೆಗಳು, ಈತನ್ಮಧ್ಯೆ ವಾಹನಗಳ ರುದ್ರ ನರ್ತನದ ಕರ್ಕಶ ಶಬ್ದದ ಅಬ್ಬರ. ಇವುಗಳನ್ನು ಅಭಿವೃದ್ಧಿಯ ಸಂಕೇತಗಳೆನ್ನಬೇಕೋ ಅಥವಾ ಮಾನವನ ವಿನಾಶಸೂಚಕ ಸಂಕೇತಗಳೆನ್ನಬೇಕೋ ಎಂಬುದು ಗೊಂದಲಮಯ, ಒಟ್ಟಿನಲ್ಲಿ ಮಾನವ ತನ್ನ ಕಾಲಿಗೆ ತಾನೇ ಕೊಡಲಿಯನ್ನು ಹಾಕಿಕೊಳ್ಳುತ್ತ, ತನ್ನ ಭವಿಷ್ಯದ ಗೋರಿಯನ್ನು ಈಗಲೇ ತಾನೇ ತೋಡಿಕೊಳ್ಳುತ್ತಿರುವ ಸತ್ಯವನ್ನಂತೂ ಮರೆಮಾಚುವಂತಿಲ್ಲ.

ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ
ಎಳ್ಳುಜೀರಿಗೆ ಬೆಳೆಯೋಳ । ಬೂಮ್ತಾಯ
ಎದ್ದೊಂದು ಗಳಿಗೆ ನೆನೆದೇನ

ಹಿಂದೆ ಜನಪದರ ಕಾಲವೊಂದಿತ್ತು. ಅವರಲ್ಲಿ ಅದೆಂತಹ ಪರಿಸರ ಪ್ರೇಮ! ಪರಿಸರದ ಜೊತೆಗೆ ಅದೆಂತಹ ನಿಕಟತೆ! ಅವರ ದೈನಂದಿನ ಚಟುವಟಿಕೆಗಳು ಪ್ರಕೃತಿತಾಯಿಯನ್ನು ನಮಿಸುವ ಮೂಲಕವೇ ಪ್ರಾರಂಭವಾಗುತ್ತಿದ್ದವು. ಪರಿಸರವನ್ನು ನಮಿಸುವ ಮೂಲಕವೇ ಪ್ರಾರಂಭವಾಗುತ್ತಿದ್ದವು. ಪರಿಸರವನ್ನು ಮನಬಂದಂತೆ ಮಲಿನ ಮಾಡುತ್ತಿರುವ ಮಾನವನಿಗೆ, ಆದರ್ಶ ಜೀವನ ನಡೆಸುವುದಕ್ಕೆ ಈ ಜನಪದರೇ ಮಾದರಿ ಎಂದರೆ ತಪ್ಪಾಗಲಾರದು. ಭೂಮಿ ಇಂದು ಕುದಿಯುತ್ತಿದೆ; ಜಾಗತಿಕ ತಾಪಮಾನ ಮಿತಿ ಮೀರಿದೆ; ಪ್ರಕೃತಿ ತಾಯಿಯ ಒಡಲು ಬರಿದಾಗತೊಡಗಿದೆ. ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕರಾದ ಡಾ.ವಿ.ಚಂದ್ರಶೇಖರ ನಂಗಲಿಯವರು, 'ನೀರು: ಭೂಮಿ ತಾಯಿಯ ಎದೆ ಹಾಲು' ಎಂದು ನೀರನ್ನು ಭೂಮಿ ತಾಯಿಯ ಎದೆಹಾಲಿನೊಂದಿಗೆ ಸಮೀಕರಿಸಿರುವುದು ಅದ್ಭುತ. ಅವರ ಈ ಮಾತಿನಲ್ಲಿ

ನಾವು ಪ್ರಸಕ್ತ ವಿದ್ಯಮಾನದಲ್ಲಿ ನೀರಿಗೆ ಎಷ್ಟು ಮಹತ್ವ ಇದೆ ಎನ್ನುವುದನ್ನು ಅರಿತುಕೊಳ್ಳಬಹುದು. ಆದರೆ ಇಂದು ಮಾನವ ತನ್ನ ಸ್ವಾರ್ಥಪ್ರೇರಿತ ಕೃತ್ಯದಿಂದಾಗಿ, ಎಲ್ಲಿ ಬೇಕಾದಲ್ಲಿ ಗಣಿಗಳನ್ನು ಕೊರೆದು, ಆ ಎದೆಹಾಲನ್ನು ಹಾಳುಗೆಡುವುತ್ತಿರುವುದು ಭವಿಷ್ಯದ ದುರಂತಸೂಚಕವಾಗಿದೆ. ಕ್ಯೂಬಾ ದೇಶದ ಫೀಡೆಲ್ ಕ್ಯಾಸ್ಟ್ರೋ, "ಭಾರತದಲ್ಲಿ ನೀರಿನ ಅಪವ್ಯಯ ಹೀಗೇ ಮುಂದುವರೆಯುತ್ತಿದ್ದಲ್ಲಿ ಮುಂದೊಂದು ದಿನ ಅದು ನೀರಿನ ಹಾಹಾಕಾರವನ್ನು ಎದುರಿಸುತ್ತದೆ" ಎಂದು ಎಚ್ಚರಿಸಿರುವುದು ಗಮನಾರ್ಹ. ವಿಶ್ವಸಂಂಸ್ಥೆಯ ವರದಿಯೊಂದು, ಇದೇ ರೀತಿ ಕೊಳವೆಬಾವಿಗಳನ್ನು ತೋಡುತ್ತಹೋದರೆ, ಭಾರತವು ೨೦೨೫ರ ವೇಳೆಗೆ ತನ್ನ ಅಂತರ್ಜಲದ ಮಟ್ಟವನ್ನು ಕಳೆದುಕೊಳ್ಳಲಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದೆ.

ವಿಶ್ವಸಂಸ್ಥೆಯ ನಿಯೋಗವೊಂದು ಜಾಗತಿಕ ತಾಪಮಾನದ ಬದಲಾವಣೆ ಕುರಿತು ವರದಿಯನ್ನು ಸಿದ್ಧಪಡಿಸಿದೆ. ಅದರಲ್ಲಿ ಈ ರೀತಿ ಹೇಳಲಾಗಿದೆ: "ನಾವೀಗ ಜಾಗತಿಕ ಸಂಕಷ್ಟವನ್ನು ಎದುರಿಸುತ್ತಿದ್ದೇವೆ. ನಾವು 'ಹಸಿರುಮನೆ'ಯ ಅನಿಲಗಳನ್ನು ಇದೇ ರೀತಿ ಉತ್ಪಾದಿಸುತ್ತ ಹೋದರೆ, ಗುರುತೇ ಇರದ ಹಾಗೆ ನಾಶವಾಗಿ ಹೋಗುತ್ತೇವೆ." ಈ ವರದಿಯ ಧ್ವನಿಯನ್ನು ಗಮನಿಸಿದರೆ ಪರಿಸರವನ್ನು ಮನಬಂದಂತೆ ಹಾಳು ಮಾಡುತ್ತಿರುವ ಎಂತಹ ಕಂಟುಕನ ಕಲ್ಲುಹೃದಯದಲ್ಲೂ ದಿಗಿಲು ಭುಗಿಲಂತೆ ಹುಟ್ಟಿ ಕರುಣೆಯ ಬುಗ್ಗೆ ಚಿಮ್ಮಲೇಬೇಕು. ಮಾನವ ಎಷ್ಟೆಷ್ಟು ಮುಂಚೂಣಿಯಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದಾನೆಯೋ ಅಷ್ಟಷ್ಟೇ ತನ್ನ ಆಯಸ್ಸನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾನೆ ಎಂದರೆ ತಪ್ಪಾಗಲಾರದು. ನಮ್ಮ ಪೂರ್ವಜರು ಬಹುತೇಕ ಶತಾಯುಷಿಗಳೇ ಆಗಿದ್ದರು. ಅವರು ಅಷ್ಟು ದೀರ್ಘವಾಗಿ ಜೀವಿಸಲು ಕಾರಣವಾದರೂ ಏನೆಂದು ಪ್ರಶ್ನಿಸಿದಾಗ, ನಮ್ಮ ಸಮಾಜದ ಕೆಲ ದೀರ್ಘಾಯುಷಿಗಳಿಂದ ಬರುವಂತಹ ಉತ್ತರ ಒಂದೇ; 'ಅವರು ಬಹಳ ಪುಣ್ಯದ ಕೆಲಸ ಮಾಡ್ತಿದ್ರು' ಹಾಗೆಂದುಕೊಂಡರೆ ಅದು ನಮ್ಮ 'ಸಾಂಸ್ಕೃತಿಕ ಮೌಢ್ಯ' ಎನ್ನಬೇಕಾಗುತ್ತದೆ. ಅಷ್ಟಕ್ಕೂ ಅವರನ್ನು ಪುನಃ ಪ್ರಶ್ನಿಸಿ, "ಹಾಗಾದರೆ, ನಾವೇನು ಪಾಪಿಗಳಾ" ಎಂದರೆ, "ಹೌದು, ನೀವು ಪಾಪಿಗಳು. ಪ್ರಕೃತಿಯ ಕಗ್ಗೊಲೆ ಮಾಡುತ್ತಿರುವ ಕಟುಕರು" ಎಂಬ ಉತ್ತರ ದೊರೆಯಿತು. ಇಷ್ಟಾದ ಮೇಲೆ ಮತ್ತೆ ತುಟಿ ಬಿಚ್ಚುವ ಧೈರ್ಯ ನನ್ನಲ್ಲಿರಲಿಲ್ಲ.

ನಮ್ಮ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣವು ೧೯೯೦ರಲ್ಲಿ ಶೇ.೦.೦೩೫ ರಷ್ಟಿದ್ದು, ೨೦೧೨ರಲ್ಲಿ ಶೇ.೦.೦೪೯ರಷ್ಟಾಗಿದೆ. ಅದು ೨೧ನೇ ಶತಮಾನದ ಮಧ್ಯಭಾಗದಲ್ಲಿ ಶೇ.೦.೦೫೫ರಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ವಿಶ್ವಮಟ್ಟದಲ್ಲಿ ಕಾರ್ಬನ್ ಡೈ ಆಕ್ಸೈಡ್ ಹೊರಸೂಸುವಿಕೆಯ ಇ.ಪಿ.ಎ ವರದಿಯ (೨೦೦೮) ಪ್ರಕಾರ, ಭಾರತ ಮಾತ್ರವೇ ಪ್ರತಿವರ್ಷ ಜಗತ್ತಿಗೆ೬% ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುತ್ತಿದ್ದು, ಕಾರ್ಬನ್ ಹೊರಸೂಸುವಿಕೆಯಲ್ಲಿ ವಿಶ್ವದಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಆದರೆ ಮುಂದುವರಿದ ದೇಶಗಳ ಪಾತ್ರ ಇನ್ನೂ ಹೆಚ್ಚು. ಉದಾಹರಣೆಗೆ ಚೀನಾ ೨೩% ಪ್ರಮಾಣದಷ್ಟು ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುತ್ತಿದ್ದು, ಪ್ರಥಮ ಸ್ಥಾನದಲ್ಲಿದೆ, ಅಮೇರಿಕಾ ೧೯.೫% ಬಿಡುಗಡೆ ಮಾಡುತ್ತಿದ್ದು, ದ್ವಿತೀಯ ಸ್ಥಾನದಲ್ಲಿದೆ. ವಾಹನಗಳು ಉಗುಳುವ ಹೊಗೆಯ ಪ್ರಮಾಣದ ಸಮೀಕ್ಷೆಯೊಂದರ ಪ್ರಕಾರ ವಾಹನಗಳ

ಹೊಗೆಯೇ ಶೇ.೬೫ರಷ್ಟು ವಾಯುಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎಂದು ತಿಳಿದು ಬಂದಿದೆ. ವಾಯುಮಾಲಿನ್ಯವನ್ನು ಉಂಟುಮಾಡುವ ಮಲಿನಕಾರಕಗಳಲ್ಲಿ ಕಾರ್ಬನ್‌ಮಾನಾಕ್ಸೈಡ್ ಪ್ರಮುಖವಾದದ್ದು. ವಾಹನಗಳು ಉಗುಳುವ ಹೊಗೆ ಇದರ ಪ್ರಮುಖ ಆಕರ. ಕೈಗಾರಿಕೆಗಳು ಹೊರಸೂಸುವ ಕೆಲವು ಮಲಿನಕಾರಕಗಳ ತೀವ್ರತೆಯಿಂದಾಗಿ ಇಂದು ಆಮ್ಲೀಯ ಮಳೆ ಉಂಟಾಗುತ್ತಿದ್ದು, ಇದು ಭೂತಾಯಿಯ ಸಾರವನ್ನು ಕಡಿಮೆ ಮಾಡುತ್ತಿದೆಯಲ್ಲದೆ, ಬೆಳೆದ ಬೆಳೆಯ ಹಾನಿ ಹಾಗೂ ಜಗತ್ಪ್ರಸಿದ್ಧ ಸ್ಮಾರಕಗಳು ಬಣ್ಣ ಕಳೆದುಕೊಳ್ಳಲು ಕಾರಣವಾಗಿದೆ. ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾಗಿರುವ ತಾಜ್‌ಮಹಲ್‌ನ ಬಣ್ಣ ಬದಲಾಗುತ್ತಿರುವುದಕ್ಕೆ ಈ ಆಮ್ಲೀಯ ಮಳೆಯೇ ಕಾರಣ. ಆದರೆ ಕಾರ್ಬನ್ ಡೈ ಆಕ್ಸೈಡನ್ನು ತೆಗೆದುಕೊಂಡು ಆಮ್ಲಜನಕ ಬಿಡುಗಡೆ ಮಾಡಿ, ನಮ್ಮ ಮೇಲೆ ಕರುಣೆ ತೋರುತ್ತಿರುವ ಮರಗಳನ್ನು ನಾವು ಕಡಿದುಹಾಕುತ್ತಿರುವುದು ದುರಂತವೇ ಸರಿ.

ನಾವೆಲ್ಲರೂ ಉಪಯೋಗಿಸುತ್ತಿರುವ ರೆಫ್ರಿಜಿರೇಟರ್‌ಗಳಿಂದ ಬಿಡುಗಡೆಯಾಗುತ್ತಿರುವ ಕ್ಲೋರೋಫ್ಲೋರೋ ಕಾರ್ಬನ್ ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಿರುವ ಕೆಲವು ರಾಸಾಯನಿಕಗಳಿಂದ 'ಸೌರಕೊಡೆ' ಅಂದರೆ ಓಝೋನ್ ಪದರ ನಾಶವಾಗುತ್ತಿದೆ. ಈ ರಾಸಾಯನಿಕಗಳು ವಾಯುಮಂಡಲಕ್ಕೆ ಕ್ಲೋರಿನ್ ಅಣುಗಳನ್ನು ಬಿಡುಗಡೆ ಮಾಡುತ್ತವೆ. ಒಂದು ಕ್ಲೋರಿನ್ ಪರಮಾಣು ೧ಲಕ್ಷ ಓಝೋನ್ ಅಣುಗಳನ್ನು ನಾಶ ಮಾಡುತ್ತದೆ. ಇದರ ಪರಿಣಾಮವಾಗಿ ಇಂದು ನಮ್ಮ ಓಝೋನ್ ಪದರ ಶಿಥಿಲವಾಗಿದ್ದು, ಅದರಿಂದ ತೀಕ್ಷ್ಣವಾದ ಸೂರ್ಯನ ಕಿರಣಗಳು ಭೂಮಿಗೆ ನೇರವಾಗಿ ತಾಕುತ್ತಿವೆ. ಈ ಕಿರಣಗಳು ಮನುಷ್ಯನ ಮೈಗೆ ಸ್ಪರ್ಶಿಸುವುದರಿಂದ ಇಂದು ಆತ ಹಲವಾರು ಭಯಾನಕ ರೋಗಗಳಿಗೆ ತುತ್ತಾಗಿದ್ದಾನೆ. ಇದರಿಂದ ಭೂಮಿಯ ತಾಪಮಾನದ ಏರಿಕೆಯಾಗುತ್ತಿದ್ದು, ಹಿಮಪಾತ ಉಂಟಾಗಿ ಸಮುದ್ರದ ನೀರಿನ ಮಟ್ಟ ಏರುವುದಕ್ಕೂ ಕಾರಣವಾಗುತ್ತಿದೆ. ಈ ಪ್ರಕ್ರಿಯೆ ಹೀಗೆಯೇ ಮುಂದುವರೆದರೆ ಜಗತ್ತಿನ ಅಂತ್ಯ ಬಹು ದೂರವೇನಿಲ್ಲ.

ಸುಮಾರು ಆರು ದಶಕಗಳ ಹಿಂದೆ ಭಯಾನಕವಾದ ಎರಡನೇ ಮಹಾಯುದ್ಧ ಜರುಗಿತು. ಯುದ್ಧ ಉಂಟುಮಾಡಿದ ಈ ಭಯೋತ್ಪಾದನೆ ಜನರ ಮನಸ್ಸಿನಲ್ಲಿ ದಿಗಿಲನ್ನು ಹುಟ್ಟಿಸಿತ್ತು. ಇದ್ದಕ್ಕಿದ್ದಂತೆ ೧೯೪೫, ಅಗಸ್ಟ್ ೬ರ ಬೆಳಗಿನ ಜಾವ ಅಮೇರಿಕಾದಿಂದ ಜವರಾಯನನ್ನು ಹೊತ್ತು ತಂದ ಯುದ್ಧವಿಮಾನಗಳು ಜಪಾನಿನ ಸುಂದರ ನಗರಗಳಾದ ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಹಾರಿ ತಾಂಡವನೃತ್ಯವನ್ನು ಮಾಡಿದವು. ಆ ರಾಕ್ಷಸಕೃತ್ಯಕ್ಕೆ ಎಷ್ಟೋ ಜನರು ಜೀವಂತ ಶವಗಳಾದರು ಮತ್ತು ನೂರಾರು ಜನ ಅಂಗವಿಕಲರಾದರು. ವಿವಿಧ ರೀತಿಯ ಹಾನಿಗೊಳಗಾದ ಜನರ ಸಂಖ್ಯೆ ಒಟ್ಟು ೧,೩೬,೦೦೦. ಈ ಘಟನೆ ಸಂಭವಿಸಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕಳೆದರೂ ಅಲ್ಲಿ ಹುಟ್ಟುತ್ತಿರುವ ಮಕ್ಕಳು ಇನ್ನೂ ವಿಕಲಾಂಗರೇ ಆಗಿರುತ್ತಾರಂತೆ. ಆ ನರಕಸದೃಶ ಘಟನೆಯಿಂದ ನಮ್ಮ ವಾತಾವರಣ ಕಲುಷಿತಗೊಂಡಿದ್ದಂತೂ ನಿಜ. ಭಾರತದಲ್ಲಿ ಸಂಭವಿಸಿದ ಭೂಪಾಲ್ ದುರಂತ ಮತ್ತು ರಷ್ಯಾದ ಚರ್ನೋಬಿಲ್ ದುರಂತಗಳೂ ಕೂಡ ಇದಕ್ಕೆ ಹೊರತಾಗಿಲ್ಲ.

ಆಧುನೀಕರಣದ ಪರಿಣಾಮವಾಗಿ ನಮ್ಮ ಜೀವನದ ಶೈಲಿಯೇ

ಬದಲಾಗಿಬಿಟ್ಟಿದೆ. ನಾವು ಉಪಯೋಗಿಸುತ್ತಿರುವ ಉಪಭೋಗ ವಸ್ತುಗಳು ಕೂಡ ದಿನೇ ದಿನೇ ಹೆಚ್ಚುತ್ತಲೇ ಇವೆ. ಹೀಗಾಗಿ ಘನತ್ಯಾಜ್ಯ ವಸ್ತುಗಳ ಉತ್ಪತ್ತಿಯೂ ಕೂಡ ಹೆಚ್ಚಾಗುತ್ತಿದೆ. ಅಮೇರಿಕದ ನ್ಯೂಯಾರ್ಕ್ ಮಹಾನಗರ ಒಂದರಲ್ಲಿಯೇ ಪ್ರತಿದಿನ ೨೫,೦೦೦ ಟನ್ ಘನತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತಿವೆ. ಭಾರತದ ಬೃಹತ್ ಮೆಟ್ರೋಪಾಲಿಟಿನ್ ನಗರಗಳು ಎನಿಸಿಕೊಂಡಿರುವ ದೆಹಲಿ, ಮುಂಬೈ, ಕೊಲ್ಕತ್ತಾ, ಹೈದರಾಬಾದ್, ಬೆಂಗಳೂರುಗಳಲ್ಲಿ ಪ್ರತಿವರ್ಷ ೩ದಶಲಕ್ಷ ಟನ್ ಘನತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತಿವೆ. ಘನತ್ಯಾಜ್ಯ ವಸ್ತುಗಳ ಉತ್ಪತ್ತಿಯು ಪರಿಸರ ಮಾಲಿನ್ಯದ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿ ಬಿಟ್ಟಿದೆ. ಏಕೆಂದರೆ ಇವು ಪರಿಸರವನ್ನು ಎಲ್ಲ ರೀತಿಯಲ್ಲೂ ಮಲಿನಗೊಳಿಸುತ್ತಿವೆ. ಇವುಗಳನ್ನು ದಹಿಸಿದರೆ ವಾಯುಮಾಲಿನ್ಯವಾಗುತ್ತದೆ; ತೆರೆದ ಪ್ರದೇಶದಲ್ಲಿ ಹಾಕುವುದರಿಂದ ಭೂಮಾಲಿನ್ಯ, ಜಲಮಾಲಿನ್ಯವಾಗುತ್ತದೆ; ಭೂಮಿಯ ಆಳದಲ್ಲಿ ಹಾಕಿದರೆ ಅಂತರ್ಜಲ ಮಲಿನವಾಗುತ್ತದೆ.

ಘನ ತ್ಯಾಜ್ಯ ವಸ್ತುಗಳಲ್ಲಿ ಪರಿಸರದ ಶತ್ರುವಾಗಿ ಪರಿಣಮಿಸಿರುವ ಪ್ಲಾಸ್ಟಿಕ್‌ನ ಪಾತ್ರ ಅಗಾಧವಾದದ್ದು. ಇದು ಜೈವಿಕವಾಗಿ ವಿಘಟನೆಗೊಳ್ಳದಿರುವ ವಸ್ತುವಾಗಿರುವುದರಿಂದ, ಮಾನವನಿಗೆ ಮತ್ತು ಮೂಕಪ್ರಾಣಿಗಳಿಗೆ ಕಂಟಕಪ್ರಾಯವಾಗಿ ಪರಿಣಮಿಸಿದೆ. ಪ್ಲಾಸ್ಟಿಕ್‌ನ ಪ್ರಯೋಗ ಮೂಕಪ್ರಾಣಿಗಳ ಮೇಲೆ ಪರಿಣಾಮ ಬೀರುವುದೇ ಹೆಚ್ಚು. ಉದಾಹರಣೆಗೆ ೧೯೭೭, ಜೂನ್ ತಿಂಗಳಿನಲ್ಲಿ ಒಂದು ಮೃಗಾಲಯದಲ್ಲಿದ್ದ ಬಿಳಿಜಿಂಕೆಯೊಂದು ಇದ್ದಕ್ಕಿದ್ದಂತೆ ಮರಣವನ್ನಪ್ಪಿತು. ಆ ಪ್ರಾಣಿಯ ಶವಪರೀಕ್ಷೆ ಮಾಡಿದಾಗ ಕಾಕತಾಳೀಯವೆಂಬಂತೆ ೪.೫ ಕಿ.ಗ್ರಾಂ. ಪ್ಲಾಸ್ಟಿಕ್ ಇತ್ತೆಂದು ಗೊತ್ತಾಯಿತು. ಒಂದು ಮನೆಯಲ್ಲಿ ಐದು ಎಮ್ಮೆ ಕರುಗಳು ಒಂದೇ ದಿನ ಮರಣ ಹೊಂದಿದವು. ಕಾರಣ ಪ್ಲಾಸ್ಟಿಕ್ ಸೇವನೆ. ಈ ಪ್ಲಾಸ್ಟಿಕ್‌ನ ಬಳಕೆ ಇಂದು ಮಿತಿ ಮೀರಿದೆ. ಹಾಲಿನಿಂದ ಹಿಡಿದು ಬಹುತೇಕ ಜನೋಪಯೋಗಿ ವಸ್ತುಗಳು ಪ್ಲಾಸ್ಟಿಕ್‌ನಿಂದಲೇ ಕೂಡಿವೆ. ಇದು ವಿಷಾದದ ಸಂಗತಿಯಲ್ಲವೇ?

ಸಂಪೂರ್ಣವಾಗಿ ವಾಣಿಜ್ಯೀಕರಣಗೊಂಡಿರುವ ಮಾನವನು ತ್ವರಿತವಾಗಿ ಫಸಲನ್ನು ಪಡೆದು ಲಾಭಗಳಿಸುವ ಉದ್ದೇಶದಿಂದ ಆಧುನಿಕ ಕೀಟನಾಶಕಗಳು, ರಸಗೊಬ್ಬರಗಳನ್ನು ವಿಪರೀತ ಬಳಸಿ ಭೂತಾಯಿಯನ್ನು ನಿತ್ರಾಣಗೊಳಿಸಿದ್ದಾನೆ. ಇಂತಹ ರಾಸಾಯನಿಕ ಪದಾರ್ಥಗಳು ಮಳೆಯ ನೀರಿನ ಜೊತೆ ಸೇರಿಕೊಂಡು, ಜಲಮೂಲಗಳಿಗೆ ಸೇರಿ ಮಾಲಿನ್ಯವನ್ನು ಮಾಡುತ್ತಿವೆ. ಇದರ ಪರಿಣಾಮವೆಂಬಂತೆ ಭಾರತದಲ್ಲಿ ಫೈಲಾರರಿಯಾಸಿಸ್ ಹಾಗೂ ಜಪಾನ್‌ನಲ್ಲಿ ಮೀನಮಾಟದಂತಹ ರೋಗಗಳು ಕಂಡುಬಂದಿವೆ. ಫೈಲಾರಿಯಾಸಿಸ್ ರೋಗದಿಂದ ೧೯೭೭, ಡಿಸೆಂಬರ್ ತಿಂಗಳೊಂದರಲ್ಲಿಯೇ ೫೦೦ ಜನ ಮಕ್ಕಳು ವಿಕಲಾಂಗರಾದರು. 'ಪಿಯರ್‌ಸನ್' ಎಂಬ ವಿಜ್ಞಾನಿಯ ಪ್ರಕಾರ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿವರ್ಷ ೧೦,೦೦೦ಕ್ಕೂ ಅಧಿಕ ಜನರು ಕೀಟನಾಶಕಗಳ ಪ್ರಭಾವದಿಂದ ಸಾಯುತ್ತಿದ್ದಾರೆ.

ಮಾನವ ಬುದ್ಧಿ ಜೀವಿ. ಆತ ಬಾಹ್ಯಾಕಾಶಕ್ಕೆ ಲಗ್ಗೆ ಹಾಕಿರುವುದು ಸೋಜಿಗದ ಸಂಗತಿ. ಆದರೆ ಅಲ್ಲಿಯೂ ಕೂಡ ಈಗ ತನ್ನ ಹಳೇ ಚಾಳಿಯನ್ನು ಮುಂದುವರಿಸಿದ್ದಾನೆ. ಕಳೆದ ೪೦ ವರ್ಷಗಳಿಂದ ಮನುಷ್ಯನು ಬಹ್ಯಾಕಾಶವನ್ನು ಕಲುಷಿತಗೊಳಿಸುತ್ತಿದ್ದು.

ಈವರೆಗೆ ೨,೫೦೦ ಬಾಹ್ಯಾಕಾಶ ನೌಕೆಗಳನ್ನು ಹಾರಿಬಿಟ್ಟಿದ್ದಾನೆ. ಇದರಿಂದಾಗಿ, ಬಹ್ಯಾಕಾಶದಲ್ಲಿ ೬ ಲಕ್ಷ ಟನ್‌ಗಿಂತ ಹೆಚ್ಚು ತ್ಯಾಜ್ಯವಸ್ತುಗಳು ಸೇರಿಕೊಂಡಿವೆ ಎಂದು ಕಂಡುಹಿಡಿಯಲಾಗಿದೆ. ಬಾಹ್ಯಾಕಾಶದಲ್ಲಿನ ವಿವಿಧ ಪ್ರಯೋಗಗಳಿಗೆ ಬಳಸಿದ ರಾಸಾಯನಿಕ ವಸ್ತುಗಳಿಂದ ವಿಕಿರಣ ಮಾಲಿನ್ಯ ಉಂಟಾಗುತ್ತಿದೆ.

ಇಂಗ್ಲಿಷ್ ಸಾಹಿತ್ಯದ ಕವಿಯೊಬ್ಬ 'ಒಬ್ಬ ಮನುಷ್ಯನನ್ನು ಕೊಲ್ಲುವ ಐದು ದಾರಿಗಳು' ಎಂಬ ತನ್ನ ಕವಿತೆಯಲ್ಲಿ 'ಮಾನವನು ತನ್ನ ಸಹಜ ಸಾವಿಗೆ ಮುಂಚೆಯೇ ಸಾಯುತ್ತಿದ್ದಾನೆ' ಎಂದು ಮನೋಜ್ಞವಾಗಿ ಹೇಳಿದ್ದಾನೆ. ಇದಕ್ಕೆಲ್ಲ ಮನುಷ್ಯ ಮಾಡಿದಂತಹ ಪರಿಸರ ಮಾಲಿನ್ಯವೇ ಎಂದು ವಿಶದೀಕರಿಸಿದ್ದಾನೆ. ಕೇವಲ ಮಾನವ ಮಾತ್ರವಲ್ಲ, ಇವತ್ತು ಇಡಿ ಜೀವಸಂಕುಲಕ್ಕೆ ಅಪಾಯ ಬಂದೊದಗಿದೆ. ಹಿಂದೆ ಪ್ರತಿದಿನ ಎದ್ದಕೂಡಲೇ, ಬೀಸುವ ಮಂದಗಾಳಿಯಲ್ಲಿ ತೇಲಿ ಬರುವ ಪುಟ್ಟ ಪುಟ್ಟ ಗುಬ್ಬಿಗಳ ಕಲರವ ಬಾಲಕನಾಗಿದ್ದಾಗ ನನ್ನ ಕಿವಿಗಳಿಗೆ ಅದೆಷ್ಟೊಂದು ಮುದ ನೀಡುತ್ತಿತ್ತು! ಆದರೆ ಆ ಅದೃಷ್ಟ ನನಗೆ ಈಗಿಲ್ಲ. ಏಕೆಂದರೆ ಮಾನವನ ಕಾಟವನ್ನು ತಾಳಲಾರದೇ ಮುದ್ದಾದ ಆ ಹಕ್ಕಿಗಳು ಅಜ್ಞಾತ ಲೋಕಕ್ಕೆ ಪಯಣಿಸಿವೆ. ಹಾಗಾದರೆ ಈ ಪಾಪಿ ಮಾನವ ಮಾಡಿರುವುದಾದರೂ ಏನು?

ಯಾರೋ ಒಬ್ಬರು ಪೂರ್ವಜರು ಹಿಂದೊಮ್ಮೆ ಹೇಳಿದ್ದರಂತೆ, ಮುಂದೊಂದು ದಿನ ಮಾನವ ತಾನೇ ಮಾತನಾಡುತ್ತಾನೆ, ತಾನೇ ನಗುತ್ತಿರುತ್ತಾನೆ ಎಂದು. ಆ ಮಾತಿನ ಗೂಢಾರ್ಥವೇ ಇಂದು ನಾವು ಉಪಯೋಗಿಸುತ್ತಿರುವ, ಹಕ್ಕಿಗಳ ಪಾಲಿಗೆ ಯಮಸ್ವರೂಪಿ ಸಾಧನವಾದ ಮೊಬೈಲ್ ಫೋನ್. ಮೊಬೈಲ್‌ನಿಂದ ಹೊರ ಹೊಮ್ಮುತ್ತಿರುವ ಶಬ್ದಾತೀತ ತರಂಗಗಳು ಮುಗ್ಧ ಹಕ್ಕಿಗಳ ಪ್ರಾಣವನ್ನು ತೆಗೆಯುತ್ತಿವೆ. ಮಾರಿಷಸ್ ದ್ವೀಪಗಳಲ್ಲಿ ರಾರಾಜಿಸುತ್ತಿದ್ದ ಡೋಡೊ ಎಂಬ ಆಕರ್ಷಕ ಹಕ್ಕಿ ಇಂದು ಮಾನವನ ಲೋಭಕ್ಕೆ ಗುರಿಯಾಗಿ ಕಣ್ಮರೆಯಾಗಿ ಹೋಗಿದೆ. ನೀಲಗಿರಿ ಎಲೆ ಕೋತಿ, ನೀಲಗಿರಿ ತಾರ್, ಸಿಂಹಬಾಲದ ಸೀಂಗಳೀಕ ಮುಂತಾದ ಪ್ರಾಣಿಜಾತಿಗಳು ಇಂದು ಅಪಾಯದ ಅಂಚಿನಲ್ಲಿವೆ.

ಹೀಗೆ ನಮ್ಮ ಜೀವ ವೈವಿಧ್ಯತೆಯನ್ನು ನಾಶಮಾಡುವಲ್ಲಿಯೂ ಮಾನವನು ಹಿಂದೇಟು ಹಾಕಿಲ್ಲ. ಆದ್ದರಿಂದಲೇ ಐ.ಪಿ.ಸಿ.ಸಿ.ಯ ಚೇರ್ಮನ್‌ರಾದ ಡಾ.ಆರ್. ಕೆ.ಪಚೌರಿಯವರು, "ಭೂಮಂಡಲದ ಸಕಲ ತಳಿಗಳನ್ನೂ ಮಾನುಕುಲವು ವಿನಾಶಗೊಳಿಸುತ್ತಿರುವುದು ಸುಸ್ಪಷ್ಟವಾಗಿರುವುದರಿಂದ, ಸ್ವತಃ ಮಾನವರೇ ಮಾನವ ಜನಾಂಗದ ಭವಿಷ್ಯವನ್ನು ವಿನಾಶಗೊಳಿಸುತ್ತಿದ್ದಾರೆಂದು ಹೇಳಲೇಬೇಕಾಗಿದೆ" ಎಂದು ನುಡಿದಿದ್ದಾರೆ. ಎಂಥ ವಿಪರ್ಯಾಸ!

ತಾಯಿ ಕರುಣಾಮಯಿ; ಮಕ್ಕಳು ತನಗೆ ಎಷ್ಟೇ ತೊಂದರೆ ಕೊಟ್ಟರೂ, ತಾನು ಮಾತ್ರ ತನ್ನ ಮಕ್ಕಳಿಗೆ ಯಾವ ಕೇಡೂ ಮಾಡಲಾರಳು. ಆದರೆ ವಿಪರ್ಯಾಸವೆಂದರೆ, ಪ್ರಕೃತಿತಾಯಿಯ ಕುಡಿಯಾದ ಮಾನವ ತನ್ನ ತಾಯಿಯನ್ನೇ ಕೊಲೆ ಮಾಡಲು ಹೊರಟಿದ್ದಾನೆ. ಈಗಲಾದರೂ ಅವನು ಎಚ್ಚೆತ್ತುಕೊಳ್ಳಲೇಬೇಕು. ಇಲ್ಲದಿದ್ದರೆ ಅದರ ಭೀಕರ ಪರಿಣಾಮವನ್ನು ತಾನೇ ಅನುಭವಿಸಬೇಕಾಗುತ್ತದೆ. ಈ ಮಾನವನಿಗೆ ತಾಯಿಯ ಮಹತ್ವ ಗೊತ್ತಿಲ್ಲ ಎಂದೆನಿಸುತ್ತದೆ. ಜನಪದರು ಅದಕ್ಕಾಗಿಯೇ, "ದುಡ್ಡು ಕೊಟ್ಟರೆ ಬೇಕಾದ್ದ ಸಿಗತೈತಿ ಈ ಜಗದಲಿ ಕಾಣೋ, ಹಡೆದ

ತಾಯಿಯನು ಕಳೆದುಕೊಂಡ ಮ್ಯಾಲ ಮತ್ತೆ ಸಿಗುವಳೇನೋ" ಎಂದು ಹೇಳಿರುವುದು ಆತ ಈಗಲಾದರೂ ಬದಲಾಗಬೇಕಾಗಿದೆ. ವೃಕ್ಷಗಳ ಮಾರಣಹೋಮ ಮಾಡುತ್ತಿರುವ ಆತ ಭಾರತೀಯ ಸಂಸ್ಕೃತಿಗೆ ಹಿಂದಿರುಗಬೇಕಾಗಿದೆ. ಒಂದು ಸುಭಾಷಿತ ಹೀಗೆ ಹೇಳುತ್ತದೆ:

ಹತ್ತು ಬಾವಿಗಳು ಒಂದು ಕೆರೆಗೆ ಸಮ
ಹತ್ತು ಕೆರೆಗಳು ಒಂದು ಸರೋವರಕ್ಕೆ ಸಮ
ಹತ್ತು ಸರೋವರಗಳು ಒಬ್ಬ ಮಗನಿಗೆ ಸಮ
ಹತ್ತು ಮಕ್ಕಳು ಒಂದು ಮರಕ್ಕೆ ಸಮ

ಅಭಿವೃದ್ಧಿಗೆ ಜೋತುಬಿದ್ದು ಏನನ್ನೂ ಲೆಕ್ಕಿಸದಿರುವ ಮಾನವ ಗೌತಮ ಬುದ್ಧನ ಈ ಮಾತನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅವನು ಹೇಳುತ್ತಾನೆ: "ಅರಣ್ಯವೆಂದರೆ ವಿಶಿಷ್ಟ ಜೀವಕೋಶ. ಅದು ತನಗಾಗಿ ಏನನ್ನೂ ಬೇಡದೆ, ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನು ಧಾರೆ ಎರೆಯುತ್ತದೆ; ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ; ತನ್ನನ್ನು ಕಡಿಯಲು ಕೊಡಲಿ ಎತ್ತಿದವನಿಗೂ ನೆರಳು ನೀಡುತ್ತದೆ."

ಜಗತ್ತಿನ ಮುಂದುವರಿದ ದೇಶಗಳು ಪರಿಸರ ಮಾಲಿನ್ಯ ಮಾಡುವಲ್ಲಿ ಮುಂಚೂಣಿಯಲ್ಲಿವೆ ಎಂಬುದು ಚಿಂತನಾರ್ಹ. 'ಜಗತ್ತಿನ ಹಿರಿಯಣ್ಣ' ಎಂದು ಕರೆಸಿಕೊಳ್ಳುವ ಅಮೆರಿಕಾ ದೇಶ ಪರಿಸರ ಮಾಲಿನ್ಯ ಮಾಡುವಲ್ಲಿಯೂ ತನ್ನ ಹಿರಿತನವನ್ನು ಬಿಟ್ಟಿಲ್ಲ. "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎನ್ನುವಂತೆ ಇತರ ದೇಶಗಳೂ ಇದೇ ಮಾರ್ಗವನ್ನು ಹಿಡಿಯುತ್ತಿವೆ. ಇಂತಹ ಕೆಟ್ಟ ಅಭ್ಯಾಸವನ್ನು ಇತರ ದೇಶಗಳು ಇಂದು ಬಿಡಬೇಕಾಗಿದೆ. ಆದ್ದರಿಂದಲೇ ಕಾರ್ಲ್‌ಮಾರ್ಕ್ಸ್ ಹೀಗೆ ಹೇಳುತ್ತಾರೆ:

"ಮಾನವ ಪ್ರಕೃತಿಯಿಂದ ಜೀವಿಸುತ್ತಾನೆ. ಪ್ರಕೃತಿಯು ಅವನ ದೇಹದಲ್ಲಿಯೇ ಅಂತರ್ಗತವಾಗಿದೆ. ಆದ್ದರಿಂದ ಅವನು ಭೂಮಿಯಲ್ಲಿ ಬದುಕುಳಿಯಬೇಕಾದರೆ ನಿಸರ್ಗದೊಡನೆ ನಿರಂತರ ಸಂವಾದದಲ್ಲಿ ತೊಡಗಬೇಕಾಗಿದೆ. ಮಾನವನು ಪ್ರಕೃತಿಯ ಅವಿಭಾಜ್ಯ ಅಭೇದ್ಯ ಅಂಗವಾಗಿರುವುದರಿಂದ ಆತನ ಭೌತಿಕ ಮತ್ತು ಮಾನಸಿಕ ಅಸ್ತಿತ್ವವು ಪ್ರಕೃತಿಯನ್ನು ಅವಲಂಬಿಸಿರುತ್ತದೆ."

ಈ ನಿಟ್ಟಿನಲ್ಲಿ ಪ್ರತಿಯೊಂದು ರಾಷ್ಟ್ರವೂ ತಮ್ಮ ತಮ್ಮ ದೇಶದ ಕಲ್ಯಾಣಕ್ಕೆ ಪೂರಕವಾದ ಸುಸ್ಥಿರ ಅಭಿವೃದ್ಧಿಯತ್ತ ಒಲವು ತೋರಿಸಬೇಕಾಗಿದೆ. ಆಚರಣೆಗಳನ್ನು ಕೇವಲ ಆಚರಣೆಗಳಾಗಿಯೇ ಮಾಡಿಕೊಂಡಿರುವ ನಾವು, ಅವುಗಳ ಮಹತ್ವವೇನೆಂಬುದನ್ನು ಇದುವರೆಗೂ ಅರ್ಥ ಮಾಡಿಕೊಂಡಿಲ್ಲ. ಅವುಗಳ ನಿಜಾರ್ಥವನ್ನು ನಾವಿಂದು ತಿಳಿಯಬೇಕಾಗಿದೆ.

ಪ್ರತಿ ವರ್ಷ ಜೂನ್ ೫ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುತ್ತೇವೆ. ಕೇವಲ ಪರಿಸರ ದಿನಾಚರಣೆಯಂದು ಮಾತ್ರ ಪರಿಸರ ಪ್ರೇಮವನ್ನು ತೋರಿಸುವ ನಮ್ಮ ಮಂಕುಬುದ್ಧಿಯನ್ನು ನಾವೀಗ ಬಿಡಬೇಕು, ಬಿಟ್ಟು ಬದಲಾಗಬೇಕು. ಪ್ರತಿ ದಿನವೂ ಪರಿಸರ ದಿನವಾಗಬೇಕು. ನಾವು ಬದಲಾಗುವವರೆಗೂ ನಮ್ಮ ವ್ಯವಸ್ಥೆ ಬದಲಾಗದು.

(ಸಾಭಾರ : ವಿವೇಕಪ್ರಭ)

ವೈಚಾರಿಕ-ವಿಡಂಬನಾತ್ಮಕ ಲೇಖನ

ಭಾಗ್ಯದೊಡನೆ ಭೇಟಿ

– ಎಸ್.ಜಿ.ಸೀತಾರಾಮ್

ಆಂಗ್ಲರಾಹುವಿನಿಂದ ಭರತಭೂಮಿಯು ಮುಕ್ತವಾದ ಶ್ರಾವಣ ಅಮಾವಾಸ್ಯೆಯ ಅಂಚಿನ ಆ ಕಟ್ಟಿರುಳಿನ ಅಮೃತಘಳಿಗೆಯಲ್ಲಿ, ಇಂದು ಸೆಂಟ್ರಲ್ ಹಾಲ್ ಆಫ್ ಪಾರ್ಲಿಮೆಂಟ್ ಎನ್ನುವ ಮಹಿಮಾನ್ವಿತ ವೇದಿಕೆಯಲ್ಲಿ, ಪ್ರಧಾನಿ ನೆಹ್ರೂ ಅವರು ಭಾರತದ ರಾಜ್ಯಾಂಗ ಸಭೆಯನ್ನುದ್ದೇಶಿಸಿ, ಅಸಾಮಾನ್ಯ ಅಸಮಾನತೆ, ಅನಾರೋಗ್ಯ, ಅಜ್ಞಾನ ಇನ್ನಿತರ ಅನಿಷ್ಟಗಳನ್ನು ಅಳಿಸುವ ಬಗ್ಗೆಯೂ; ಸುಖ, ಶಾಂತಿ, ಸಮೃದ್ಧಿ, ನ್ಯಾಯ, ಸ್ವಾತಂತ್ರ್ಯ, ಲೋಕತಂತ್ರ, ಸಾಮಾನ್ಯರ ಸಾಮ್ರಾಜ್ಯ, ಇನ್ನಿತರ ಮೌಲ್ಯಾದರ್ಶಗಳನ್ನು ಸಿದ್ಧಿಸಿಕೊಳ್ಳುವುದರ ಬಗ್ಗೆಯೂ; ಕರ್ತವ್ಯ, ಜವಾಬ್ದಾರಿ, ಶ್ರಮ, ಸೇವೆ, ಮತ್ತಿತರ ನಾಯಕತ್ವ ಗುಣಗಳ ಬಗ್ಗೆಯೂ ಮಾಡಿದ 'ಭಾಗ್ಯದೊಡನೆ ಭೇಟಿ' ಎಂಬ ಭಾಷಣವು ಲೋಕಾನುಶ್ರುತವಾಗಿದೆ. ಆ ವಿದ್ಯುಜ್ಜನಕ ವಾಗ್ಧಾರೆಯಲ್ಲಿ ನೆಹ್ರೂ ಮಹೋದಯರು ಬಯಸಿದ, ಬಣ್ಣಿಸಿದ, ಬಣ್ಣದ ಭೂಮಿಯತ್ತ, ತಮಸ್ಸಿನಿಂದ ಜ್ಯೋತಿಯತ್ತ, ಭಾರತರಥವು ನಿಜಕ್ಕೂ ಸಾಗುತ್ತಿದೆಯೇ ಎಂದು ಕೊಂಚ ಹೊರಳಿ ನೋಡುವುದು ಇಂದಿನ ನವಭಾರತೋದಯ ದಿನೋತ್ಸವದ ಸಂದರ್ಭದಲ್ಲಿ ಬಹು ಪ್ರಸ್ತುತ. ಆದರೆ, ೧.೨೭ ಸಹಸ್ರಸಹಸ್ರದಷ್ಟು ಚದರಮೈಲಿಯಿರುವ, ೧.೨೪ ಶತಕೋಟಿಯಷ್ಟು ಪ್ರಜಾಪ್ರಭೂತ, ೬೫ ವರ್ಷಗಳಷ್ಟು ವೃದ್ಧ ಭಾರತದ ಮಹಾಭಾರದ ಗಾಥೆಯು ಅನೇಕ ಮಹಾಭಾರತಗಳಿಗೆ ಸಮನಾಗುವುದರಿಂದ, ಸದ್ಯಕ್ಕೆ ಕೆಲವೇ ಬಿಂದುಗಳ ಸಂದಿನಿಂದ ಸಿಂಧುವನ್ನು ಸಂದರ್ಶಿಸುವ ಪ್ರಯತ್ನವನ್ನು ಮಾಡಬಹುದು.

೧೯೪೭ ಮತ್ತು ೨೦೧೨: ಒಂದು ವ್ಯತಿರಿಕ್ತ ಪ್ರತಿಬಿಂಬ

೧. ಅಂದಿನ ಸ್ವಾತಂತ್ರ್ಯಾರ್ಥಿಗಳು ದೇಶವು ದೇಹಕ್ಕಿಂತ ಮಿಗಿಲೆಂದೂ, ದೇಶವೇ ದೇವಾಲಯವೆಂದೂ ಭಾವಿಸಿ ಒಂದು ವಿಶಿಷ್ಟ ಅದ್ವೈತಸತ್ವವನ್ನು ಮೆರೆದಿದ್ದ ದೇಶಭಕ್ತೋತ್ತಮರು. ಆದರೆ, ಇಂದು ನಮ್ಮನ್ನಾಳುವವರು, ಸರ್ವಭೂಮಿಯೂ ತಮ್ಮದೆನ್ನುವ (ಇಡೀ ಭಾರತವೇ ಒಂದು ರಿಯಲ್ ಎಸ್ಟೇಟ್) ಸರ್ವಾಹಂಕಾರಭೂಷಿತ ಸಾರ್ವಭೌಮರು. ತಮ್ಮ ವೈಭವಕ್ಕಾಗಿ ದೇಶದಾನ ಮಾಡುತ್ತಿರುವ ಭಾರತೇಶರು. ಪ್ರಜಾಹಿತಕ್ಕೆ ಪ್ರತಿಯಾಗಿ ಪ್ರವರ್ತಿಸುತ್ತ, ಪ್ರತಿಯೊಂದು ನಿಧಿಯನ್ನೂ ಬಾಚಿಕೊಳ್ಳಲು ತಮ್ಮ ಜನ್ಮವನ್ನೇ ಸಮರ್ಪಿಸಿಕೊಂಡಿರುವ 'ಪ್ರತಿನಿಧಿ' ಪ್ರಜಾಪತಿಗಳು. ಅಂದಿನ ಭಾರತದ ಸಾರಥಿಗಳಾಗಿದ್ದವರು ಅತಿರಥ, ಮಹಾರಥ, ಭಗೀರಥರಾಗಿದ್ದರೆ, ಇಂದಿನ ಪ್ರತಿನಿಧಿ ಪ್ರಭುಗಳು ಅತಿರತಿ, ಮಹಾರತಿಯನ್ನು ಭಾರತಮಾತೆಯಲ್ಲಿ ಕಾಣುವ ರಣ ರಾಷ್ಟ್ರಕಾಮರು.

೨. ಅಂದು ಜನಮನವೆಲ್ಲ ಒಂದೇ ಗಣವಾಗಿ, ಭಾರತಾಂಬೆಯನ್ನು ಒಂದೇ ದನಿಯಿಂದ 'ವಂದೇ ಮಾತರಂ' ಎಂದು ಭಾವಭಕ್ತಿಭರಿತವಾಗಿ ಕೀರ್ತಿಸಿತ್ತು. ಆದರೆ ಇಂದು, ಓಟು–ಜಾತಿ ಎಂಬ ಉಭಯ ಮತಗಳನ್ನೂ–ಮಠಗಳನ್ನೂ ಗಂಟು ಮಾಡಿರುವ ಅತಿ–ಅತಿ–ಜಾತೀಯತೆಯ 'ಮತಾಚಾರ್ಯರು,' ದುರ್ಧರ್ಮಾನಂದರು,

ಭಾಷಾಪಾತಕರು, ಮುಂತಾದ ನಿಸ್ಸೀಮ ಮಾನಸಭಂಜಕರ, ದ್ವೇಷಸ್ಥರ, ವೇಷಧಾರಿಗಳ ಸತತ ಪರಿಶ್ರಮದಿಂದಾಗಿ, ಅನೇಕ ಅಬ್ಬರದ ಆರ್ತನಾದಗಳ ಏಕಕಾಲಿಕ ಕಾಕಸಂಗೀತವು ಎಲ್ಲೆಡೆಯಿಂದ ಸಿಡಿದುಬರುತ್ತಿದೆ. ಭಾರತವು 'ಒಂದೇ ದೇಶ'ವಾಗುವ ಬದಲು, 'ಒಂದೊಂದೇ ಮಾತರಂ' ಎನ್ನುವ ಅಸಂಖ್ಯ 'ಕಟ್ಟಭಿಮಾನಿಗಳ' ಇಕ್ಕಟ್ಟು-ಬಿಕ್ಕಟ್ಟುಗಳ ತಿಕ್ಕಾಟದ ಒಕ್ಕೂಟವಾಗಿದೆ. ೧೨೫ ಕೋಟಿ ಛಿನ್ನವಿಚ್ಛಿನ್ನ ಮನಸ್ಸುಗಳು ೧೨೫ ಕೋಟಿ ಹೆಡೆಯ ಹೆನ್ನಾಗರದಂತೆ ಇಂದು ನಮ್ಮ ಹೆನ್ನಾಗರಿಕತೆಯ ಕತೆಯನ್ನು ಹಿಂದೋಡಿಸುತ್ತಿವೆ.

೩. ಅಂದು ನಾವು ನೋಡುತ್ತಿದ್ದುದು, ನಮಿಸುತ್ತಿದ್ದುದು, ತ್ಯಾಗ-ಸ್ವಚ್ಛತೆ-ಸಮೃದ್ಧಿ-ಧರ್ಮಗಳನ್ನು ಸಂಕೇತಿಸುವ ಒಂದು ಭವ್ಯ ಬಾವುಟ. ಅಂದು ಇದ್ದದ್ದು ಅದೊಂದೇ ಬಾವುಟ, ಒಂದೇ ಸೇನೆ. ಆದರೆ, ಅದರ ತ್ರಿರಂಗುಗಳಲ್ಲಿ ಇಂದು ನಮಗೆ ಕಾಣಸಿಗುತ್ತಿರುವುದು ಎರಡು ಬೇರೆಯೇ ರಂಗುಗಳು: ಕಾಳಹಣ-ಕರಾಳಗುಣದ ಕಡುಕಪ್ಪು, ಮತ್ತು ಅಧಿಕಾರಷಾಹಿ ಟೇಪುಗಳ, ರಕ್ತಬಸಿದು ಏಗುತ್ತಿರುವವರ ಕಟುಗೆಂಪು. ಧರ್ಮಚಕ್ರದ್ದಂತೂ ಕತೆಯೇ ಬೇರೆ. ಪ್ರಜಾ'ಸ್ವಾಮಿ'ಗಳ ಬಹುಬಿಲಿಯನ್ ಕೊಳ್ಳೆಮೊತ್ತಗಳಲ್ಲಿನ ಕೊಳೆಸೊನ್ನೆಗಳನ್ನೂ, 'ಸ್ವಾಮ್ಯವಿಲ್ಲದವರು ಸೊನ್ನೆಯಲ್ಲಿಯೇ ಸಾಮ್ಯವನ್ನೈದಿರುವ' ವಿಕೃತ ಸಮೀಕರಣವನ್ನೂ, ಮತ್ತು ಎಲ್ಲೆಡೆ ಮುಸುಕುತ್ತಿರುವ ಮೌಲ್ಯಶೂನ್ಯತೆಯನ್ನೂ ಬಿಂಬಿಸುತ್ತ ಬಂದು, ಕಡೆಗೆ ಈ ಧರ್ಮಚಕ್ರವು ಒಂದು ಗಾಢ-ಗೂಢ ಸೊನ್ನೆಯಾಗಿ, ಅಧರ್ಮಚಕ್ರಾಧಿಪತ್ಯದ ರಾಜ್ಯೋಪಕರಣವಾಗಿ, ಬರಲಿರುವ ಕೂಪಕಂದರದ (ಬ್ಲ್ಯಾಕ್‌ಹೋಲ್) ದುಶ್ಶಕುನವಾಗಿ ಹಿಂದುರುಳಲಾರಂಭಿಸಿ ದಶಕಗಳೇ ಕಳೆದವು. ತ್ರಿರಂಗವು ಹೀಗೆ ಗತಿಸಿರುವಂತೆಯೇ, ಇಂದು ಒಂದೊಂದು ರಾಜ್ಯಕ್ಕೂ, ಪಕ್ಷವಿಪಕ್ಷಗಳಿಗೂ, ಬಣೋಪಬಣಗಳಿಗೂ, ಚಳುವಳಿ-ಸಂಘಟನೆಗಳಿಗೂ, ಒಂದೊಂದು ಬಾವುಟ, ಒಂದೊಂದು ಸೇನೆ ಎಲ್ಲಂದರಲ್ಲಿ ತಲೆಯೆತ್ತಿಕೊಂಡಿವೆ. (ದೇಶಾದ್ಯಂತ ಒಬ್ಬೊಬ್ಬ ಸನ್ಮಂತ್ರಿಯ 'ಸತ್ಕರ್ಮ'ಕಾಂಡಕ್ಕೂ ನಿರೋಧ ('ಶತ್ರು') ಪಕ್ಷಗಳು ಸಿ.ಬಿ.ಐ. ತನಿಖೆಯನ್ನೇ ಒತ್ತಾಯಿಸುತ್ತಿರುವುದರಿಂದಾಗಿ, 'ಸಿ.ಬಿ.ಐ. ಮಹಾಸೇನೆ' ಎಂಬುದೊಂದು ಈಗ ಬಾಕಿಯುಳಿದಿದೆಯಷ್ಟೆ.)

೪. ಅಂದು 'ಸ್ವ' ಎಂದೊಡನೆ ಸ್ವತಂತ್ರ, ಸ್ವರಾಜ್ಯ, ಸ್ವದೇಶಿ, ಸ್ವಯತ್ನ, ಸ್ವಶಕ್ತಿ, ಸ್ವಚ್ಛತೆ, ಸ್ವಾಭಿಮಾನ, ಸ್ವಾವಲಂಬನೆ, ಇತ್ಯಾದಿ ನೆನಪಿಗೆ ಬರುತ್ತಿದ್ದವು. ಅದೇ 'ಸ್ವ' ಎಂದೊಡನೆ ಇಂದು ನಮಗೆ ಹೊಳೆಯುವುದು 'ಸ್ವಾಹಾ!' ಸ್ವತ್ತು, ಸ್ವಕುಟುಂಬ, ಸ್ವಜಾತಿ, ಸ್ವಾರ್ಥ, ಇತ್ಯಾದಿ ಶಬ್ದಗಳು; 'ಸ್ವತಂತ್ರ' ಎಂದರೆ ತಮ್ಮದೇ ಅಕ್ರಮಕಾರ್ಯಕ್ರಮಗಳಿಗಾಗಿ ಮಾಡಿಕೊಂಡಿರುವ 'ಸ್ವ' ತಂತ್ರ ಹಾಗೂ 'ಜನತಂತ್ರ'ಎಂದರೆ ಜಾಣತಂತ್ರ ಎಂಬಂಥ ಅಸಹಜ ಅರ್ಥಾಂತರಗಳು.

೫. ಅಂದು ಆಳಿದ ಪ್ರಭುಗಳು ಅಲ್ಲಲ್ಲಿಗೆ ಒಬ್ಬೊಬ್ಬರಿದ್ದರಷ್ಟೆ. ಆದರಿಂದು, ಚುರಾಯಿತ ಜನಮತಮುದ್ರೆಯನ್ನು ತೋರಿ ಚುನಾಯಿತರೆನಿಸಿಕೊಂಡವರೆಲ್ಲರೂ ನಮ್ಮ ಧಣಿಗಳೇ. ನಮ್ಮನ್ನು ಆಳುವ, ಆಳುಕಾಳುಗಳಂತೆ ಕಾಣುವ, ಇಂಥ ದುಃಶಾಸಕ, ಧೃತರಾಷ್ಟ್ರಕೂಟರು ಇಂದು ಹಳ್ಳಿಗೆ ಹತ್ತಿಪ್ಪತ್ತು. ಜಾತಿ, ಭಾಷೆ, ಇತ್ಯಾದಿಗಳನ್ನು 'ಪಾಳೆಯ'ಗಳನ್ನಾಗಿಸಿಕೊಂಡಿರುವ ಪಾಳೆಯಗಾರರು; ದೇಶ ತುಂಡರಿಸಿ ಆಳುವ ತುಂಡರಸ-ಪುಂಡರಸರು; ಒಡೆದು-ಹೊಡೆದು ಆಳುವ ಒಡೆಯರು ... ಇಂಥವರ ರಾಜಗಣಗಳೇ ಇಂದು ಈ 'ಭರ್ತ್ಯ'ಭೂಮಿಯಲ್ಲಿ ಭರತನಾಟ್ಯವನ್ನಾಡುತ್ತಿರುವುವು; ತಮ್ಮ ರಾಜ್ಯಲೀಲೆಯಿಂದ ರಾರಾಜಿಸುತ್ತಿರುವುವು. ಆಳುಗಳೇ ಮಾಲೀಕರನ್ನು ಆಯ್ಕೆ ಮಾಡಿ,

ಉಚ್ಚ ಪಟ್ಟಗಳಿಗೆ ತುಚ್ಛರನ್ನು ಹರಸಿ ಕಳಿಸಿಕೊಡಬೇಕಾಗಿರುವಂಥ ಹುಚ್ಚುತನವೇ ನಮ್ಮ ಈ 'ಪ್ರಜಾ- ಪ್ರತಿನಿಧಿ ಪ್ರಭುತ್ವದ' ಹೆಚ್ಚುಗಾರಿಕೆಗಳಲ್ಲೊಂದಾಗಿದೆ.

೬. ಅಂದೂ ಸಹ, ಅನೇಕ ಭಾರತಸ್ಥರಲ್ಲಿ ವಿದೇಶ ವ್ಯಾಮೋಹ, ವಿಶೇಷವಾಗಿ ಆಂಗ್ಲಾಕರ್ಷಣೆ, ಗಾಢವಾಗಿದ್ದುದು ನಿಜವಲ್ಲವೇ? ಹೌದು, ಇದೇನೋ ಒಪ್ಪತಕ್ಕದ್ದೇ. ವಾಸ್ತವವಾಗಿ, ಅಂದು ಅಂಧಸಮುದ್ರದ (ಅಟ್ಲ್ಯಾಂಟಿಕ್) ಈಚೆಗಿದ್ದ, ಅದರಲ್ಲೂ ಅಲ್ಲಿನ ತಮಸಾ (ಥೇಮ್ಸ್) ನದಿಯ ಬದಿಗಿದ್ದ ಅಯಸ್ಕಾಂತವು, ಇಂದು ಅದರಾಚೆಗಿರುವ 'ಅಮರ' ಅಮೆರಿಕಾಗೆ ಸರಿದಿದೆ, ಅಷ್ಟೆ. ತತ್ಫಲವಾಗಿ, ಅಮೆರಿಕಾವೇಶ ಅಮರಿಕೊಂಡಿರುವ ತಾಯ್ತಂದೆಯರು, ಭಾರತದ ಭಾರವನ್ನು ಎಂದು ತೊರೆದೇವೋ ಎಂದು ಹಾತೊರೆಯುತ್ತಾ, ಒಂದೇ ಹಠದಿಂದ ತಮ್ಮ ಬುದ್ಧಿಶಾಲಿ ಬಾಲರಿಗೆ ಬಾಲ್ಯದಿಂದಲೇ ಅಮೆರಿಕದ ಅಮಲೇರಿಸಿ, 'ಅಮೆರಿಕ! ಅಮೆರಿಕ!!. ಎಂಬ ಜನ್ಮಸಾಫಲ್ಯ ಮಂತ್ರದ ದೀಕ್ಷೆಯನ್ನು ಅವರಿಗೆ ಸಕಾಲಕ್ಕೆ ಕೊಡಿಸಿ, ಅವರು ಮತ್ತೆಂದೂ ಭಾರತಕ್ಕೆ ಬಾರದಂತೆ ಆಚೆಗಟ್ಟಿ, ಒಂದು ನವಶೈಲಿಯ 'ಕ್ವಿಟ್ ಇಂಡಿಯಾ. ಕಿಚ್ಚನ್ನೇ ಹಚ್ಚಿಕ್ಕಿದ್ದಾರೆ. ಅಂದು ಈಸ್ಟ್ ಇಂಡಿಯಾ ಕಂಪನಿಗೆ ಕಚ್ಚಾವಸ್ತುಗಳನ್ನೂ, ಕಾರಕೂನರನ್ನೂ ಒಲವಿನಿಂದ ಒದಗಿಸುತ್ತಿದ್ದ ಭಾರತವು, ಇಂದು ತನ್ನ ಸಮಸ್ತ ಸಮರ್ಥ ಯುವಶಕ್ತಿಯನ್ನು ಹೆಮ್ಮೆ-ಹುಮ್ಮಸ್ಸುಗಳಿಂದ, ಅಮೆರಿಕೇಂದ್ರೀಕೃತ ಸಾಫ್ಟ್‌ವೇರ್ ಕಂಪನಿಗಳಿಗೆ ಕಚ್ಚಾಮಾಲುಗಳನ್ನಾಗಿ ಪರಿವರ್ತಿಸಿ, ಎಡೆಬಿಡದೆ ರಫ್ತು ಮಾಡುತ್ತಿದೆ. ತನ್ನ ಇಡೀ ಶಿಕ್ಷಣಕ್ರಮವನ್ನು 'ಪರ'ತಂತ್ರಜ್ಞಾನಕ್ಕೆ 'ಪ್ರೋಗ್ರ್ಯಾಮ್' ಮಾಡಿಕೊಂಡು ಧನ್ಯತೆಯಿಂದ ಬೀಗುತ್ತಿದೆ. ಹೀಗೆ, ಬುದ್ಧಿರಾಶಿಯು ಅಮೆರಿಕಾತುರವಾಗಿಯೂ, 'ನುಂಗಂಬಾಕಂ' ಆದ ಧನರಾಶಿಯು ಸ್ವಿಸ್‌ಬ್ಯಾಂಕಾಭಿಮುಖವಾಗಿಗೂ ದಿಕ್ಕೆಟ್ಟು, 'ಭಂಡ'ವಾಳವಷ್ಟೇ ಭಾರತದ ಅಭಿವೃದ್ಧಿಯಲ್ಲಿ ತೊಡಗಿಸಲು ಮಿಕ್ಕುಳಿಯುತ್ತಿದೆ.

೭. ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ, ಢಂಬಾಚಾರ, ಇವೆಲ್ಲ ಅಂದೂ, ಎಂದೆಂದೂ ಇದ್ದವೇ ತಾನೇ? ಖಂಡಿತ. ಆದರೆ ಅಂದು ಭ್ರಷ್ಟಾಚಾರವು ಒಂದು ಅತಿವಿಶಿಷ್ಟ ಶಿಷ್ಟಾಚಾರವಾಗಿ, ರಾಜಕಾರಣಕ್ಕೆ ಅವಶ್ಯ ಅರ್ಹತೆಯಾಗಿ, ಹುದ್ದೇದಾರರ ಸಿದ್ಧಾಂತವಾಗಿ, ಮಾನ್ಯತೆ ಪಡೆದಿರಲಿಲ್ಲ. ಜನಮಾನಸದೊಳಗೆ 'ಡಿ.ಎನ್.ಎ.ಗತ'ವಾಗಿ, ಚರಾಚರಗಳೆಲ್ಲವನ್ನೂ ನಡೆಸುವ ವಿಶ್ವಚೇತನವಾಗಿ ಹೊರಹೊಮ್ಮಿರಲಿಲ್ಲ. ಲಂಚವೆಂಬ
ಮೂಲವ್ಯಾಧಿಯು ಅತ್ಯುಗ್ರ ಆಮೂಲಾಗ್ರ ಅರ್ಬುದವಾಗಿ ಮೆಟ್ಟಿಕೊಂಡಿರಲಿಲ್ಲ; ಅಧಿಕೃತವಾಗಿ (ಮಂತ್ರಿಶಕ್ತಿ, ತಮೋಬಲಗಳಿಂದ) ಅಪಹರಿಸುವ ಸಂಸ್ಕೃತಿ ಆಗಿನ್ನೂ ಮೊಳಕೆಯೊಡೆದಿರಲಿಲ್ಲ. 'ಝಣಝಣಹಣ ಅಧಿನಾಯಕ ಜಯಹೇ!' ಎಂಬುದು ನಮಗೊಂದು ಅನಧಿಕೃತ ರಾಷ್ಟ್ರಗೀತೆಯಾಗಿರಲಿಲ್ಲ. 'ಜಾತಿಯೇ ಜ್ಯೋತಿ,. 'ತದುಕಲು ಕಲಿಯಿರಿ,. 'ಸರಕಾರದ ಕೆಲಸ ಸ್ವಾಹಾಕಾರದ ಕೆಲಸ,' 'ಪರಧನವೇ ಪರಮಾತ್ಮ,' 'ನೀವಿರುವುದೆ ನಮಗಾಗಿ,' ಮುಂತಾದ ಪದಪುಂಜಗಳು ಆಗಿನ್ನೂ ಆಳರಸರ ಸ್ಫೂರ್ತಿಸೂಕ್ತಿಗಳಾಗಿ ಮೂಡಿಬಂದಿರಲಿಲ್ಲ. ಶ್ರೇಷ್ಠ ನ್ಯಾಯಮೂರ್ತಿಗಳು, ಜ್ಯೇಷ್ಠ ಐ.ಎ.ಎಸ್.-ಐ.ಪಿ.ಎಸ್. ಅಧಿಕಾರಿಗಳು, ವರಿಷ್ಠ ದಂಡನಾಯಕರು, ಯಶೋವಂತ ಕೈಗಾರಿಕೋದ್ಯಮಿಗಳು, ಗಣ್ಯ ಮಾಧ್ಯಮೋದ್ಯೋಗಿಗಳು, ಸುಸಂಪೂಜಿತ ಧರ್ಮಗುರುಗಳು, ಬಿರುದಾಂಕಿತ ಸಮಾಜಸೇವಕರು, ಬಹುಬಹುಮಾನಿತ ಬುದ್ಧಿಜೀವರು ... ಮೊದಲಾದ ಸಮಾಜಾಧಾರ ಸ್ತಂಭಗಳೇ ಆಗ ಹೀಗೆ ಹಗರಣರಂಗದಲ್ಲಿ ಮಾನಾಭಿಮಾನ-ವಿಕಲರಾಗಿ ಮುರಿದು ಬಿದ್ದಿರಲಿಲ್ಲ. ಮಹಾಬಿಲೇಶ್ವರರೂ-ವರಾಹಾಂಶ ಸಂಭೂತರೂ ಕೊರೆದ

ಬಿಲಿಯನ್ ಬಿಲಗಳ ಬೀಡಾಗಿ, ಸುರಂಗಜೇಬರ ರಾಜಮಾರ್ಗವಾಗಿ, ಕೊಳ್ಳೆಗಳ ಕೊಳಚೆಯ ಕೊಳ್ಳವಾಗಿ, ಭಾರತದ ಪ್ರಭುತ್ವವು ಆಗ ಇನ್ನೂ ಅಷ್ಟು 'ಪ್ರಬುದ್ಧ'ವಾಗಿರಲಿಲ್ಲ; ಈ ಪ್ರಮಾಣಕ್ಕೆ 'ಪ್ರಭುಕ್ತ'ವಾಗುವುದು (ತಿಂದುಹಾಕಲ್ಪಡುವುದು) ಎಂದು ಯಾವ ಭಾರತಜ್ಞರೂ ಊಹಿಸಿಯೂ ಇರಲಿಲ್ಲ. ಆಗ ದಿನಕ್ಕೊಂದು ವಿಚಾರಣಾ ಆಯೋಗ ನೇಮಿಸಲ್ಪಡಬೇಕಾಗಿ ಬಂದಿರಲಿಲ್ಲ. ಲೋಕಾಯುಕ್ತ ಸಂಸ್ಥೆಯು ಇನ್ನೂ ಲೋಕಕ್ಕೆ ಅಯುಕ್ತವೆನಿಸಿರಲಿಲ್ಲ. ಕಾನನದ ಕಾನೂನೆಂಬುದು ಸೋಂಕಿತ್ತಾದರೂ ಈಗಿನಂತೆ ಸೊಕ್ಕಿರಲಿಲ್ಲ. ಸಿಂಧುದೇಶವು ಪ್ರಜಾಂತಕ ಪರಿಪಾಲಕರಿಗೆ ಅಷ್ಟು ಅನುಕೂಲಸಿಂಧುವಾಗಿ ತಿರುಗಿರಲಿಲ್ಲ. ಮೇಲಾಗಿ, ವಿದೇಶಿ ಧಾಳಿಕೋರರು ಇತಿಹಾಸದಾದ್ಯಂತ ಸೂರೆಗೈಯದಿದ್ದಷ್ಟು ಸಂಪತ್ತನ್ನು ಕೆಲವೇ ದಶಕಗಳಲ್ಲಿ ದೇಶಾಂತರಿಸಿ, ತಾಯ್ನಾಡಿನ ಜೀವದ್ರವ್ಯವನ್ನೇ ಇಂಗಿಸುವ ಸ್ವದೇಶಿ ರಾಷ್ಟ್ರಹೀರರು, ಕಳಿಂಗ 'ಹಿಂಡಿಯಣ್ಣರು,' ಆಗಿನ್ನೂ ಅವತಾರವೆತ್ತಿರಲಿಲ್ಲ!

೮. ಅಂದು, ಮುಗಿಲು ಮುಚ್ಚುವ ಮಹೋನ್ನತ ಮಹಲುಗಳು; ನಾಗಾಲೋಟವನ್ನೋಡುವ ನಾಗಾಲಿಗಳು (ಚತುಶ್ಚಕ್ರಿ, ಯಂತ್ರಾಶ್ವ ಅಥವಾ 'ಕಾರ್'); ವಾಕ್-ಆ್ಯಂಡ್-ಟಾಕ್ ಸ್ವಾತಂತ್ರ್ಯವನ್ನು ಒಮ್ಮೆಲೇ ಚಿಮ್ಮಿಸುವ, ಬೈಲುಬೈಲುಗಳಲ್ಲಿ ರಿಂಗಣಗುಣಿಸುವ ಮೋಬೈಲ್‌ಗಳು; ಯುವತೆಯನ್ನು ಪಾಡಿತೂಗುವ ಐ-ಪಾಡ್‌ಗಳು ಮತ್ತು ಯಂತ್ರಮುಗ್ಧರನ್ನಾಗಿಟ್ಟುಕೊಂಡಿರುವ ತೊಡೆಪಿಡಿಗಳು (ಲ್ಯಾಪ್‌ಟಾಪ್); ಮನೆಮನೆಗಳಲ್ಲಿ ಬಗೆಬಗೆಯ ವಾಹಿನಿಗಳ ಮೂಲಕ 'ದಿನಕ್ಕಿಪ್ಪತ್ತೈದು' ಗಂಟೆಕಾಲ ಕಣ್ಣಿಗೆ ಚ್ಯೂಯಿಂಗ್ ಗಮ್ ಜಗಿಸಿ ಜಗಮಗಿಸುವ ಜಂಬೋ ಟಿ.ವಿ.ಗಳು; ಹೆಜ್ಜೆಗೊಂದು ಹಾದುಬರುವ ಯಾಂತ್ರಿಕ-ತಾಂತ್ರಿಕ ಸಕಲವಿದ್ಯಾಲಯಗಳು; ಅತಿತಾಂತ್ರಿಕ ರೋಗೋಪಚಾರ ರಾಜಗೃಹಗಳು; ಇಂದ್ರಲೋಕದ ಇಂದ್ರಿಯಸುಖೋಪಭೋಗವನ್ನೂ ಮಂಕಾಗಿಸುವ ಚಂದ್ರಚುಂಬಿತ, ಬಹುತಾರಾ ಹೋಟೆಲ್‌ಗಳು-ರಿಸಾರ್ಟ್‌ಗಳು; ಅತ್ಯಾಧುನಿಕಾಧ್ಯಾತ್ಮಿಕ ಆಶ್ರಮಾಂತ:ಪುರಗಳು; ಬಹುಕೀರ್ತಿತ ಬಹುರಾಷ್ಟ್ರಕ ಬೃಹದೋದ್ಯಮಗಳು; ಮಾಲೆಮಾಲೆಗಳಲ್ಲಿ ಮಾಲುಗಳನ್ನೆಸೆದು 'ಕಮಾಲ್' ಮಾಡುವ ಮಾಲ್‌ಗಳು; ಒಂದು ಮಹಾಪದ್ಮ (ಟ್ರಲಿಯನ್) ಡಾಲರ್ ಸಮಗಟ್ಟುವ ಅರ್ಥವ್ಯವಸ್ಥೆ ....ಈ 'ಮೆಗಾ'ಬೆಳವಣಿಗೆಯ ಮಹಾಮೆರವಣಿಗೆಯು ಅಂದಿನ್ನೂ ಗಾಳಿಗೋಪುರಗಳ ಗರ್ಭದಲ್ಲಿತ್ತಷ್ಟೆ.

ಇಂದು, ಸುಮಾರು ಏಳು ದಶಕಗಳ ಈ ಏಳಿಗೆಯಿಂದ ಏಮಾರಿಸಲ್ಪಡುತ್ತಿರುವವರಿಗೆ, ಮಾಳಿಗೆಯನ್ನೇರಿ ಹೋಳಿಗೆ ಮೆಲ್ಲುತ್ತಿರುವ ಪೀಳಿಗೆಯು ಕಣ್ಣೊಳಿಸುತ್ತಿದೆಯೇ ಹೊರತು, ಉಳಿದ ಜನಕೋಟಿಗಳು ಕೂಳಿಗೆ-ಕಾಳಿಗೆ-ಕೂಲಿಗೆ ಹೆಣಗಿ ಹೆಣವಾಗುತ್ತಿರುವುದು; ಉಳ್ಳವರು ಊದುತ್ತಿದ್ದಂತೆಯೇ ಊಳಿಗದವರು ಉರುಳುತ್ತಿರುವುದು; ಕಣ್ಣೆವೆಗೂ ತಾಕಿಲ್ಲ. ಆಯ್ದ ಕೆಲವು 'ಮುದ್ದಿನ ಮಕ್ಕಳಿಗೆ,' ಲಕ್ಷಗಳಿಗೆ ಲಕ್ಷ್ಯವೇ ಇಲ್ಲವೆಂಬಂತೆ ಸಂಬಳ-ಸಾರಿಗೆ-ಸವಲತ್ತುಗಳನ್ನು ಎರಚಾಡಿ ಅತುಲೈಷಾರಾಮಕ್ಕೆಡೆಗೊಟ್ಟಿರುವ; ಅದೇ ಸಮಯ, ಸುಸ್ಥಾಪಿತ 'ಸುಶೋಷಿತ'ರನ್ನು ನಿಗೂಢವಾಗಿ ನಿರ್ಧನರನ್ನಾಗಿಸಿ, ನಿಧನರನ್ನಾಗಿಸುತ್ತಿರುವ, ಸಾಮಾನ್ಯರನ್ನು ಅಮಾನ್ಯರನ್ನಾಗಿಸುತ್ತಿರುವ, ಕೃತ್ರಿಮ ಆರ್ಥಿಕ ಭಯೋತ್ಪಾದಕತೆಯು ಇಂದು ಯಾರಲ್ಲೂ ಆತಂಕವನ್ನುಂಟುಮಾಡುತ್ತಿಲ್ಲ; ಯಾರ ಅಜೆಂಡಾ-ಜಂಡೆಗಳಿಗೂ ಇನ್ನೂ ಏರಿಲ್ಲ. ಕೋಟಿಕೋಟಿ ರೂಪಾಯಿ ವ್ಯವಹಾರಗಳ ನಡುವೆ, ಕೋಟ್ಯಂತರ ಚಿಣ್ಣರು ರಾತ್ರಿಯೂಟದಿಂದ ವಂಚಿತರಾಗಿ ಹಸಿವಿನಲ್ಲೇ ಹಾಸಿಗೆಗೊರಗುತ್ತಿರುವುದು, ಉಗ್ರ

ಉದಾರವಾದಿ, ಉದರಸುಖಿ ಉದ್ಧಾರಕರನ್ನು ಉದ್ವೇಗಗೊಳಿಸುತ್ತಿಲ್ಲ. ಕೊಳೆಯುತ್ತಿರುವ ಕೋಟ್ಯಂತರ ಟನ್ ಧಾನ್ಯರಾಶಿಗಳ ಮುಂದೆ ಧ್ಯಾನಲೀನರಾಗಿರುವ ಅಧಿಕಾರಿಗಳಲ್ಲಿ, ಎದುರಿನಲ್ಲೇ ಹಸುಳೆಗಳು ಹಸಿವಿನಿಂದ ಅಸು ನೀಗುತ್ತಿರುವುದು ತುಸು ಮರುಕವನ್ನೂ ಉತ್ಪಾದಿಸಿಲ್ಲ. ರೈತರ ಸರಣಿ–ಆತ್ಮಹತ್ಯೆಯಿಂದ (ಸಾಯುವ ಸ್ವಾತಂತ್ರ್ಯ?) ವಿದರ್ಭದ ಹತ್ತಿಯ ನೆಲವು ಹತ್ತಿಕೊಂಡು ಸುಡುಗಾಡಾಗುತ್ತಿರುವುದು; ೧೩ ಕೋಟಿ ಬಾಲಕೂಲಿಗಳು ಇಂದಿಗೂ ಅಮಾನವೀಯ ಆವರಣಗಳಲ್ಲಿ ಜೀವ ತೇಯುತ್ತಿರುವುದು, ಮತ್ತು ೧೪ ಕೋಟಿ ಬಾಲಭಾರತರು ಶಾಲೆಯಿಂದ ಉದುರಿಹೋಗಿರುವುದು; ಪಂಜಾಬ್‌ನಂಥ ಪುರೋಗಾಮಿ ಪ್ರಾಂತ್ಯದಲ್ಲಿ, ಕೀಟನಾಶಕದ ನಂಜಿನಿಂದಾಗಿ ಕ್ಯಾನ್ಸರ್‌ಗ್ರಸ್ತರಾದ ಬಡರೋಗಿಜಂಗುಳಿಗಳು ತಮ್ಮದೇ ರಾಜ್ಯದಲ್ಲಿ ಸೌಲಭ್ಯವಂಚಿತರಾಗಿ, ಪ್ರತಿರಾತ್ರಿ ನೂರಾರು ಸಂಖ್ಯೆಯಲ್ಲಿ 'ಕ್ಯಾನ್ಸರ್ ರೈಲು. ಹತ್ತಿ ದೂರದ ಬಿಕನೇರ್‌ನ ಕ್ಯಾನ್ಸರ್ ಆಸ್ಪತ್ರೆಗೆ ದೌಡಾಯಿಸುವಂತಾಗಿರುವುದು ... ಇವೆಲ್ಲವೂ ಯಾರ ಅಂತಃಕರಣಕ್ಕೂ ಆಘಾತಕಾರಿಯಾಗಿಲ್ಲ. ಪ್ರತಿಶತ ೭೫ ಪ್ರಜೆಗಳಿಗೆ 'ಎಲ್ಲಿ ಪ್ರಕೃತಿ ಕರೆವುದೋ ಅಲ್ಲೇ ಶೌಚಾಲಯ!' ಎಂಬ ಅವಸ್ಥೆಯುಂಟಾಗಿರುವುದು; ಕೊಳೆಯುತ್ತಿರುವ ಧಾನ್ಯಗಳನ್ನು ಸಂರಕ್ಷಿಸಲು ಸಿಗದ ವಿದ್ಯುತ್ತು, ಮಾಲ್‌ಗಳಲ್ಲಿ ಪಾದುಕೆಗಳ ಹವಾನಿಯಂತ್ರಿತ ಪಾಲನೆಗೆ ಎಣೆಯಿಲ್ಲದೆ ಸಿಗುತ್ತಿರುವುದು; ಬೆಳೆ ತೆಗೆಯಲು ಇಲ್ಲವಾದ ಭೂಮಿ, ನೀರು, ಮತ್ತಿತರ ಸಂಪನ್ಮೂಲಗಳು, ಐಟಿ–ಬಿಟಿ ಕಂಪನಿಗಳಿಗೆ ಕೇಳಿದ ಮಾತ್ರಕ್ಕೆ ಸುಲಭವಾಗಿ ಲಭಿಸುತ್ತಿರುವುದು; ವಿದ್ಯೆಯ 'ಸಾದ್ಯಂತ ಸಾಫ್ಟ್‌ವೇರೀಕರಣ,' ವ್ಯಾಪಾರದ ವ್ಯಾಪಕ ಬಹುರಾಷ್ಟ್ರೀಕರಣ, ಮತ್ತು ಜನಾವಶ್ಯಕ ಜಾಗಗಳಲ್ಲೆಲ್ಲ ಜಾಗೃತೀಕರಣವಿಲ್ಲದೆ ಜಾಗತೀಕರಣವಾಗುತ್ತಿರುವುದು; ವಿದ್ಯುನ್ಮಾನ ಮಾಧ್ಯಮವು ಅತ್ಯುನ್ಮಾದಕ ಟಿ.ವಿ. ಸೀರಿಯಲ್ಲುಗಳ ಮೂಲಕ ಸಂಸಾರಗಳನ್ನು ಸೀಳುವ, ಸಜ್ಜನರನ್ನು ಸಮಾಪ್ತಿಮಾಡುವ ನವನವೀನ ಕಪಟೋಪಾಯಗಳನ್ನೂ, ಗಾಢಮೂಢಾಚರಣೆಗಳನ್ನೂ ದಿನವಿಡೀ ಜನಮನದೊಳಗೆ ನಾಟಿಸಿ, ಕ್ಷುಲ್ಲಕ ಸುದ್ದಿ–ಕ್ಷಣಿಕ ಜಾಹೀರಾತುಗಳಿಂದ ಕ್ಷೋಭೆಯನ್ನುಂಟುಮಾಡಿ, ಪ್ರತಿ ಮನೆಯನ್ನು ಅಶಾಂತಿನಿಕೇತನವನ್ನಾಗಿಸುತ್ತಿರುವುದು; ಕ್ರಿಕೆಟ್ ವಾಹಿನಿಗಳು ಕಲಾತ್ಮಕ ಪಂದ್ಯವೊಂದನ್ನು ವರ್ಷಾವಧಿ ಕಾಳದಂಧೆಯನ್ನಾಗಿಸಿ, ಯುವಶಕ್ತಿಯನ್ನು ಪೋಲುಮಾಡಿ, ಐ.ಪಿ.ಎಲ್. ಎಂಬ ಒಂದು ಪಾಪಕೂಪವನ್ನೇ ಹುಟ್ಟುಹಾಕಿರುವುದು; ನರವ್ಯಾಘ್ರಗಳಾಗಿದ್ದ ಪಂಜಾಬಿ ಯುವಕರು ನಶೀಲಿ ಪದಾರ್ಥಗಳಿಂದಾಗಿ ನರಪ್ರೇತಗಳಾಗಿ, ವ್ಯಗ್ರವಾದಿ ಉಗ್ರವ್ಯಸನಿಗಳಾಗಿ, ಬೇಸಾಯ–ಸೈನ್ಯ ಎರಡನ್ನೂ ಕೈಬಿಟ್ಟು ಓಟ ಕೀಳುತ್ತಿರುವುದು; ರಕ್ತದಾಹಿ ರಿಯಲ್ ಎಸ್ಟೇಟ್‌ಗಳು ಗ್ರಾಮಗ್ರಾಮಗಳನ್ನು, ಕೃಷಿಭೂಮಿ–ಕೃಷಿಕಾರ್ಮಿಕರನ್ನು ನುಂಗಿನೊಣೆದು, ವ್ಯವಸಾಯವನ್ನು ವ್ಯವಕಲನದ ವ್ಯವಹಾರವನ್ನಾಗಿಸಿರುವುದು; ಮೆಟ್ರೋಗಳು ಗಗನಮುಖಿಯಾಗುತ್ತಿದ್ದಂತೆಯೆ ೀ, ಅವುಗಳ ಭೂಗತ ಜಗತ್ತು ಮತ್ತಷ್ಟು ಪಾತಾಳಮುಖಿಯಾಗುತ್ತಿರುವುದು, ಮತ್ತು ಅಲ್ಲಿನ ಕೊಳಚೆ ಪ್ರದೇಶಗಳು 'ನರಲೋಕದ ನರಕ'ಗಳೆಂಬ ಯಶಸ್ಸಿಗಾಗಿ ಪರಸ್ಪರ ಪೈಪೋಟಿಯಲ್ಲಿ ಬಿದ್ದಿರುವುದು; ಹಬ್ಬುತ್ತಿರುವ ಪಬ್ಬು–ಕ್ಲಬ್ಬುಗಳಲ್ಲಿ, ಮದಿರೆಯ ಮಂದಿರಗಳಲ್ಲಿ, ಬೀರ್‌ಬಲ್ಲ, ರಮ್ಮೇಶ, ವಿಸ್ಕ್ಯಂತ, ತೈಲಪ, ಅಮಲೇಂದ್ರೇತ್ಯಾದಿ'ಮದ್ಯ'ರಾತ್ರಿ ಮಕ್ಕಳು, "ಒಂದೇೀ ಬಾಾಟ್ಲ್ ರಮ್/ ಸುಜಲಾಂಂಂ, ಸುತರಾಂಂಂ, ಮರೆಯದ ಪಾನಕಾಂ//" ಎಂದು ಮದ್ಯದೇಶ್ ರಾಗದಲ್ಲಿ ಒಮ್ಮದದಿಂದ ಮೊರೆದು, 'ಗುಂಡೇಟಿಗೆ' ಬಲಿಯಾಗುತ್ತಿರುವುದು, ಮತ್ತು ಅಮೆರಿಖಾದ್ಯ ಅಡ್ಡೆಗಳಲ್ಲಿ ನವಪೀಳಿಗೆಯ ವೈನ್‌ತೇಯ–ವೃಕೋದರ

ಸಹೋದರಸಹೋದರಿಯರು ಸ್ವ-ಉದರವನ್ನು ಸಲಹುತ್ತಾ, ತಮ್ಮದೇ ಆದ ಒಂದು 'ಬಾರ್-ರತ' ವರ್ಷವನ್ನು, ಜಡಭರತಖಂಡವನ್ನು ಕಟ್ಟಿಕೊಂಡು ಅದರೊಳಗೆ ಬೆಚ್ಚಗೆ ಬಚ್ಚಿಟ್ಟುಕೊಳ್ಳುತ್ತಿರುವುದು, ಮತ್ತು ಈ ಕಾರಣ, ದೇಶದಲ್ಲಿ ಪುಸುಕಲು-ಪುಕ್ಕಲು ಯುವಪ್ರಜೋತ್ಪತ್ತಿಯಾಗುತ್ತಿರುವುದು; ಮಹಿಳೆಯರ ಮತ್ತು ಮಕ್ಕಳ ಮೇಲೆ ದಿನವಹಿ ದಬ್ಬಾಳಿಕೆ-ದುಂಡಾವರ್ತಿಗಳಾಗುತ್ತಿರುವುದು; ಇವಿಷ್ಟೇ ಸಾಲದೋ ಎಂಬಂತೆ, ಅಂದು ಪಂಜಾಬ-ಸಿಂಧು-ವಂಗಗಳಲ್ಲಿ ಭಾರತದೇಹದ ಶಿರಚ್ಛೇದನ-ಬಾಹುಚ್ಛೇದನದಿಂದುಂಟಾದ ಜನಸಾಗರದ ದಾರುಣ ವಲಸೆ-ಮಾರಣ ಹೋಮಗಳ ಘೋರ ನೆನಪನ್ನು ಕೆರಳಿಸುವಂತೆ, ಇಂದು ಅಸ್ಸಾಮಿನಲ್ಲಿ ಜನಾಂಗೀಯ ದ್ವೇಷಾಗ್ನಿಯು ಭುಗಿಲೆದ್ದಿರುವುದು ... ಒಂದೇ, ಎರಡೇ, ಅಥವಾ ಎರಡು ಸಾವಿರದ ಹನ್ನೆರಡೇ?! ದಿಟವಾಗಿ, ಸನಾತನ ಯುಗದಿಂದಲೂ, ನರನಾಡಿನಾಳಗಳ ಆಳಗಲಗಳಲ್ಲಿ 'ದೇವ ಕಣ'ವನ್ನು (ಗಾಡ್ ಪಾರ್ಟಿಕಲ್) ಒಯ್ದಿರುವ, ಪರಮಾಣುವಿನಲ್ಲಿಯೂ ಪರಮಾತ್ಮನನ್ನೇ ಕಾಣುವ, ಭಾರತೋದ್ಭವರ ಸ್ಥಿತಿ ಇಷ್ಟು ಬೇಗ ಇಷ್ಟು ಕ್ಷಯಿಸಿತೆಂದರೆ ನಂಬುವುದಾದರೂ ಹೇಗೆ? ಅದು ಹೇಗಾದರಿರಲಿ, ನಿಜ ದುರಂತವೆಂದರೆ, ಈ ಯಾವ ಸುಡುಸತ್ಯಗಳೂ, ಸ್ವಹಿತಾರ್ಥವನ್ನು ಅರಸುತ್ತಿರುವ ಅರಸರನ್ನು, ಲಂಡ-ಲಂಪಟ-ಲಂಚಲೋಲುಪ ಅಧಿಕಾರಸ್ಥರನ್ನು, ನಿತ್ಯಸನ್ಮಾನಿತ ಬುದ್ಧಿಪುರುಷರನ್ನು,ಧರ್ಮಾಗ್ರಹ-ನ್ಯಾಯಾಗ್ರಹ ವರೇಣ್ಯರನ್ನು, ಸ್ವಸಂತೃಪ್ತ ಸು.ಸಂಸುಪ್ತ ಸಾಮಾನ್ಯರನ್ನು ಇನ್ನೂ ಮುಟ್ಟಿಯೇ ಇಲ್ಲವೆಂಬುದು.

ಭಾಗ್ಯದೊಡನೆ ಭೇಟಿ. ಎಂದಿಗೆ?

'ಬಿಡುಗಡೆ'ಯ ಆ ಕಾರಿರುಳು ಕಡೆಗೆ ಹಡೆದುಕೊಟ್ಟಿದ್ದು ಇಷ್ಟೆ: ವಸಾಹತಿನ ಅಧಿಕಾರ ಹಸ್ತಾಂತರ; ದೇಶೀ ಅಧಿನಾಯಕರಿಗೆ ಅದೇ 'ನೆಲಸಿಗ ಅಧೀನ'ರ ಮೇಲೆ ಸ್ವಾಮ್ಯವನ್ನೀವ, ಅರೆರಾತ್ರಿಯಲ್ಲಿ ಅವರಿಗೆ ಹಿರಿಕೊಡೆಹಿಡಿದು, ಅವರನ್ನೇ 'ಭಾರತಭಾಗ್ಯವಿಧಾತ'ರೆಂದು ಉದ್ಘೋಷಿಸುವ, ಒಂದು ಘನ ಸಂ-ಭ್ರಮ; ಜೊತೆಗೆ, ಪ್ರಭುಗಳು ತಮ್ಮ ಸೇವಕರಿಂದ ತಾವೇ ಆಳಿಸಿಕೊಳ್ಳಲು ಆಯ್ಕೆ ಮಾಡಬೇಕಾದಂಥ ವಿಕಟ, ವಿಲೋಮ ವ್ಯವಸ್ಥೆಯ ಬೀಜಾವಾಪ. ಇದರಿಂದ ದೊರೆತದ್ದು ಸತ್ಪ್ರಜೆಗಳಿಗೆ ಸ್ವಾತಂತ್ರ್ಯವಲ್ಲ; ಹೊಸ 'ಸ್ವಾಹಾರ್ಥಿ' ಸ್ವಾಮಿಗಳ ಸ್ವಚ್ಛಂದತೆಗೆ ಸ್ವಪ್ನ ಸನ್ನದಷ್ಟೆ.

ಮತ್ತು ಇದು ನೆಲೆಗೊಟ್ಟಿದ್ದು ಬರಿಯ ಆರ್ಥಿಕ, ರಾಜಕೀಯ ಭ್ರಷ್ಟತೆಗಲ್ಲ; ಒಂದು ಭವ್ಯ ಸಮಾಜದ-ಸಂಸ್ಕೃತಿಯ-ಸಭ್ಯತೆಯ ಮೌಲ್ಯಹತ್ಯೆಗೆ. ಇಂದಿನ ಕಾಳವರಾಹಕಲ್ಪದ ಭಾರತವು, ಈ ಪರಿಯ ಟೊಳ್ಳು ಬುಡಬೇರುಗಳ ಮೇಲೆ, ಮತ್ತೊಂದು ಹುಟ್ಟಿನ ಹೊಸಿಲಿನಲ್ಲಿ ಅದಿರುತ್ತ ನಿಂತಿದೆ. ಈ ಭಾವ್ಯಭಾರತವಾದರೂ ನಮಗೆ ಆ ದೀರ್ಘನಿರೀಕ್ಷಿತ 'ಭಾಗ್ಯದೊಡನೆ ಭೇಟಿ'ಯನ್ನು ತಂದೀತೇ ಎಂಬುದು, ಪ್ರತಿ ಪ್ರಜೆಯೂ ಧ್ವನಿಯೆತ್ತಿ, ಪ್ರತಿ ಪ್ರತಿನಿಧಿಯಿಂದ ಪ್ರತಿಧ್ವನಿಯನ್ನು ಪ್ರಚೋದಿಸುವುದರ ಮೇಲೆ ನಿಶ್ಚಿತವಾಗಿ ನಿಂತಿದೆ. ಪ್ರಜೆಗಳು ಮಂತ್ರಿಮುಗ್ಧ ಹಿಂದಾಳುಗಳಾಗಿ ಕೈಕಟ್ಟಿ ನಿಲ್ಲದೆ, ಸತ್ವದೊಡನೆ ರಾಜಸ-ತ್ವವನ್ನೂ ಕೂಡಿಸಿಕೊಂಡು ಕೈಬೀಸಿ ಮುನ್ನಡೆದರೆ ಮಾತ್ರ, ಸತ್ವವಿರುವ ರಾಜರನ್ನು ಕಾಣಬಹುದು; ಇಲ್ಲದಿದ್ದಲ್ಲಿ ಪ್ರಜಾಸತ್ತೆಯು ಸತ್ತವರ ಸಂತೆಯಾಗುವುದೆಂಬುದರಲ್ಲಿ ಸಂಶಯವೇ ಸುಳಿಯದು.

* * *

ಉಪನಿಷತ್‌ಗಳ ಅಧ್ಯಯನ : ಓಂ

– ವಿನೋಬಾ

– ೧ –

ಭಗವದ್ಗೀತೆಯಲ್ಲಿ 'ಓಂ ತತ್ ಸತ್' ಇದು ಬ್ರಹ್ಮನ ಮೂರನೆಯ ನಿರ್ದೇಶ ಎಂದು ಹೇಳಲಾಗಿದೆ ಮತ್ತು ಈ ಮೂರೂ ರೂಪಗಳಲ್ಲಿ ಪರಮಾತ್ಮ ಕರ್ಮಮಯ ಸೃಷ್ಟಿಯಲ್ಲಿ ವ್ಯಾಪಿಸಿದ್ದಾನೆ. ಇವುಗಳಲ್ಲಿಯ 'ಓಂ' ಒಂದು ಗೂಢ ಸಂಕೇತವಿದೆ. ಅದರಿಂದ ಯಾವುದೇ ಲೌಕಿಕ ಅರ್ಥದ ಬೋಧ ಆಗುವುದಿಲ್ಲ. ಅದ್ದರಿಂದ ಅಲೌಕಿಕ, ವೈದೀಕ ಅಥವಾ ಪಾರಮಾರ್ಥಿಕ ಕರ್ಮದಲ್ಲಿ ಈಶ್ವರನ ಸ್ವರೂಪವನ್ನು ಸೂಚಿಸಲು ಇದೊಂದು ಒಳ್ಳೆಯ ಚಿನ್ಹೆ ಅಥವಾ ಸಂಜ್ಞೆಯಾಗಿದೆ. ಇದೇ ಕಾರಣವಾಗಿ ಬ್ರಹ್ಮವೇತ್ತಾ ಋಷಿಗಳು ಸ್ವಾಧ್ಯಾಯ, ಯಜ್ಞ, ದಾನ, ತಪ ಮತ್ತು ಉಳಿದೆಲ್ಲ ವೈದೀಕ ಇಲ್ಲವೇ ಪಾರಮಾರ್ಥಿಕ ಕರ್ಮವನ್ನು ಓಂಕಾರದ ಉಚ್ಚ ಧ್ವನಿಯಿಂದ ಪ್ರಾರಂಭಿಸುತಿದ್ದರು. 'ತತ್' ಶಬ್ದದ ಅರ್ಥ 'ಅದು'. ಅಂದರೆ 'ಇದು' ಅಥವಾ 'ನನ್ನದಲ್ಲ', 'ಇದಂ ನ ಮಮ'. ಆದ್ದರಿಂದ ಈ ಶಬ್ದದಿಂದ ಪರಾರ್ಥ ಅಥವಾ ನಿಷ್ಕಾಮ ಕರ್ಮದ ಬೋಧವಾಗುತ್ತದೆ. ಮತ್ತು ಇಂಥ ಕರ್ಮಗಳಲ್ಲಿ ಭಗವಂತನ ಅಧಿಷ್ಠಾನ ಸೂಚಿತವಾಗುತ್ತದೆ. ಶಬ್ದದ ಪ್ರಯೋಗ ಮುಖ್ಯ ರೂಪದಲ್ಲಿ ನೈತಿಕ (ಪ್ರಶಸ್ತ) ಕರ್ಮಕ್ಕಾಗಿ ಆಗುತ್ತದೆ. ಆದ್ದರಿಂದ ಈ ಶಬ್ದ ಇಂಥ ಸತ್ಕರ್ಮಗಳ ಇಲ್ಲವೇ ಸಾಧು ಭಾವನೆಗಳ ಪರ್ಯಾಯ-ವಾಚಕವಿದೆ. ಯಾವುದೇ ಕರ್ಮ ಸ್ವಾರ್ಥ ಪೂರ್ಣವಾಗಿದ್ದರೂ ನೀತಿಯ ವಿರುದ್ಧ ಇರುವುದಿಲ್ಲವೊ ಅಥವಾ ಯಾವ ಇಚ್ಛೆಗಳು ಧರ್ಮಾಚರಣೆಯಲ್ಲಿ ಬಾಧಕವಾಗುವುದಿಲ್ಲವೊ ಅವು. ಈ ಶಬ್ದ ನೀತಿಯುಕ್ತ ಕರ್ಮದಲ್ಲಿ ಈಶ್ವರನ ಸಹಾಯವನ್ನು ಸೂಚಿಸುತ್ತದೆ. ಈ ಪ್ರಕಾರದಿಂದ ಈ ಮೂರನೇ ನಿರ್ದೇಶನದಲ್ಲಿ ಪಾರಮಾರ್ಥಿಕ ಕರ್ಮ ಈಶ್ವರಾರ್ಪಣ ವೃತ್ತಿಯಿಂದಾಗಲೀ. ಪರಾರ್ಥದಲ್ಲಿ ನಿಷ್ಕಾಮ ಭಾವನೆಯನ್ನು ಸೇರಿಸಬೇಕು ಮತ್ತು ಸ್ವಾರ್ಥವನ್ನು ಕೂಡ. ನೀತಿಯುಕ್ತ ಅಥವಾ ವಿವೇಕಪೂರ್ಣವಾಗಿರಬೇಕೆಂದು ತ್ರಿವಿಧಶಾಸ್ತ್ರದಿಂದ ಸೂಚಿತವಾಗಿದೆ. ಸ್ವಾರ್ಥ, ಪರಾರ್ಥ ಮತ್ತು ಪಾರಮಾರ್ಥ ಇಲ್ಲವೇ ಇಹಲೋಕ, ಪರಲೋಕ ಮತ್ತು ಮೋಕ್ಷ. ಈ ಮೂರು ಏಣಿಗಳ ಸಮಾವೇಶ 'ಓಂ ತತ್‌ಸತ್' ಎಂಬ ಬ್ರಹ್ಮ ನಿರ್ದೇಶದಲ್ಲಿದೆ. ಜೊತೆಗೇ ವೈದೀಕ ಧರ್ಮದ ಇಡೀ ಸಾರಾ ಅದರಲ್ಲಿ ಸಂಕಲಿತ ರೂಪದಲ್ಲಿ ಬರಬಹುದಾಗಿದೆ. ಆದರೆ ನೀತಿಯುಕ್ತ ಸ್ವಾರ್ಥವೇ ಪರಾರ್ಥ ಅಥವಾ ಪಾರಮಾರ್ಥ ಕೂಡ ಆಗಬಲ್ಲದು. ಇದಕ್ಕೆ ವ್ಯತಿರಿಕ್ತವಾಗಿ ನಿಷ್ಕಾಮ ಪರಾರ್ಥದಲ್ಲಿ ಪಾರಮಾರ್ಥದ ಜೊತೆಗೆ ಸಮಂಜಸ ಸ್ವಾರ್ಥಕ್ಕಾಗಿ ಕೂಡ ಸ್ಥಳ ಇರುತ್ತದೆ. ಅದರಂತೆಯೇ ಈಶ್ವರಾರ್ಪಣ ಪೂರ್ವಕ ಮಾಡಲಾದ ಪಾರಮಾರ್ಥ ಪರಾರ್ಥ ಅಥವಾ ವಿವೇಕಪೂರ್ಣ ಸ್ವಾರ್ಥದಲ್ಲಿ ಬಾಧಕ ಆಗುವುದಿಲ್ಲ. ಆದ್ದರಿಂದ 'ಓಂ ತತ್ ಸತ್' ಎಂಬೀ ಮೂರನೆಯ ನಿರ್ದೇಶದಲ್ಲಿ "ಈಶ್ವರಾರ್ಪಣ ಪೂರ್ವಕ

(ಓಂ) ನಿಷ್ಕಾಮ (ತತ್) ಸತ್ಕರ್ಮ (ಸತ್) ಮಾಡಿರೀ." ಇಂಥ ಸರ್ವಾಂಗ ಸುಂದರ ಏಕಾರ್ಥವಾಚೀ ಸಮನ್ವಯಾತ್ಮಕ ಅರ್ಥವನ್ನು ಭಗವಂತನು ವ್ಯಕ್ತಮಾಡಿದ್ದಾನೆ. (ಗೀತೆ ೧೭.೨೩.೨೭)

ಯಾವ ತರ್ಕದಿಂದ ಮೂರನೇ ನಿರ್ದೇಶನದಲ್ಲಿಯಿಂದ ಒಂದೇ ಅರ್ಥ ನಿಷ್ಪನ್ನವಾಯಿತೊ ಅದರ ಸಹಾಯದಿಂದಲೇ ಪ್ರತ್ಯಕ್ಷವಾಗಿ ಈ ಮೂರನೇ ನಿರ್ದೇಶಕ್ಕೆ ಒಂದು ರೂಪವನ್ನು ಕೊಡಬಹುದಾಗಿದೆ. ಆದ್ದರಿಂದ 'ಓಂ'ದ ಮೂಲ ಗೂಢ, ವೈದಿಕ ನಿರ್ದೇಶವನ್ನು ನಿಶ್ಚಿತವೆಂದು ತಿಳಿದು ಇಡೀ 'ಓಂ ತತ್ ಸತ್' ನಿರ್ದೇಶದ ಸಮಾವೇಶವನ್ನು ನಿಶ್ಚಿತವೆಂದು ತಿಳಿದು ಇಡೀ 'ಓಂ ತತ್ ಸತ್' ಎಂಬ ನಿರ್ದೇಶ ಉತ್ಪನ್ನವಾಗಿದೆ. ತನ್ನ ಕೆಲಸವನ್ನು ಪೂರ್ಣ 'ಓಂ ತತ್ ಸತ್' ನಿರ್ದೇಶದ ಸಮಾವೇಶವನ್ನು ಅದರಲ್ಲಿಯೇ ಮಾಡಲಾಗುತ್ತದೆ. ಐತಿಹಾಸಿಕ ಪರಂಪರೆಯ ದೃಷ್ಟಿಯಿಂದ ಓಂ ಎಂಬ ನಿರ್ದೇಶ ಪ್ರಾಚೀನತರವಾಗಿರುವುದರಿಂದ ಅದರ ವ್ಯಾಖ್ಯೆಯನ್ನು ಮಾಡುವ ಉದ್ದೇಶದಿಂದಲೇ 'ಓಂ ತತ್ ಸತ್' ಎಂಬ ನಿರ್ದೇಶ ಉತ್ಪನ್ನವಾಗಿತ್ತು. ತನ್ನ ಕೆಲಸವನ್ನು ಪೂರ್ಣ ಮಾಡಿ ಪುನಃ ಪುನಃ ಮೂಲ ನಿರ್ದೇಶದಲ್ಲಿಯೇ ಅದು ವಿಲೀನವಾಯಿತು. ವಿಲೀನವಾಗುವ ಸಮಯದಲ್ಲಿ ಅದಕ್ಕಾಗಿ ಯಾವ ತರ್ಕದ ಅವಶ್ಯಕತೆ ಆಯಿತೊ ಅದನ್ನು ಮೇಲೆ ಹೇಳಲಾಗಿದೆ. ಈ ತರ್ಕದ ಅನುಸಾರ ಮೊದಲು ವೈದೀಕ ಕರ್ಮಗಳ ಆರಂಭದಲ್ಲಿ ಬರುವ ಮಂತ್ರದ ಲೌಕಿಕ-ವೈದೀಕ ಎಲ್ಲ ಕೆಲಸಗಳ ಆರಂಭದಲ್ಲಿ ಉಚ್ಚಾರಣೆ ಮಾಡುವ ಪದ್ಧತಿ ಬಂತು. ಪದ ಅಥವಾ ಪದಾರ್ಥ ಇವೆರಡೂ ಸೃಷ್ಟಿಯ ಆಚೆಗೆ ಇರುವಂಥ ಈಶ್ವರನನ್ನು ಪದ-ಸೃಷ್ಟಿಯಲ್ಲಿ ತರುವ ಮೊದಲ ಕೆಲಸ ಓಂಕಾರ ಮಾಡಿತು. ತದನಂತರ ಅದನ್ನು ಪದಾರ್ಥ-ಸೃಷ್ಟಿಯಲ್ಲಿ ತರುವ ಕೆಲಸವನ್ನು ಗಣಪತಿಯ ಮೂರ್ತಿ ಮಾಡಿರಬಹುದು, ಹೀಗೆಂದು ಹಲವರ ತರ್ಕವಿದೆ. ಇನ್ನು ಹಲವರ ಅಭಿಪ್ರಾಯ ಏನೆಂದರೆ ಓಂಕಾರದಲ್ಲಿ 'ಅಕಾರ' ಸೂಚಕ (೩) ಅಂಶದ ಸ್ಥಾನದಲ್ಲಿ ಮಸ್ತಿಷ್ಕದ ಕಲ್ಪನೆ ಮತ್ತು ಮುಂಭಾಗ (ॐ) ವಕ್ರಾಕೃತಿಯ ಸ್ಥಳದಲ್ಲಿ ಸೊಂಡಿಲಿನ ಕಲ್ಪನೆ ಮಾಡಿ ಇಂಥದೇ ಮತ್ತೊಂದು ಕಲ್ಪನೆ ಮಾಡಿ ಗಣಪತಿಯ ಅವತಾರವಾಯಿತು. ಇದಾದ ನಂತರ ಎಲ್ಲ ಕೆಲಸಗಳ ಆರಂಭದಲ್ಲಿ ಹೊಸ ಅವತಾರದ ಸ್ಮರಣೆಯಾಗುವುದು ಸ್ವಾಭಾವಿಕ. ಜ್ಞಾನೇಶ್ವರ ಇದೇ ರೀತಿಯ ಕಲ್ಪನೆಯನ್ನು ಜ್ಞಾನೇಶ್ವರಿಯಲ್ಲಿ ಮಾಡಿದ್ದಾನೆ. ಓಂಕಾರದ ಅ, ಉ, ಮ್ ಹೀಗೆ ಮೂರು ವಿಭಾಗ ಮಾಡಿ ಅ-ಕಾರದ ಸ್ಥಳದಲ್ಲಿ ಪದ್ಮಾಸನ, ಉ-ಕಾರದ ಸ್ಥಳದಲ್ಲಿ ದೊಡ್ಡ ಹೊಟ್ಟೆ ಮತ್ತು ಮ-ಕಾರದ ಸ್ಥಳದಲ್ಲಿ ವಕ್ರತುಂಡ ಎಂಬ ರೀತಿ ಆ ಸಮಯದಲ್ಲಿ ಕಲ್ಪನೆ ಮಾಡಬೇಕಿದೆ.

ಅಕಾರ ಚರಣಯುಗಲ। ಉಕಾರ ಉದರ ವಿಶಾಲಾ। ಮಕಾರ ಮಹಾಮಂಡಲ ಮಸ್ತಕಕಾರೆ॥ (ಜ್ಞಾನೇಶ್ವರಿ ೧.೧೯)

ಈ ರೀತಿ ಯಾವುದೇ ಕೆಲಸದ 'ಓನಾಮ' ಅಥವಾ 'ಶ್ರೀ ಗಣೇಶ'ವಾದಂತಾಯಿತು. ಸಾರಾಂಶವಿಷ್ಟೇ ಯಾವುದೇ ಕಾರ್ಯದ ಆರಂಭದಲ್ಲಿ ವಿಶೇಷತಃ ಪಾರಮಾರ್ಥಿಕ ಮತ್ತು ಅದರಲ್ಲೂ ಕೂಡ ವೇದಾಭ್ಯಾಸ ಇತ್ಯಾದಿ ಸ್ವಾಧ್ಯಾಯದ ಪ್ರಾರಂಭದಲ್ಲಿ ಓಂಕಾರದ ಸ್ಮರಣೆ ಮತ್ತು ಚಿಂತನೆ ಮಾಡುವ

ವೈದೀಕರ ಪರಂಪರೆ ಇದೆ. ತದನುಸಾರ ನಾವು ಕೂಡ ಉಪನಿಷತ್ತುಗಳ ಅಧ್ಯಯನ ಪ್ರಾರಂಭಿಸುವ ಮೊದಲು ಇದೇ ಗೂಢ ಮಂತ್ರದ ವಿಚಾರ ಮಾಡುವಂಥವರಾಗಿದ್ದೇವೆ.

ಪರೋಕ್ಷಪ್ರಿಯ ಇವ ಈ ದೇವಾಃ :- ದೇವತೆಗಳಿಗೆ ಸಾಂಕೇತಿಕ ಭಾಷೆ ಪ್ರಿಯ. ಇದು ದೇವತೆಗಳ ಸ್ವಾಭಾವವೆಂದು ಹೇಳಲಾಗಿದೆ. ದೇವತೆಗಳ ಶ್ರೇಣಿ ತಲುಪಿದ ಋಷಿಗಳಿಗೂ ಕೂಡ ಇದೇ ಮಾತು ಅನ್ವಯಿಸುತ್ತದೆ. ಅವರ ವಾಣಿ ಪ್ರಾಯಶಃ ಗೂಢವಾಗಿರುತ್ತದೆ. ಇದಕ್ಕೆ ಅನೇಕ ಕಾರಣಗಳಿರಲು ಸಾಧ್ಯ. ತಮ್ಮ ಪವಿತ್ರ ಅನುಭವವನ್ನು ಜಗತ್ತಿನ ಎದುರಿಗೆ ಮಂಡಿಸುವ ಸಮಯದಲ್ಲಿ ಅದರ ಪಾವಿತ್ರ್ಯತೆ ಕಾಪಾಡಿಕೊಂಡು ಬರಲಿ ಮತ್ತು ಅಧಿಕಾರಿ ಪುರುಷನ ಬುದ್ಧಿ ಬೇಧ ಕೂಡ ಆಗದಿರಲೆಂಬ ಕಾರಣವಿರಬಹುದು. ಅಥವಾ ತುಳಸೀದಾಸರು ಹೇಳಿರುವಂತೆ ಜಗತ್ತಿನ ದೃಷ್ಟಿಯಲ್ಲಿ 'ನೀರಸ'ವೆಂದು ಪ್ರತೀತವಾಗುವ ತಮ್ಮ ಅನುಭವವನ್ನು ಒಂದು ವೇಳೆ 'ರೋಚಕ' ಭಾಷೆಯಲ್ಲಿ ಹೇಳಿದಲ್ಲಿ ಬಹುಶಃ ಸಂಸಾರಕ್ಕೆ ಅದು ಹೆಚ್ಚು ಒಪ್ಪಿಗೆಯಾಗುತ್ತದೆ ಎಂಬ ವಿಚಾರ ಇದ್ದಿರಬಹುದು. ಅಥವಾ ಪ್ರತಿಯೊಬ್ಬನಿಗೂ ತನ್ನ ಅನುಭವಕ್ಕಾಗಿ ಅವಕಾಶವಿರಲಿ ಹಾಗೂ ತಮ್ಮ ಅನುಭವವನ್ನು ಎರಡನೆಯವರ ಮೇಲೆ ಹೇರದಿರಲಿ ಎಂಬ ಉದ್ದೇಶವಿರಬಹುದು. ಅಥವಾ ಯಾವ ಶಿಕ್ಷಣ ಅಥವಾ ಕಾವ್ಯ ಉತ್ತಮವೆಂದು ಒಪ್ಪಲಾಗುತ್ತದೋ ಯಾವುದರಲಿ ಅರ್ಥ ಸೂಚಿತ ಧ್ವನಿತ ಮಾಡಲಾಗಿದೆಯೋ ಅದೇ ಉತ್ತಮ ಶಿಕ್ಷಣ ಅಥವಾ ಕಾವ್ಯ ಎಂದು ಆಲೋಚನೆ ಮಾಡಿರಬಹುದು. ಇನ್ನೊಂದು ಮಾತೂ ಇರಲು ಸಾಧ್ಯ. ಹೊಸ ಹೊಸ ಯುಗಗಳಲ್ಲಿ ಹೊಸ ಹೊಸ ಅರ್ಥ ಸ್ಫುರಿತಗೊಳ್ಳುವ ಶಕ್ತಿ ಖಾಯಂ ಆಗಿರಲಿ ಎಂಬುದಕ್ಕಾಗಿ ಅವರ ವಾಣಿ ಈ ಪ್ರಕಾರ ಇದ್ದಿರಬಹುದು. ಆ ಎಲ್ಲ ಲೋಕ ಸಂಗ್ರಹಾತ್ಮಕ ವಿಚಾರ ಋಷಿಗಳ ಮನಸ್ಸಿನಲ್ಲಿ ಬಹುಶಃ ಬಂದಿರಲಿಕ್ಕಿಲ್ಲ. ಆದ್ದರಿಂದ ಈ ಎಲ್ಲ ಅಸತ್ ಕಾರಣಗಳನ್ನು ಬಿಟ್ಟರು ಕೂಡ ಯಾವ ಭೂಮಿಕೆಯಲ್ಲಿ ಇದ್ದು ಕೊಂಡು ಮೌನದ ಉಪವಾಸದ ಕಾರಣದಿಂದಾಗಿ ಕೇವಲ ಒಂದು 'ನೇತಿ' ಮಂತ್ರದಿಂದ ಆಗಬಹುದಾಗಿದೆ. ಎಲ್ಲಿ ಧ್ಯಾನದ ದೃಷ್ಟಿ ಮಂದವಾಗುತ್ತದೋ ಬುದ್ಧಿಯ ವಿಶಾಕತೆ ಕುಂಠಿತವಾಗುತ್ತದೋ ಇಂಥ ದಿವ್ಯ ಭೂಮಿಕೆ ಮೇಲೆ ಅನುಭೂತ, ಅನಂತ, ಅನುಪಮ ಮತ್ತು ಸ್ವ-ಸಂವೇದ್ಯ ಅನುಭವದ ಸ್ಪಷ್ಟ ಶಬ್ದಗಳಲ್ಲಿ ವರ್ಣನೆ ಮಾಡುವುದು ಶಬ್ದ ಬ್ರಹ್ಮ ಶಕ್ತಿಯನ್ನು ಪಡೆದ ಪರಿಣಿತ ಪ್ರಜ್ಞಾಕವಿಗಳ ವಾಣಿಗೂ ಕೂಡ ಅಸಂಭವವಾಗುತ್ತದೆ. ಕೇವಲ ಇದೇ ಒಂದು ಕಾರಣ ಇದ್ದಿರಬಹುದಾದರೂ ಋಷಿ ತನ್ನ ಅರ್ಥವನ್ನು ಪರೋಕ್ಷ ರೀತಿಯಿಂದ 'ಚಂದೋಮಯ' ಮುಚ್ಚಲ್ಪಟ್ಟ ಶಬ್ದಗಳಲ್ಲಿ ದೀರ್ಘ ಮನನವಿಲ್ಲದೇ ಎಲ್ಲಿ ಪ್ರವೇಶ ಪಡೆಯಲು ಸಾಧ್ಯವೇ ಇಲ್ಲವೋ ಇಂಥ 'ಮಂತ್ರಮಯ' ಭಾಷೆಯ ಮೂಲಕ ಕೇವಲ ಸೂಚಿತ ಮಾಡುವುದರ ಹೊರತಾಗಿ ಬೇರೆ ಏನನ್ನು ಮಾಡುವುದಿಲ್ಲ ಅಥವಾ ಮಾಡಲಾರರು. ವೇದಗಳಿಗೆ ಈ ಮಂತ್ರಮಯಭಾಗ ಹಿಮಾಲಯದ ಅರಣ್ಯದಂತೆ ದುರ್ಗಮ ಮತ್ತು ಓಂಕಾರದ ಗುಹೆಯ ಆ ದುರ್ಗಮ ವನದ ಅತ್ಯಂತ ವಿಕಟ ಸ್ಥಾನವಿದೆ. ಇಲ್ಲಿಂದಲೇ ಆರ್ಯ-ಸಂಸ್ಕೃತಿಯ ಪಾವನಗಂಗೆ ಉದ್ಗಮವಾಗಿದೆ. ಅಭ್ಯುದಯ ಓಂಕಾರದ ಸ್ನಿಗ್ಧ-ಗಂಭೀರ ನಿರ್ಘೋಷ ಮಾಡುತ್ತ ವೈದೀಕ ಋಷಿಗಳ ಮಧುರ ಜೀವನದಿಂದ ಜಡವಾದ ಭಾರತವನ್ನು ಸಚೇತನಗೊಳಿಸುವುದಕ್ಕಾಗಿ

ಆದಿ ಕಾಲದಿಂದಲೂ ಸತತ ಹರಿಯುತ್ತಿದೆ. ವೈದೀಕ ಋಷಿಗಳು ಎಲ್ಲ ಮಂಗಳ ಸ್ಮರಣೆಯನ್ನು ಈ ಓಂಕಾರದ ಸಂಜ್ಞೆಯಲ್ಲಿ ಸಮಾವಿಷ್ಟಗೊಳಿಸಿದ್ದಾರೆ. ಋಷಿಗಳು ವಿಶ್ವವನ್ನು ಸಂಬೋಧಿಸುತ್ತ ದಿವ್ಯ ಸಂದೇಶವಿದೆ. ಪರಬ್ರಹ್ಮದ ಈ ವಾಗ್ಮಯ ಮೂರ್ತಿ ಈ ಸಂದೇಶವನ್ನು ತಿಳಿಯುವುದು, ಈ ಮೂರ್ತಿಯ ಉಪಾಸನೆ ಮಾಡುವುದು ನಮ್ಮ ಕರ್ತವ್ಯ.

ತುಕ್ಷಮಣೆ ಜೆಜೆ ಬೋಲಾ ತೇತೇ ಸಾಜೆ ಯ ವಿಠಲ :- ನಾವು ಏನೆಲ್ಲವನ್ನೂ ಹೇಳಲಿ ಅದೆಲ್ಲವೂ ವಿಠಲನಿಗೆ ಸಲ್ಲುತ್ತದೆ. ಈ ಸಂತ ವಚನದಂತೆ ಉಪನಿಷತ್ತುಗಳ ಋಷಿಗಳು ಈ 'ಓಂ'ನ ಒಬ್ಬರಿಗಿಂತ ಒಬ್ಬರು ಹೆಚ್ಚು ವರ್ಣನೆ ಮಾಡುವುದರಲಿ ತಮ್ಮ ವಾಣಿಯ ಸಾರ್ಥಕ್ಯವಿದೆಯೆಂದು ತಿಳಿದಿದ್ದಾರೆ.

(ಮುಂದುವರಿಯುವುದು....)

ಸಂತಾಪ...

ಗಾಂಧೀ ವಿಚಾರದ ಅಭಿಮಾನಿ, ಸರ್ವೋದಯ ವಿಚಾರದ ಪ್ರತಿಪಾದಕ ಹಾಗೂ ಆಧ್ಯಾತ್ಮ ಜೀವಿಯಾಗಿದ್ದ ಡಾ॥ಸಿ.ಬಂದೀಗೌಡರು ತಮ್ಮ ೯೩ನೇ ವಯಸ್ಸಿನಲ್ಲಿ ೧೮-೧೧-೨೦೧೨ರಂದು ನಿಧನರಾದರು. ತಮ್ಮ ೧೫ನೇ ವಯಸ್ಸಿನಿಂದ ಸಾರ್ವಜನಿಕ ಜೀವನ ಪ್ರಾರಂಭಿಸಿದ ಡಾಕ್ಟರ್ ತಮ್ಮ ಕೊನೆಯುಸಿರಿನವರೆಗೂ ಕ್ರಿಯಾಶೀಲರಾಗಿದ್ದರು. ವಿಭಿನ್ನ ರೀತಿಯ ರಾಜಕಾರಣಿಯಾಗಿದ್ದರು. ತತ್ವಸಹಿತವಾದ ರಾಜಕಾರಣ ನಡೆಸಿದರು. ತಮ್ಮ ವೈದ್ಯ ವೃತ್ತಿಯನ್ನು ಸಮಾಜ ಸೇವೆಗಾಗಿ ಉಪಯೋಗಿಸಿದರು. ಪ್ರತಿವರ್ಷ ಪಶ್ಚಿಮವಾಹಿನಿಯಲ್ಲಿ ಗಾಂಧೀಜಿಯ ಚಿತಾಭಸ್ಮದ ನೆನಪಿನಲ್ಲಿ ಸರ್ವೋದಯ ಮೇಳವನ್ನು ತಮ್ಮ ಪತ್ನಿ ರುಕ್ಮಿಣಿಯಮ್ಮನವರ ಜೊತೆ ಸಂಘಟಿಸುತ್ತಿದ್ದರು. ಆ ಮೇಳದ ಆಧಾರಸ್ತಂಭವಾಗಿ ಕೊನೆಯವರೆಗೂ ಇದ್ದರು. ಅವರ ಮೃತ್ಯುವಿನಿಂದಾಗಿ ಸರ್ವೋದಯ ಆಂದೋಲನ ತುಂಬ ನಷ್ಟಕ್ಕೆ ಒಳಗಾಗಿದೆ. ಮೃತರ ಆತ್ಮಕ್ಕೆ 'ಜನಪದ ವಿಚಾರ' ಶಾಂತಿಯನ್ನು ಕೋರುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೦೨

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ಆಗಾಗ್ಗೆ ಸಮಯೋಚಿತ ಮತ್ತು ಸಮಾಜೋಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುತ್ತದೆ. ಅಂಥವುಗಳಲ್ಲಿ ತುಂಬಾ ಹಿಂದಿನದು ಒಕ್ಕಲುತನ ಸೇವಾ ಕೇಂದ್ರದ ಕಾರ್ಯಕ್ರಮ. ಈ ಕೇಂದ್ರವು ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿತ್ತು. ಈ ಕೇಂದ್ರದ ಸುತ್ತಮುತ್ತ ಹೊಸಳ್ಳಿ, ನಳ್ಳೇನಹಳ್ಳಿ, ನಾರಾಯಣಪುರ, ಸಿಂಗಾಪುರ ಎಂಬ ನಾಲ್ಕೈದು ಹಳ್ಳಿಗಳು ಇವೆ. ಈ ಹಳ್ಳಿಗಳಲ್ಲಿಯ ರೈತರ ವ್ಯವಸಾಯದ ಕೆಲಸಕ್ಕೆ ಸಹಾಯವಾಗಲೆಂದು ಒಕ್ಕಲುತನ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಗಿತ್ತು. ಈ ಸೇವಾ ಕೇಂದ್ರದ ಮೂಲಕ ಸಣ್ಣ ಮತ್ತು ಬಡ ರೈತರಿಗೆ ಅನುಕೂಲವಾಗಲೆಂದು ಕೆಲವು ಸೌಕರ್ಯಗಳನ್ನು ಮಾಡಿಕೊಡಲು ಯೋಚಿಸಲಾಗಿತ್ತು. ಅವುಗಳಲ್ಲಿ ಮುಖ್ಯವಾದುದು ಔಷಧಿ ಸಿಂಪಡಣೆ ಯಂತ್ರವನ್ನು ಅಗತ್ಯವಿದ್ದಾಗ ಕೊಡುವುದು, ಒಳ್ಳೆಯ ತರಕಾರಿ ಮತ್ತು ಹಣ್ಣಿನ ಬೀಜಗಳನ್ನು ಒದಗಿಸುವುದು, ರಾಸಾಯನಿಕ ಗೊಬ್ಬರ ಒದಗಿಸುವುದು. ಈ ಸಾಮಾನ್ಯ ಸಹಾಯಗಳಲ್ಲದ ಅಗತ್ಯವಿದ್ದಾಗ ಎತ್ತುಗಳನ್ನು ಉಳುಮೆಗೆ ಕೊಡುವುದು. ಏಕೆಂದರೆ ರೈತರ ಬಳಿ ಎತ್ತಿಲ್ಲದೆ ಬೇರೆಯವರ ಎತ್ತನ್ನು ಅವಲಂಬಿಸಿ ವ್ಯವಸಾಯ ಮಾಡಬೇಕಾಗುತ್ತಿತ್ತು. ಸಮಯಕ್ಕೆ ಸರಿಯಾಗಿ ವ್ಯವಸಾಯ ಮಾಡದೆ ಇದ್ದುದರಿಂದ ಅವರಿಗೆ ತುಂಬಾ ನಷ್ಟವಾಗುತ್ತಿತ್ತು. ಇದನ್ನು ಮನಗಂಡು ಒಕ್ಕಲುತನ ಸೇವಾ ಕೇಂದ್ರದಲ್ಲಿ ಒಂದು ಜೊತೆ ಎತ್ತನ್ನು ಇರಿಸಲಾಗಿತ್ತು. ಅಗತ್ಯವಿರುವ ರೈತರು ಈ ಜೊತೆ ಎತ್ತನ್ನು ಉಳುಮೆಗಾಗಿ ಉಚಿತವಾಗಿ ತೆಗೆದುಕೊಂಡು ಹೋಗಬಹುದಾಗಿತ್ತು. ಆ ದಿನದ ಮೇವನ್ನು ಮಾತ್ರ ದನಗಳಿಗೆ ಹಾಕಬೇಕೆಂದು ಹೇಳಲಾಗುತ್ತಿತ್ತು. ಒಕ್ಕಲುತನ ಸೇವಾ ಕೇಂದ್ರದ ಈ ಎಲ್ಲ ಸೇವೆಗಳನ್ನು ರೈತರು ಉಪಯೋಗಿಸಿಕೊಳ್ಳುತ್ತಿದ್ದರಾದರೂ ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಿರಲಿಲ್ಲ. ಸಿಂಪಡಣೆಯಂತ್ರವನ್ನು ತೆಗೆದುಕೊಂಡು ಹೋಗುತ್ತಿದ್ದರೇ ವಿನಃ ಅದು ಕೆಡದಂತೆ ನೋಡಿಕೊಳ್ಳುತ್ತಿರಲಿಲ್ಲ. ಅ ಯಂತ್ರದಲ್ಲಿ ಅಗತ್ಯವಿದ್ದ ವೈಸರನ್ನು ಕಳೆಯುತ್ತಿದ್ದರು. ಸ್ಪ್ರೇಯರ್‌ನಲ್ಲಿ ಮಣ್ಣು ಸೇರಿದ್ದರೂ ಶುಚಿಗೊಳಿಸುತ್ತಿರಲಿಲ್ಲ. ಉಳುಮೆಗೆ ಉಪಯೋಗಿಸಿದ ಎತ್ತುಗಳಿಗೆ ಸರಿಯಾಗಿ ಮೇವು ಹಾಕುತ್ತಿರಲಿಲ್ಲ, ನೀರು ಕುಡಿಸುತ್ತಿರಲಿಲ್ಲ. ಈ ರೀತಿ ಯಾವಾಗ ಫಲಾನುಭವಿಗಳೇ ತಮ್ಮ ಅನುಕೂಲತೆಗಳ ಬಗ್ಗೆ ಬೇಜವಾಬ್ದಾರಿಯನ್ನು ತೋರಿಸಲು ಶುರುಮಾಡಿದ ಮೇಲೆ ಒಕ್ಕಲುತನ ಸೇವಾ ಕೇಂದ್ರ ತನ್ನ ರೈತ ಸೇವಾ ಚಟುವಟಿಕೆಗಳನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಯಿತು. ಅದನ್ನು ನಿಲ್ಲಿಸಿದ ಮೇಲೆ ಆ ಸೇವೆ ಇದ್ದಿದ್ದರೆ ಚೆನ್ನಾಗಿತ್ತೆಂದು ಹಳಹಳಿಸಿದ ರೈತರು

ಬೇಕಾದಷ್ಟು, ಫಲಾನುಭವಿಗಳ ಉದಾಸೀನತೆಯಿಂದ ಬೇಜವಾಬ್ದಾರಿಯಿಂದ ಸರ್ಕಾರದ ಅನೇಕ ಅಭಿವೃದ್ಧಿ ಯೋಜನೆಗಳು ಹಾಳಾಗುತ್ತಿರುವುದನ್ನು ನೋಡುತ್ತಿದ್ದೇವೆ.

ಟ್ರಸ್ಟಿನ ಇನ್ನೊಂದು ಸೇವಾ ಕಾರ್ಯ ಊರಿನ ಹಿರಿಯರಿಗೆ ಸರ್ಕಾರದಿಂದ ವೃದ್ಧಾಪ್ಯ ವೇತನ ದೊರೆಯುವಂತೆ ಮಾಡಿಕೊಡುವುದು. ಈ ಸಹಾಯ ಪಡೆಯಲು ಊರಿನ ಅನೇಕ ವೃದ್ಧರು ಬಂದರು. ಪ್ರತಿ ಮಂಗಳವಾರವನ್ನು ಈ ಕೆಲಸಕ್ಕಾಗಿ ಮೀಸಲಿಡಲಾಗಿತ್ತು. ಸುಮಾರು ೪೦-೫೦ ಜನ ವೃದ್ಧರು ಮತ್ತು ಅನೇಕ ಅಂಗವಿಕಲರು ಸೇರುತ್ತಿದ್ದರು. ಅವರಲ್ಲಿಯ ಕೆಲವರಿಗೆ ವೃದ್ಧಾಪ್ಯವೇತನ ದೊರೆಯುವಂತೆ ಮಾಡಲಾಯಿತು. ವೃದ್ಧರ ಈ ಸಭೆಗೆ ಗ್ರಾಮ ಪಂಚಾಯತಿಯ ಅಧ್ಯಕ್ಷರನ್ನು, ಉಪತಹಶೀಲ್ದಾರರನನ್ನು, ಗ್ರಾಮಲೆಕ್ಕಾಧಿಕಾರಿಯನ್ನು ಬರಮಾಡಿಕೊಳ್ಳಲಾಗುತ್ತಿತ್ತು. ಊರಿನ ಒಬ್ಬ ಯುವಕ ಉಪತಹಶೀಲ್ದಾರ್‌ರ ಕಛೇರಿಯಲ್ಲಿ ಸಹಾಯಕನಾಗಿ ಕೆಲಸಮಾಡುತ್ತಿದ್ದ. ನಾಡ ಕಛೇರಿಯಲ್ಲಿಯ ತನ್ನ ಇರುವಿಕೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ. ವೃದ್ಧಾಪ್ಯ ವೇತನ ದೊರಕಿಸಿಕೊಡುವ ಕೆಲಸವನ್ನು ಗೈರಕಾನೂನಿನ ಮಾರ್ಗವಾಗಿ ಮಾಡತೊಡಗಿದ. ಇದರಿಂದಾಗಿ ೪೦ ವರ್ಷ ಒಳಗಿನವರಿಗೆ ಬಹುಬೇಗ ವೃದ್ಧಾಪ್ಯ ವೇತನ ದೊರೆಯಲು ಪ್ರಾರಂಭವಾಯಿತು. ಪ್ರತಿಮಂಗಳವಾರ ಸಭೆಗೆ ಬರುತ್ತಿದ್ದ ನಿಜವಾದ ವೃದ್ಧರಿಗೆ ವೇತನ ದೊರೆಯಲು ವಿಳಂಬವಾಗುತ್ತಿತ್ತು ಮತ್ತು ಅನೇಕ ಸಲ ದೊರೆಯದೆ ಹೋಗುತ್ತಿತ್ತು. ಆ ಯುವಕನ ಕೈಚಳಕ ನ್ಯಾಯವಾಗಿ ವೃದ್ಧಾಪ್ಯ ವೇತನ ದೊರೆಯುವ ಪ್ರಕ್ರಿಯೆಯನ್ನು ವಿಫಲಗೊಳಿಸುತ್ತ ಬಂದಿತು. ಇದರಿಂದಾಗಿ ಎಲ್ಲರ ಭ್ರಮೆ ನಿರಸನಗೊಂಡಿತು. ಆ ಯುವಕ ಅಕ್ರಮವಾಗಿ ಹಣ ಪಡೆದು ವೃದ್ಧಾಪ್ಯ ವೇತನವನ್ನು ಕೊಡಿಸತೊಡಗಿದ ಮೇಲೆ ಟ್ರಸ್ಟಿನ ಮೂಲಕ ವೃದ್ಧಾಪ್ಯ ವೇತನ ದೊರಕಿಸಿಕೊಡುವ ಕೆಲಸ ಸ್ಥಗಿತಗೊಂಡಿತು. ವೃದ್ಧಾಪ್ಯವೇತನ ಯೋಜನೆಯಲ್ಲಿ ಇಂದಿಗೂ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಹೊಸ ಜೀವನ ದಾರಿ ಕೇಂದ್ರದ ಸುತ್ತಲಿನ ಹಳ್ಳಿಗರಿಗೆ ಅನುಕೂಲವಾಗಲೆಂದು ಒಂದು ಅಂಗಡಿಯನ್ನು ತೆರೆಯಲಾಯಿತು. ಈ ಅಂಗಡಿ ಎಲ್ಲರಿಗೂ ತಮ್ಮದೆಂಬ ಭಾವನೆ ಬರಲೆಂಬ ಉದ್ದೇಶದಿಂದ ಅದಕ್ಕೆ 'ನಮ್ಮಂಗಡಿ' ಎಂದು ನಾಮಕರಣ ಮಾಡಲಾಗಿತ್ತು. ಹೊಸ ಜೀವನ ದಾರಿ ಕೇಂದ್ರ ಪ್ರೌಢ ಅಂಗವಿಕಲರ ಪುನರ್ವಸತಿ ಕೇಂದ್ರವೂ ಆಗಿತ್ತಾದ್ದರಿಂದ ಹನುಮಂತ ಎಂಬ ಪ್ರೌಢ ಅಂಗವಿಕಲ ಈ ನಮ್ಮ ಅಂಗಡಿಯನ್ನು ನೋಡಿ ಕೊಳ್ಳುವಂತೆ ಏರ್ಪಡಿಸಲಾಯಿತು. ಹನುಮಂತನಿಗೆ ಎರಡು ಕಾಲುಗಳಲ್ಲಿ ಶಕ್ತಿ ಇರಲಿಲ್ಲ, ಕೈಗಳು ದುರ್ಬಲವಾಗಿದ್ದವು. ತೆವಳಿಕೊಂಡು ಸರಿದಾಡುತ್ತಿದ್ದ ಇಂಥ ಅಂಗವಿಕಲನೊಬ್ಬ ಅಂಗಡಿ ನಡೆಸುತ್ತಿದ್ದದ್ದು ವಿಶೇಷವಾಗಿತ್ತು. ಈ ಅಂಗಡಿಯಲ್ಲಿ ಬೀಡಿ, ಸಿಗರೇಟ್, ನಶ್ಯ ಇತ್ಯಾದಿಗಳನ್ನು ಮಾರುತ್ತಿರಲಿಲ್ಲ. ಅಂಗಡಿಗೆ ಅಗತ್ಯವಾದ ಸಾಮಾನುಗಳನ್ನು ಟ್ರಸ್ಟಿನ ಕಾರ್ಯಕರ್ತರು ಮೈಸೂರಿನಿಂದ ತಂದು ಕೊಡುತ್ತಿದ್ದರು. ವ್ಯಾಪಾರ ಮಾಡಲು ಹನುಮಂತನಿಗೆ ಅನುಕೂಲವಾಗುವಂತೆ ಪದಾರ್ಥಗಳನ್ನು ಜೋಡಿಸಿ ಇಡಲಾಗುತ್ತಿತ್ತು. ಅಂಗಡಿಯಲ್ಲಿಯ ವ್ಯವಸ್ಥೆ ಅವನ ಶಾರೀರಿಕ ದೌರ್ಬಲ್ಯಕ್ಕೆ ಅನುಗುಣವಾಗಿ ಮಾಡಿಕೊಡಲಾಗಿತ್ತು. ಹೀಗಿದ್ದರೂ ಕೆಲವೊಂದು ಸಲ ವ್ಯಾಪಾರ ಮಾಡುವುದಕ್ಕೆ ಬೇರೆಯವರ ಸಹಾಯ ಬೇಕಾಗುತ್ತಿತ್ತು.

ಅನೇಕ ಸಲ ಗಿರಾಕಿಗಳೇ ಹಣಕೊಟ್ಟು ತಾವೇ ಕೈಯಾರೆ ತಮಗೆ ಬೇಕಾದ ಪದಾರ್ಥವನ್ನು ತೆಗೆದುಕೊಳ್ಳುತ್ತಿದ್ದರು. ಕ್ರಮೇಣ ನಮ್ಮ ಅಂಗಡಿ ಜನಪ್ರಿಯವಾಯಿತು. ಸೇವಾ ಚಟುವಟಿಕೆಯನ್ನು ವಿಸ್ತರಿಸಲೆಂದು ಇದಕ್ಕೆ ನ್ಯಾಯಬೆಲೆ ಅಂಗಡಿಯನ್ನಾಗಿ ಮಾನ್ಯತೆ ದೊರಕಿಸಿ ಸುತ್ತಲಿನ ಹಳ್ಳಿಗರಿಗೆ ಪಡಿತರವನ್ನು ಹಂಚಲಾಗುತ್ತಿತ್ತು. ಮುಂದೆ ಕೆಲ ದಿನಗಳಲ್ಲಿ ಸೀಮೆಣ್ಣೆ ಏಜನ್ಸಿಯನ್ನು ಪಡೆಯಲಾಯಿತು. ಇದರಿಂದಾಗಿ ಸುತ್ತಲಿನ ರೈತರಿಗೆ ತುಂಬಾ ಅನುಕೂಲವಾಯಿತು. ಸರ್ಕಾರ ಕೊಡುತ್ತಿದ್ದ ಬಟ್ಟೆಯನ್ನು ಸಹ ಈ ಅಂಗಡಿ ಮೂಲಕ ಹಂಚಲಾಗುತ್ತಿತ್ತು. ಆದರೆ ಹನುಮಂತನ ಒಳ್ಳೆಯತನ ಮತ್ತು ಶಾರೀರಿಕ ದೌರ್ಬಲ್ಯಗಳೇ ಕ್ರಮೇಣ ಅಂಗಡಿ ಮುಚ್ಚುವುದಕ್ಕೆ ಕಾರಣವಾದವು. ಏಕೆಂದರೆ ಹಳ್ಳಿಗರು ಹನುಮಂತನನ್ನು ನಂಬಿಸಿ ಪದಾರ್ಥಗಳನ್ನು ಸಾಲವಾಗಿ ತೆಗೆದುಕೊಂಡು ಹೋಗುವುದಕ್ಕೆ ಪ್ರಾರಂಭಿಸಿದ್ದರು. ಹನುಮಂತನಿಗೆ ಓಡಾಡಲು ಸಾಧ್ಯವಿಲ್ಲದ್ದರಿಂದ ಕೇವಲ ಒಳ್ಳೆಯ ಮಾತುಗಳಿಂದ ಸಾಲವನ್ನು ವಸೂಲಿ ಮಾಡಬೇಕಾಗಿತ್ತು. ಇದು ಬಹಳ ಕಾಲ ನಡೆಯುವಂತೆ ಇರಲಿಲ್ಲ. ಯಾವಾಗ ಸಾಲ ಹೆಚ್ಚಾಗಿ ಆದಾಯ ಇಲ್ಲದಂತಾಯಿತೊ ಆಗ ನಮ್ಮಂಗಡಿಯನ್ನು ಶಾಶ್ವತವಾಗಿ ಮುಚ್ಚಬೇಕಾಯಿತು.

ಹೀಗೆ ಟ್ರಸ್ಟಿನ ಹಲವಾರು ಸಮಾಜೋಪಯೋಗಿ ಸೇವಾ ಕಾರ್ಯಗಳು ಅದರ ವ್ಯಾಪ್ತಿಗೆ ಬರದ ಸ್ವಾರ್ಥಪೂರಿತ ಶಕ್ತಿಗಳಿಂದ ನಿಲುಗಡೆಗೆ ಬಂದವು.

* * *

ಸನ್ಮಾನ್ಯರಿಂದ...

ಜನಪದ ವಿಚಾರ ಮಾಸಪತ್ರಿಕೆಯು ಹೆಸರಿಗೆ ತಕ್ಕಂತೆ ತುಂಬ ವೈಚಾರಿಕವಾಗಿ ಮೂಡಿ ಬರುತ್ತಿದೆ. ಮುಂದಿನ ತಿಂಗಳ ಪತ್ರಿಕೆ ಬರುವವರೆಗೆ ಕೆಲವು ಲೇಖನಗಳನ್ನು ಸಾಕಷ್ಟು ಬಾರಿ ಓದಿರುತ್ತೇನೆ. ಗಾಂಧೀಯವರ ವಿಚಾರಧಾರೆ ಸುಂದರವಾಗಿದೆ. ಇದು ಮಾನವನ ಸಾಮಾಜಿಕ ಹಾಗು ಪರಿಸರ ಪ್ರಜ್ಞೆಯನ್ನು ಹೆಚ್ಚಿಸುವಂತಿರುತ್ತದೆ.

– ***ಪದ್ಮಾವತಮ್ಮ***, ಮೈಸೂರು

ಸರ್ವೋದಯ ಆಂದೋಲನದ ಮುನ್ನಡೆ

ಗಾಂಧೀಜಿಯವರು ಸರ್ವೋದಯ ಸಮಾಜ ರಚನೆಗಾಗಿ ೧೮ ಪ್ರಕಾರದ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಅವುಗಳಲ್ಲಿ ಮದ್ಯಪಾನ ನಿಷೇಧ ಮತ್ತು ಜೀವನ ಶಿಕ್ಷಣ ಎರಡು ಮಹತ್ವದ ಕಾರ್ಯಕ್ರಮಗಳು. ಅದಕ್ಕಾಗಿ ಅಖಿಲ ಭಾರತ ಪಾನ ನಿಷೇಧ ಪರಿಷತ್ ಮತ್ತು ರಾಷ್ಟ್ರೀಯ ಜೀವನ ಶಿಕ್ಷಣ ಸಮಿತಿ ಕೆಲಸಮಾಡುತ್ತಿವೆ. ಕಳೆದ ನವೆಂಬರ್ ೩,೪,೫ ದಿನಾಂಕಗಳಲ್ಲಿ ಹರಿಯಾಣ ರಾಜ್ಯದ ಕುರುಕ್ಷೇತ್ರದಲ್ಲಿ ೨೫ನೇ ಅಖಿಲ ಭಾರತ ಕಾರ್ಯಕರ್ತರ ಸಮ್ಮೇಳನ ನಡೆಯಿತು. ಸ್ವಾತಂತ್ರ್ಯ ನಂತರ ಮದ್ಯಪಾನ ನಿಷೇಧದ ನೀತಿ ಉಪೇಕ್ಷಿತವಾಗುತ್ತಿದೆ. ಈ ಸಮ್ಮೇಳನದಲ್ಲಿ ಮದ್ಯಪಾನ ನಿಷೇಧಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಹಾಗೂ ಆ ಉದ್ದೇಶ್ಯಕ್ಕಾಗಿ ನಿಷ್ಠೆಯಿಂದ ದುಡಿಯುತ್ತಿರುವ ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ೧೩ ರಾಜ್ಯಗಳಿಂದ ೩೦೦ಜನ ಕಾರ್ಯಕರ್ತರು ಸೇರಿದ್ದರು. ಈ ಸಮ್ಮೇಳನದ ವರದಿ ಮತ್ತು ಸಮ್ಮೇಳನದಲ್ಲಿ ಕೈಗೊಳ್ಳಲಾದ ತೀರ್ಮಾನಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸಲಾಗುವುದು.

* * *

ಜೀವನಶಿಕ್ಷಣದ ೭೫ನೇ ವರ್ಷದ ಮಹೋತ್ಸವದ ಸಂದರ್ಭದಲ್ಲಿ ರಾಷ್ಟ್ರೀಯ ನಯೀತಾಲೀಂ ಸಮ್ಮೇಳನ ನವೆಂಬರ್ ೧೭,೧೮ ರಂದು ಸೇವಾಗ್ರಾಮದಲ್ಲಿ ನಡೆಯಿತು. ೭೫ ವರ್ಷದ ಹಿಂದೆ ಗಾಂಧೀಯವರು ೧೯೩೭ ಅಕ್ಟೋಬರ್‌ನಲ್ಲಿ ನಯೀತಾಲೀಂ ಎಂಬ ಹೆಸರಿನಲ್ಲಿ ಒಂದು ಜೀವನದರ್ಶನ ಮತ್ತು ಶಿಕ್ಷಣ ಪದ್ಧತಿಯನ್ನು ದೇಶದ ಮುಂದೆ ಇಟ್ಟಿದ್ದರು. ಅದರ ಮೂಲಕ ಅಹಿಂಸಕ, ಸಮತಾ ಮೂಲಕ ನ್ಯಾಯಧಿಷ್ಟವಾದ ಸಮಾಜ ನಿರ್ಮಾಣದ ಉದ್ದೇಶ ಇಟ್ಟಿದ್ದರು. ಈ ಅಭೂತಪೂರ್ವ ಐತಿಹಾಸಿಕ ಘಟನೆಯ ಅಮೃತ ಮಹೋತ್ಸವದ ವರ್ಷ ಇದು. ಈ ಸಮ್ಮೇಳನವನ್ನು ಶ್ರೀ ನಾರಾಯಣ ದೇಸಾಯಿ ಉದ್ಘಾಟಿಸಿದರು. ಆಧ್ಯಕ್ಷತೆಯನ್ನು ಮಾಜಿ ನ್ಯಾಯಾಧೀಶ ಚಂದ್ರಶೇಖರ್ ಧರ್ಮಾಧಿಕಾರಿ ವಹಿಸಿದ್ದರು. ಇಂದಿನ ಆರ್ಥಿಕ, ಸಾಮಾಜಿಕ ಮತ್ತು ರಾಜನ್ಯೆತಿಕ ಸಂದರ್ಭದಲ್ಲಿ ನಯೀತಾಲೀಂನ ಸ್ವರೂಪ ಹೇಗಿರಬೇಕೆಂಬುದರ ಬಗ್ಗೆ ಗುಜರಾತ್ ವಿದ್ಯಾಪೀಠದ ಕುಲಪತಿ ಡಾ॥ಸುದರ್ಶನ್ ಅಯ್ಯಂಗಾರ್ ಮಾತನಾಡಿದರು. ನಯೀತಾಲೀಂ ಮತ್ತು ಶಿಕ್ಷಣಶಾಸ್ತ್ರದ ಸವಾಲುಗಳು ಎಂಬ ವಿಷಯವನ್ನು ಕುರಿತು ಎನ್.ಸಿ.ಆರ್.ಟಿ.ಯ ಮಾಜಿ ಸಂಚಾಲಕ ಪ್ರೋ.ಕೃಷ್ಣಕುಮಾರ್ ಮಾತನಾಡಿದರು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಸಂದರ್ಭದಲ್ಲಿ ನಯೀತಾಲೀಂನ ಪುನರ್‌ಶೋಧ ಎಂಬ ವಿಷಯವಾಗಿ ಮಹಾರಾಷ್ಟ್ರ ನಾಲೆಜ್ ಕಾರ್ಪೊರೇಷನ್,ಪುಣೆ ಇವರು ಮಾತನಾಡಿದರು. ಸಮ್ಮೇಳನದ ಕಾರ್ಯಕಲಾಪಗಳ ಹೆಚ್ಚಿನ ಮಾಹಿತಿಯನ್ನು ಮತ್ತು ಕೈಗೊಳ್ಳಲಾದ ತೀರ್ಮಾನಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸಲಾಗುವುದು.

ಅಖಿಲ ಭಾರತ ಸರ್ವೋದಯ ಮಂಡಲವು (ಸರ್ವ ಸೇವಾ ಸಂಘ) ಪ್ರತಿವರ್ಷದಂತೆ ೨೦೧೩ರ ಸರ್ವೋದಯ ಡೈರಿಯನ್ನು ಪ್ರಕಟಿಸಿದೆ. ಈ ದಿನಚರಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿದೆ. ಒಂದು ಡೈರಿಯ ಬೆಲೆ ಒಂದು ನೂರು ರೂಪಾಯಿ. ಇದು ಡಬಲ್ ಡೆಮಿ ಅಳತೆಯದ್ದಾಗಿದೆ. ದಿನಚರಿಯ ಕಾಗದ, ಮುದ್ರಣ ಮತ್ತು ಬೈಂಡಿಂಗ್ ದರದಲ್ಲಿ ಅತ್ಯಧಿಕ ವೃದ್ಧಿಯಾಗಿದ್ದರೂ ಕೂಡ ದಿನಚರಿಯ ಬೆಲೆಯನ್ನು ನೂರು ರೂಪಾಯಿ ಇಡಲಾಗಿದೆ. 'ಸರ್ವೋದಯ ದಿನಚರಿ ೨೦೧೩' ದೈನಂದಿನ ದಿನಚರಿಯ ಪುಟದಲ್ಲಿ ಗಾಂಧೀಜಿಯ ಜ್ಞಾನವರ್ಧಕ ಹಾಗೂ ಜೀವನೋಪಯೋಗಿ ಸೂಕ್ತಿಗಳನ್ನು ಇಂಗ್ಲಿಷ್ ಹಾಗು ಹಿಂದಿಯಲ್ಲಿ ಕೊಡಲಾಗಿದೆ. ದಿನಚರಿಯ ಆವರಣ ೩೬೫ ದಿನಗಳಿಗಾಗಿ ೩೬೫ ಪುಟವನ್ನು, ಪ್ರತಿ ತಿಂಗಳ ಪ್ರಾರಂಭದಲ್ಲಿ ಗಾಂಧೀಜಿಯವರ ಅತ್ಯಾಕರ್ಷಕ ಹಾಗೂ ಪ್ರೇರಣಾದಾಯಿ ೧೨ ಚಿತ್ರಗಳನ್ನು, ಡೈರಿ ಇಟ್ಟುಕೊಳ್ಳುವವರ ಅನುಕೂಲ ಗಮನಿಸಿ ಪ್ರತಿಯೊಂದು ತಿಂಗಳ ಬೇರೆ ಬೇರೆ ಪ್ಲಾನರ್ ಕೊಡಲಾಗಿದೆ. ಅಕ್ಟೋಬರ್ ೨ ಪವಿತ್ರದಿನದಂದು 'ಸರ್ವೋದಯ ದಿನಚರಿ ೨೦೧೩'ರ ಮಾರಾಟ ಶುರುವಾಗಿದೆ. ದಿನಚರಿಯನ್ನು ಬಯಸುವವರು ಹೆಚ್ಚಿನ ಮಾಹಿತಿಗಾಗಿ,

ಸರ್ವ ಸೇವಾ ಸಂಘ ಪ್ರಕಾಶನ
ರಾಜ್‌ಘಾಟ್, ವಾರಣಾಸಿ – ೨೨೧೦೦೧
ದೂರವಾಣಿ – ೦೫೪೨ / ೨೪೪೦೩೮೫
ಮೊಬೈಲ್ – ೦೯೪೫೫೩೦೪೭೦೯೭

ದಿನಚರಿಯನ್ನು ವಿ.ಪಿ.ಪಿ. ಮೂಲಕವೂ ತರಿಸಿಕೊಳ್ಳಬಹುದು.

* * *

ಸರ್ವ ಸೇವಾ ಸಂಘದ ಮುಂದಿನ ಕಾರ್ಯ ಸಮಿತಿಯ ಸಭೆ ೨೦೧೨ ಡಿಸೆಂಬರ್ ೧೨,೧೩ ರಂದು ದೆಹಲಿಯಲ್ಲಿರುವ ಹರಿಜನ ಸೇವಕ ಸಂಘದ ಆವರಣದಲ್ಲಿ ನಡೆಯಲಿದೆ. ರಾಜಸ್ಥಾನದ ಕೋಟಾದಲ್ಲಿ ನಡೆದಿದ್ದ ಸಭೆಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕೆಲ ಕಾರ್ಯಕ್ರಮ ಮಾಡಬೇಕು ಮತ್ತು ಅವುಗಳಲ್ಲಿ ಎಲ್ಲ ಪ್ರದೇಶದ ಸರ್ವೋದಯ ಮಂಡಲಿಗಳು ಭಾಗವಹಿಸಬೇಕು ಎಂದು ತೀರ್ಮಾನವಾಗಿತ್ತು. ಅಂಥ ಒಂದು ಕಾರ್ಯಕ್ರಮವಾಗಿ ನೀರು, ಕಾಡು, ಭೂಮಿ ಸ್ವರಾಜ್ಯ ಆಂದೋಲನದ ಚಳುವಳಿಯನ್ನು ನವೆಂಬರ್ ೩೦ರಿಂದ ಡಿಸೆಂಬರ್ ೯ರ ವರೆಗೆ ಡೆಹರಾಡೂನಿಂದ ದೆಹಲಿಯ ರಾಜಘಾಟ್‌ವರೆಗೆ ನಡೆಸಲಾಗುವುದು. ಅನಂತರ ಎರಡು ದಿವಸದ ಧ್ಯಾನಾಕರ್ಷಣ ಉಪವಾಸ ಸತ್ಯಾಗ್ರಹ ಕೂಡ ರಾಜಘಾಟ್‌ನಲ್ಲಿ ನಡೆಯುವುದು. ಈ ಸಬಂಧವಾಗಿ ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿಯೊಂದು ಪ್ರದೇಶದಲ್ಲಿ ಕಾರ್ಯಕ್ರಮ ಏರ್ಪಡಿಸಬೇಕೆಂದು ಸರ್ವಸೇವಾ ಸಂಘ ಸೂಚಿಸಿದೆ.

* * *

ಖಾದಿ ವಿಚಾರ

ಗಾಂಧೀಜಿಯವರ ದಿರಿಸು ಮತ್ತು ಸಂದೇಶ

ಗಾಂಧೀಜಿಯವರ ಖಾದಿ ದಿರಿಸಿನ ಸ್ವರೂಪ ಮತ್ತು ಅದರ ಪ್ರಭಾವಳಿ ಖಾದಿ ಆಂದೋಲನದ ಒಂದು ಮಹತ್ವಪೂರ್ಣ ಮತ್ತು ಉಲ್ಲೇಖನೀಯ ಹೆಜ್ಜೆ. ಚಂಪಾರಣದ ಸತ್ಯಾಗ್ರಹದಲ್ಲಿ ಗಾಂಧೀಜಿ ಪೂರ್ಣ ಖಾದಿಮಯ ಸ್ವರೂಪದಲ್ಲಿ ಕಂಡುಬರುತ್ತಾರೆ. ಇದರ ಪ್ರಭಾವ ರೈತರ ಮೇಲೆ ಬಿದ್ದಿತ್ತು. ಅವರ ಈ ಸ್ವರೂಪ ಯಾವ ರೀತಿ ಭಾರತೀಯ ಜನಮಾನಸದ ಮುಂದೆ ಬರುತ್ತದೆಂಬುದನ್ನು ತಿಳಿಯಬೇಕು. ಗಾಂಧೀಜಿಯವರ ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಮೋಹನ್‌ದಾಸ್ ಕರಮಚಂದ್ ಗಾಂಧೀಯಿಂದ ಮಹಾತ್ಮ ಆಗುವ ಕಥೆ. ೧೮೮೮ರಲ್ಲಿ ಅವರು ಓದುವುದಕ್ಕಾಗಿ ವಿದೇಶಕ್ಕೆ ಹೋದಾಗ ಪೂರ್ಣ ಇಂಗ್ಲೀಷ್ ವೇಷದಲ್ಲಿ ಕಾಣಸಿಗುತ್ತಾರೆ. ಅಲ್ಲಿಂದ ಹಿಂದಿರುಗಿ ಬಂದ ನಂತರ ಅವರು ದಕ್ಷಿಣ ಆಫ್ರಿಕಾಕ್ಕೆ ಹೋದಾಗ ಕೂಡ ಸ್ವತಃ ಅಲ್ಲದೆ ಕಸ್ತೂರ ಬಾ ಕೂಡ ಪಾರ್ಸಿ ವೇಷದಲ್ಲಿ ಇರುತ್ತಾರೆ. ಮಕ್ಕಳು ಕೂಡ ಇಂಗ್ಲಿಷ್ ಬಟ್ಟೆ ಧರಿಸಿರುತ್ತಾರೆ. ಆದರೆ ದಕ್ಷಿಣ ಆಫ್ರಿಕಾದ ಸಂಘರ್ಷವು ಅವರಿಗೆ ಕಡಿಮೆ ಉದ್ದನೆಯ ಕುರ್ತಾ ಮತ್ತು ಲುಂಗಿ ಧರಿಸುವ ಪ್ರೇರಣೆ ಕೊಟ್ಟಿತು. ಅವರು ಕೂಲಿಯಾಳುಗಳ ದಿರಿಸಿನಲ್ಲಿ ಇರಹತ್ತಿದರು. ದಕ್ಷಿಣ ಆಫ್ರಿಕಾದ ಸಂಘರ್ಷದ ನಂತರ ಅವರು ಹಡಗಿನಲ್ಲಿ ಭಾರತಕ್ಕೆ ವಾಪಸ್ ಬರುವಾಗ ಮಗನ್‌ಲಾಲರಿಗೆ "ನನ್ನ ಎಲ್ಲ ಮಕ್ಕಳು ಭಾರತೀಯ ವೇಷದಲ್ಲಿಯೇ ಇರಬೇಕು" ಅವರು ಲುಂಗಿ, ಶರ್ಟ್ ಮತ್ತು ಟೋಪಿ ಧರಿಸಬೇಕು. ನೀನು ಉದ್ದನೆಯ ಕೋಟ್ ಧರಿಸಬೇಕು ಮತ್ತು ನಿಲುವಂಗಿ ಇರಬೇಕು. ಮಕ್ಕಳು ಚಪ್ಪಲಿ ಧರಿಸುವ ಯಾವ ಅಗತ್ಯವಿಲ್ಲವೆಂದು ನನಗನಿಸುತ್ತದೆ ಮತ್ತು ಅವರು ಕೂಡ ಧೋತಿ ಧರಿಸಬೇಕು ಮತ್ತು ಸ್ಟೀಮರ್‌ನಲ್ಲಿಯೇ ಚೂರಿ ಮತ್ತು ಮುಳ್ಳಿನ ಚಮಚದಿಂದ ತಿನ್ನುವುದನ್ನು ಬಿಟ್ಟು ಬಲಗೈಯಿಂದ ತಿನ್ನಬೇಕು ಮತ್ತು ನೆಲದ ಮೇಲೆ ಕಾಲು ಮಡಚಿ ಕುಳಿತು ತಿನ್ನಬೇಕು ಎಂದು ಹೇಳಿದರು. ಗಾಂಧೀಜಿ ದಕ್ಷಿಣ ಆಫ್ರಿಕಾದ ಸಂಘರ್ಷದಲ್ಲಿ ಪ್ರಥಮ ಶ್ರೇಣಿಯ ನಾಯಕರಾಗಿದ್ದರು. ಈ ಸಂಘರ್ಷದ ಪರಿಣಾಮವಾಗಿ ಅವರು ಭಾರತೀಯ ಬಟ್ಟೆಯ ಕಡೆಗೆ ತಿರುಗುತ್ತಾರೆ.

೧೯೧೭ರಲ್ಲಿ ಚಂಪಾರಣ ಆಂದೋಲನದ ಪ್ರಾರಂಭದ ಸಮಯ ಅವರು ಚಂಪಾರಣದಲ್ಲಿ ಇಂಗ್ಲೀಷರ ಶೋಷಣೆ ಮತ್ತು ದಮನದ ಇತಿಹಾಸ ಕೆದಕಿ ತೆಗೆಯುತ್ತಿದ್ದಾಗ ಕೂಡ ಅಲ್ಲಿಯ ನೀಲಿ ಬೆಳೆಗಾರರಿಗೆ ಗಾಂಧೀಯ ಈ ರೂಪ ತಮ್ಮವರೆಂಬ ಭಾವನೆ ಅವರಲ್ಲಿ ತುಂಬಿದೆ ಎಂದು ಅನಿಸುತ್ತದೆ. ಮಾಹಾತ್ಮತೆಯಿಂದ ತುಂಬಿದಂತೆ ಕಾಣುತ್ತಾರೆ. ಆದರೆ ಇಂಗ್ಲೀಷ್ ಅಧಿಕಾರಿಗಳಂತೂ ಅವರ ಈ ದಿರಿಸಿನ ತಮಾಷೆ ಮಾಡುತ್ತಾರೆ. ಗಾಂಧೀಜಿಯವರು ನೀಲಿ ಬೆಳೆಗಾರರೊಂದಿಗೆ ಆಗಿರುವ ಅತ್ಯಾಚಾರಗಳ ಶೋಧನೆ ಮಾಡಿದರು ಮತ್ತು ಇಂಗ್ಲಿಷ್‌ರ ಆಡಳಿತದ ಅಧಿಕಾರಿಗಳೊಂದಿಗೆ ತರ್ಕ-ವಿತರ್ಕ ಮಾಡಿದುದುರ ಕಾರಣದಿಂದಾಗಿ

ಇಂಗ್ಲೀಷರು ನೀಲಿ ಬೆಳೆಗಾರರ ಮೇಲೆ ಘೋರ ಅನ್ಯಾಯ ಮತ್ತು ಶೋಷಣೆ ಮಾಡಿದ್ದಾರೆಂಬುದನ್ನು ಸಿದ್ಧ ಪಡಿಸಿದರು. ಈ ವಿಷಯದ ಕಾರಣದಿಂದಾಗಿಯೇ ಇಂಗ್ಲೀಷರ ಆಳ್ವಿಕೆಯ ಸಮರ್ಥಕರು ಮತ್ತು ಅಧಿಕಾರಿಗಳು ಗಾಂಧೀಜಿಯ ಖಾದಿ ಪೋಷಾಕಿನ ತಮಾಷೆ ಮಾಡುತ್ತಾರೆ. ಇದಕ್ಕೆ ಗಾಂಧೀಜಿ ಈ ರೀತಿ ಉತ್ತರ ಕೊಟ್ಟರು. "ನನ್ನ ದಿರಿಸು ರಾಷ್ಟ್ರೀಯ ದಿರಿಸಾಗಿದೆ. ಅದು ಭಾರತೀಯ ವಾತಾವರಣಕ್ಕೆ ಅನುಕೂಲವಿದೆ. ಇದರ ಸರಳತೆ, ಇದರ ಕಲೆ ಮತ್ತು ಅಗ್ಗದ ದರ ಪ್ರಕೃತಿಯ ಶೋಷಣೆ ಆಗದಂತೆ ತಡೆಯುತ್ತದೆ. ಬದಲಿಗೆ ವಿದೇಶಿ ದಿರಿಸು ನಮ್ಮ ಅವನತಿ, ಅಪಮಾನ ಮತ್ತು ದುರ್ಬಲತೆಯನ್ನು ಜ್ಞಾಪಿಸುತ್ತದೆ" ಎಂದು ಹೇಳಿದರು. ಈ ಉತ್ತರ ಖಾದಿ ಆಂದೋಲನದ ಹಿರಿಮೆಯನ್ನು ಹೆಚ್ಚಿಸುವಲ್ಲಿ ಮಹತ್ವಪೂರ್ಣವಿದೆ.

* * *

ಸ್ವಾವಲಂಬಿ ಖಾದಿ ಮತ್ತು ಅ–ಸರ್ಕಾರಿ ಖಾದಿ ಕಾರ್ಯಕ್ಕಾಗಿ ಸರ್ವಸೇವಾ ಸಂಘದ 'ಖಾದಿ ಸಮಿತಿ' ಕೆಲಸ ಮಾಡುತ್ತದೆ. ಸರ್ವ ಸೇವಾ ಸಂಘದ ಸಮಿತಿಗೆ ಮಾಜಿ ಅಧ್ಯಕ್ಷ ಡಾ॥ಸುಗುಣ್‌ಭರಂಟ್ ಮತ್ತು ಈಗಿನ ಅಧ್ಯಕ್ಷೆ ರಾಧಾ ಬೆಹನ್‌ರ ಸೂಕ್ತ ಮಾರ್ಗದರ್ಶನ ಸಿಗುತ್ತಿದೆ. ಗಾಂಧೀಸ್ಮೃತಿ ಮತ್ತು ಗಾಂಧೀದರ್ಶನ ಸಮಿತಿ ಇವುಗಳ ಸಹಾಯದಿಂದ ಫೆಬ್ರವರಿ ೨೦೧೧ರಲ್ಲಿ ರಾಜಘಾಟ್ ಬಾಪು ಸಮಾಧಿ ಸ್ಥಳದ ಪರಿಸರದಲ್ಲಿ ಅಖಿಲ ಭಾರತ ಚರಕಾ ಸಮ್ಮೇಳನ ಫೆಬ್ರವರಿ೨೦೧೨ಕ್ಕೆ ಅಖಿಲ ಭಾರತ ನೇಕಾರರ ಸಮ್ಮೇಳನ ಯಶಸ್ವಿಯಾಗಿ ನಡೆದವು. ಇವುಗಳ ವ್ಯವಸ್ಥೆಯಲ್ಲಿ ಸರ್ವ ಸೇವಾ ಸಂಘದ ಖಾದಿ ಸಮಿತಿಯ ಪಾತ್ರ ಮುಖ್ಯವಾಗಿತ್ತು. ಖಾದಿ ಸಂಸ್ಥೆಗಳ ಮುಂದೆ ಋಣಮುಕ್ತಿಯ ಪ್ರಶ್ನೆ ಮುಖ್ಯವಾಗಿತ್ತು. ಭಾರತ ಸರ್ಕಾರದ ಮುಂದೆ ಋಣಮುಕ್ತಿಯ ಬೇಡಿಕೆಯನ್ನು ಇಟ್ಟಿತ್ತು. ಅದೃಷ್ಟವಶಾತ್ ಖಾದಿ ಗ್ರಾಮೋದ್ಯೋಗ ಆಯೋಗ ಕೂಡ ಋಣಮುಕ್ತಿಯ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ. ನಾವೆಲ್ಲರೂ ಗಾಂಧೀಯವರಿಂದ ಪ್ರೇರಣೆಗೊಂಡ ಖಾದಿಯ ಕೆಲಸವನ್ನು ಮಾಡಬೇಕಿದೆ. ಆದ್ದರಿಂದ ಸ್ವಾವಲಂಬಿ ಮತ್ತು ಅ–ಸರ್ಕಾರಿ ಜನಾಧಾರಿತ ಖಾದಿಗಾಗಿ ನಮ್ಮ ನಮ್ಮ ಪ್ರದೇಶದ ಹಂತದಲ್ಲಿ ಸಮ್ಮೇಳವಜನ್ನು ಆಯೋಜಿಸಬೇಕಾಗಿದೆ. ಸ್ವಾವಲಂಬಿ ಮತ್ತು ಜನಾಧಾರಿತವಾಗಿ ಕಾರ್ಯ ಮಾಡುವ ವ್ಯಕ್ತಿ ಮತ್ತು ಸಂಸ್ಥೆ ಸರ್ವ ಸೇವಾ ಸಂಘ ಖಾದಿ ಸಮಿತಿಯ ಪ್ರಮಾಣ ಪತ್ರ ಕೊಡುವುದು ಪ್ರದೇಶ ಸರ್ವೋದಯ ಮಂಡಲ. ಮತ್ತು ಈ ವಿಚಾರಕ್ಕೆ ಸಮ್ಮತಿ ಸೂಚಿಸುವ ಖಾದಿ ಮತ್ತು ಗಾಂಧೀ ವಿಚಾರ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಈ ಐತಿಹಾಸಿಕ ಕಾರ್ಯಕ್ಕಾಗಿ ಚಲನಶೀಲರಾಗಬೇಕಿದೆ. ಪ್ರಾದೇಶಿಕ ಮಟ್ಟದಲ್ಲಿ ನೀವು ಖಾದಿ ಸಮ್ಮೇಳನವನ್ನು ಆಯೋಜಿಸಿದರೆ ಸರ್ವ ಸೇವಾ ಸಂಘದ ಪದಾಧಿಕಾರಿಗಳು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುವರು. ನಿಮ್ಮಿಂದ ಏನು ಸಾಧ್ಯವೋ ದಯವಿಟ್ಟು ಮಾಡಿ ಎಂದು ಖಾದಿ ಸಮಿತಿಯ ಸಂಯೋಜಕರಾದ ಜಯಂತ್ ಮಠಕರ್‌ರವರು ವಿನಂತಿಸಿದ್ದಾರೆ. ಕರ್ನಾಟಕದ ಯಾವುದಾದರೂ ಸಂಸ್ಥೆ ಅಥವಾ ವ್ಯಕ್ತಿ ಈ ವಿಷಯವಾಗಿ ಸಭೆಯನ್ನು ಆಯೋಜಿಸುವುದಾದರೆ,

ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲ, ಮೇಲುಕೋಟೆ ಇವರನ್ನು ಸಂಪರ್ಕಿಸಬೇಕಾಗಿ ವಿನಂತಿ. ದೂರವಾಣಿ : ೦೮೨೩೬ – ೨೯೮೫೪/೩೧೬೩೪೪

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಬಿ.ಎಂ.ರವಿ
ಶ್ರೀ ಎಚ್.ಎಸ್.ಸುರೇಶ್
ಶ್ರಿ ಜೀರಿಗೆ ಲೋಕೇಶ್
ಶ್ರೀ ಆರ್.ಆರ್.ಆನವಟ್ಟಿ (ಆಜೀವ ಚಂದಾದಾರರು)
ಶ್ರೀಮತಿ ಸರಸ್ವತಮ್ಮ – ಬೆಂಗಳೂರು
ಶ್ರೀಮತಿ ನಾಗವೇಣಿ ಎಸ್.ವಿ – ಮಂಡ್ಯ
ಪ್ರೊ|| ಲಿಂಗಣ್ಣ – ಮೈಸೂರು
ಶ್ರೀ ಶಿವನಂಜೇಗೌಡ – ಮೇಲುಕೋಟೆ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.